ಅಧ್ಯಯನಾಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ನಿಬಂಧ

ಡಾ.ಎಸ್.ಎಲ್.ಭೈರಪ್ಪನವರ 'ಜಲಪಾತ' ಕಾದಂಬರಿಯಲ್ಲಿ ಕಂಡು ಬರುವ ಮಧ್ಯಮ ವರ್ಗದ ಚಿತ್ರಣ- ಒಂದು ಅಧ್ಯಯನ

ನೋಂದಣಿ ಸಂಖ್ಯೆ: 140701030080

2014–2015

ಅಧ್ಯಯನಾಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ನಿಬಂಧ

ಡಾ.ಎಸ್.ಎಲ್.ಭೈರಪ್ಪನವರ 'ಜಲಪಾತ' ಕಾದಂಬರಿಯಲ್ಲಿ ಕಂಡು ಬರುವ ಮಧ್ಯಮ ವರ್ಗದ ಚಿತ್ರಣ– ಒಂದು ಅಧ್ಯಯನ

ನೋಂದಣಿ ಸಂಖ್ಯೆ: 140701030080

ವಿದ್ಯಾರ್ಥಿ ಹೆಸರು
ಜಯಶೀಲ ಹೆಚ್. ಎಸ್

ಮಾರ್ಗದರ್ಶಕರ ಹೆಸರು
ಡಾ. ಬಿ. ಸಿ. ರಾಜಕುಮಾರ

2014–2015

ಅಧ್ಯಯನಾಂಗ

ಹಂಪಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸುತ್ತಿರುವ
ಎಂ.ಫಿಲ್. ಪದವಿಯ ನಿಬಂಧ

ಡಾ.ಎಸ್.ಎಲ್.ಭೈರಪ್ಪನವರ 'ಜಲಪಾತ' ಕಾದಂಬರಿಯಲ್ಲಿ ಕಂಡು ಬರುವ ಮಧ್ಯಮ ವರ್ಗದ ಚಿತ್ರಣ– ಒಂದು ಅಧ್ಯಯನ

ನೋಂದಣಿ ಸಂಖ್ಯೆ: 140701030080

ವಿದ್ಯಾರ್ಥಿ ಹೆಸರು
ಜಯಶೀಲ ಹೆಚ್. ಎಸ್

ಮಾರ್ಗದರ್ಶಕರ ಹೆಸರು
ಡಾ. ಬಿ. ಸಿ. ರಾಜಕುಮಾರ

2014–2015

ಪರಿವಿಡಿ

ಅಧ್ಯಾಯ 1

ಜಲಪಾತ ಕಾದಂಬರಿಯಲ್ಲಿ ಕಂಡುಬರುವ ಮಧ್ಯಮ ವರ್ಗದ ಚಿತ್ರಣ: ಒಂದು ಅಧ್ಯಯನ

ಅಧ್ಯಯನದ ಉದ್ದೇಶ ಮತ್ತು ವ್ಯಾಪ್ತಿ:

ಕನ್ನಡ ಸಾಹಿತ್ಯಕ್ಕೆ ಸುಮಾರು ಎರಡು ಸಾವಿರ ವರ್ಷಗಳ ಇತಿಹಾಸವಿದೆ. ಸೊಗಸಾದ ಕನ್ನಡ ಭಾಷೆಗೆ ಎಂಟು ಜ್ಞಾನಪೀಠ ಪ್ರಶಸ್ತಿ ದೊರಕಿದೆ. ಕನ್ನಡ ಸಾಹಿತ್ಯ ಬೆಳೆದು ಬಂದ ಹಾದಿ ಬಹು ವೈಶಿಷ್ಟ್ಯತೆಯಿಂದ ಕೂಡಿದೆ. ಭಾರತೀಯ ಸಾಹಿತ್ಯ ಭಾಗಗಳಲ್ಲಿ ಕನ್ನಡ ಸಾಹಿತ್ಯ ಇಂದಿಗೂ ಅಗ್ರ ಪಂಕ್ತಿಯಲ್ಲಿ ನಿಲ್ಲುವಂತಹ ಸಾಹಿತ್ಯ ಸಂಪತ್ತು ಸೃಷ್ಟಿಯಾಗುತ್ತಲೇ ಇದೆ. ಇನ್ನಿತರ ಭಾರತೀಯ ಸಾಹಿತ್ಯ ಪ್ರಕಾರಗಳು ಸಹ ಕನ್ನಡ ಸಾಹಿತ್ಯವನ್ನು ವಿಶೇಷ ದೃಷ್ಟಿಕೋನದಿಂದ ನೋಡುವುದನ್ನು ಗಮನಿಸಬಹುದು.

ಸುಮಾರು ಎರಡು ಸಾವಿರ ವರ್ಷಗಳ ಪೂರ್ವದಲ್ಲಿಯೇ ನಮ್ಮ ನಾಡಿನಲ್ಲಿ ಕನ್ನಡ ಇತ್ತು. ಆ ತರುವಾಯ ಕೆಲವು ಶತಮಾನಗಳು ಗತಿಸಿದ ಬಳಿಕ ಕೊರೆದಿರುವ ಕನ್ನಡ ಭಾಷೆಯ ಹಲವು ಶಿಲಾಲಿಪಿಗಳು ದೊರೆಯುತ್ತವೆ. ನಂತರದ ಕಾಲದಲ್ಲಿ ಹಲವು ಕವಿಗಳು ಕನ್ನಡದ್ದೇ ಕವಿತಾ ಗ್ರಂಥಗಳನ್ನು ರಚಿಸಿರಬೇಕು. ರಾಷ್ಟ್ರಕೂಟ ವಂಶದ ದೊರೆಯಾದ 'ನೃಪತುಂಗ'ನ ಆಶ್ರಯದಲ್ಲಿದ್ದ ಶ್ರೀವಿಜಯ ಕವಿಯು ರಚಿಸಿದ 'ಕವಿರಾಜಮಾರ್ಗ' ಗ್ರಂಥವೇ ಕನ್ನಡದಲ್ಲಿ ಮೊದಲನೆಯ ಗ್ರಂಥವಾಗಿದೆ. ಹತ್ತೊಂಬತ್ತನೆಯ ಶತಮಾನದ ಹೊತ್ತಿಗೆ ಹೊಸಗನ್ನಡ ಭಾಷೆ ಉದಯಿಸಿತ್ತು.

ಕನ್ನಡ ಭಾಷೆಯು ಭಾರತದ 22 ಅಧಿಕೃತ ಭಾಷೆಗಳಲ್ಲಿ ಒಂದಾಗಿದ್ದು, ಕರ್ನಾಟಕ ರಾಜ್ಯದ ಅಧಿಕೃತ ಭಾಷೆಯಾಗಿದೆ. ಅಕ್ಟೋಬರ್ 21, 2008 ರಂದು, ಭಾರತ ಸರ್ಕಾರ ಕನ್ನಡ ಭಾಷೆಗೆ 'ಶಾಸ್ತ್ರೀಯ ಸ್ಥಾನಮಾನ' ನೀಡಿ ಗೌರವಿಸಿದೆ. ಕನ್ನಡ ನುಡಿಯನ್ನು ಆಡುಮಾತಾಗಿ ಸುಮಾರು 2500 ವರ್ಷಗಳಿಂದ ಅಥವಾ ಮುಂಚಿನಿಂದಲೂ ಬಳಸಲಾಗುತ್ತಿದೆ. ಕನ್ನಡ ಲಿಪಿ ಮತ್ತು ಬರೆಯುವ ಪದ್ಧತಿ ಸುಮಾರು 1900 ವರ್ಷಗಳಿಂದಲೂ ಇದ್ದಿತೆಂದು ತಿಳಿದು ಬರುತ್ತದೆ.

ಕನ್ನಡ ಭಾಷೆಯ ಲಿಪಿಯು ಸುಮಾರು 1500 – 1600 ವರ್ಷಗಳಿಗಿಂತಲೂ ಪ್ರಾಚೀನವಾದದ್ದು. ಐದನೇ ಶತಮಾನದ ಹಲ್ಮಿಡಿ ಶಾಸನ (ಹಲ್ಮಿಡಿ ಶಾಸನವು ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕಿನ 'ಹಲ್ಮಿಡಿ' ಊರಿನಲ್ಲಿ ದೊರೆತಿದೆ. ಇದು ಕನ್ನಡದ ಮೊದಲ ಶಾಸನವಾಗಿದೆ. ಇದರ ಕಾಲ ಸುಮಾರು ಕ್ರಿ.ಶ.450. ಈಗ ಇದು ಮೈಸೂರಿ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿದೆ. ಹಲ್ಮಿಡಿ ಶಾಸನದ ಭಾಷೆಯನ್ನು ಪರಿಶೀಲಿಸಿದ ಬಿ.ಎಲ್.ರೈಸ್, ಆರ್.ನರಸಿಂಹಾಚಾರ್ಯ, ಡಿ.ಎಲ್.ನರಸಿಂಹಾಚಾರ್ಯ ಮೊದಲಾದವರು ಇದರಲ್ಲಿರುವ ಭಾಷೆಯನ್ನು ಪೂರ್ವದ ಹಳೆಗನ್ನಡ ಎಂದು ಗುರುತಿಸಿದ್ದಾರೆ. ಕಾಕುತ್ಸವರ್ಮನ ಈ ಶಾಸನದಲ್ಲಿ ಕದಂಬ, ಶೇಂದ್ರಕ ಮತ್ತು ಬಾಣರು ಕೂಡಿಕೊಂಡು ಪಲ್ಲವ, ಕೇಕೆಯರ ವಿರುದ್ಧ ತೀವ್ರವಾಗಿ ಹೋರಾಡಿ ಪಲ್ಲವರನ್ನು ಸೋಲಿಸಿದ ನಂತರ, ನರಿದಾವಿಳೆ ನಾಡಿನ ಅಧಿಕಾರಿಗಳಾದ ಮೃಗೇಶ ಮತ್ತು ನಾಗರು ಪಲ್ಮಿಡಿ ಮತ್ತು ಮೂರುವಳ್ಳಿ ಗ್ರಾಮಗಳನ್ನು ಬಾಳ್ಗಚ್ಚನ್ನು ದಾನ ಮಾಡಿದ ಬಗ್ಗೆ ಮಾಹಿತಿ ಮೂಲ ಸಿಗುತ್ತದೆ). ಆ ಸಮಯಕ್ಕಾಗಲೇ ಕನ್ನಡವು ಸಾಕಷ್ಟು ಅಭಿವೃದ್ಧಿ ಹೊಂದಿತ್ತು ಎಂಬುದು ತಿಳಿದು ಬರುತ್ತದೆ. ಕನ್ನಡ ಲಿಪಿಯ ಉಗಮದ ಇತಿಹಾಸವನ್ನು ಗಮನಿಸಿದರೆ ತಮಿಳಿಗಿಂತಲೂ ಕನ್ನಡ ಲಿಪಿಯೇ ಮೊದಲಿಗೆ ಹೆಚ್ಚು ಪ್ರವರ್ಧಮಾನಕ್ಕೆ ಬಂದಂತೆ ಕಾಣಿಸುತ್ತದೆ.

ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ 10ನೇ ಶತಮಾನದಿಂದ ಸುಮಾರು ಹನ್ನೆರಡನೆ ಶತಮಾನದವರೆಗಿನ ಕಾಲಘಟ್ಟವನ್ನು ಹಳಗನ್ನಡ ಎಂದು ಗುರುತಿಸಬಹುದು. ಈ ಕಾಲದ ಸಾಹಿತ್ಯ ಮುಖ್ಯವಾಗಿ ಜೈನ ಧರ್ಮವನ್ನು ಅವಲಂಬಿಸಿದೆ. ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಹತ್ತನೇ ಶತಮಾನವು ಸುವರ್ಣ ಯುಗವೆಂದು ಖ್ಯಾತವಾಗಿದೆ. ಕನ್ನಡ ಸಾಹಿತ್ಯ ದಿಗ್ಗರಾದ ಪಂಪ, ಪೊನ್ನ, ರನ್ನ, ಮುಂತಾದ ಶ್ರೇಷ್ಠ ಕವಿಗಳು ಕನ್ನಡಕ್ಕಾಗಿ ಅತ್ಯಮೂಲ್ಯ ಕೃತಿಗಳನ್ನು ಕೊಡುಗೆ ನೀಡಿದ್ದಾರೆ.

ನಡುಗನ್ನಡ ಸಾಹಿತ್ಯದಲ್ಲಿ ಅನೇಕ ಹೊಸ ಸಾಹಿತ್ಯ ಪ್ರಕಾರಗಳು ಬೆಳಕಿಗೆ ಬಂದವು. ಈ ಕಾಲದ ಸಾಹಿತ್ಯ ಜೈನ, ಹಿಂದೂ ಹಾಗೂ ಜಾತ್ಯತೀತ ಬೋಧನೆಗಳ ಮೇಲೆ ಆಧಾರಿತವಾಗಿದೆ. ಇವುಗಳಲ್ಲಿ ಮುಖ್ಯವಾದವು ರಗಳೆ ಮತ್ತು ದೇಶಿ ಸಾಹಿತ್ಯ. ಮಧ್ಯಕಾಲ ಯುಗದ ಜನರ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಿತಿಗಳು ನಾನಾ ರೀತಿಯಲ್ಲಿ ಇದ್ದುದರಿಂದ ಸಾಮ್ರಾಜ್ಯಗಳ ಉದಯಾಸ್ತಗಳು, ಯುದ್ಧದ ಘೋರ ಪರಿಣಾಮಗಳು ಜನತೆಯ ಬದುಕಿನಲ್ಲಿ ಹೊಸ ಬೆಳಕನ್ನು ತಂದವು.

ರಾಜಕೀಯ, ಧಾರ್ಮಿಕ ಹಾಗೂ ಸಾಮಾಜಿಕ ಸ್ಥಿತ್ಯಂತರಗಳು ಕಂಡು ಬಂದವು. ಪೂರ್ವ ಪರಂಪರೆಯ ಸಾಹಿತ್ಯ ದೃಷ್ಟಿಯು ಜನಸಾಮಾನ್ಯರಿಗೆ ತಿಳಿದಿರಲಿಲ್ಲ. ಆಗ ವಚನ ಸಾಹಿತ್ಯವು ಉದಯವಾಯಿತು. ದಾಸ ಸಾಹಿತ್ಯವು ಭಾಗವತ ಪರಂಪರೆಯ ಶಾಖಾ ಸಾಹಿತ್ಯವಾಗಿ ಸಮೃದ್ಧವಾಗಿ ಬೆಳೆಯಿತು. ಕೀರ್ತನಾಕಾರರು, ಜನರ ಕೊಳೆಯನ್ನು ತೊಳೆದು ಸಂಸ್ಕಾರಯುಕ್ತ ಬದುಕಿಗಾಗಿ ಕ್ರಾಂತಿಕಾರಕ ಮನೋಭಾವ ತಾಳಿದರು.

ಹೊಸಗನ್ನಡ ಸಾಹಿತ್ಯದಲ್ಲಿ ಕಂಡುಬರುವ ನವೋದಯ ಸಾಹಿತ್ಯವು ಬಿ.ಎಂ.ಶ್ರೀಕಂಠಯ್ಯ ನವರ 'ಇಂಗ್ಲೀಷ್ ಗೀತೆಗಳು' ಕೃತಿಯಿಂದ ಆರಂಭವಾಗುತ್ತದೆ. ನವೋದಯ ಸಾಹಿತ್ಯದ ಪ್ರಮುಖರೆಂದರೆ, ಪಂಜೆ ಮಂಗೇಶರಾಯ, ಎಂ.ಗೋವಿಂದ ಪೈ, ಮಾಸ್ತಿ ವೆಂಕಟೇಶ್ ಅಯ್ಯಂಗಾರ್, ಪು.ತಿ.ನ, ಕುವೆಂಪು, ಶಿವರಾಮ ಕಾರಂತ, ಕುವೆಂಪು, ಅ.ನ.ಕೃ, ಎ.ಎನ್.ಮೂರ್ತಿರಾಯರು, ಮುಂತಾದವರು.

ಪ್ರಗತಿಶೀಲ ಸಾಹಿತ್ಯವು 1943ರಲ್ಲಿ ಬೆಂಗಳೂರಿನಲ್ಲಿ ಆರಂಭವಾಯಿತು. ಮೊದಲ ಸಭೆ ಅ.ನ.ಕೃ ಅವರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆಯಿತು. ಕುಮಾರ ವೆಂಕಣ್ಣ, ನಿರಂಜನ, ಶ್ರೀರಂಗ, ಇನಾಂದಾರ್, ಮೊದಲಾದವರು ಈ ಪಂಥವನ್ನು ಬೆಳೆಸಿದರು.

ನವ್ಯ ಸಾಹಿತ್ಯವು 1950ರಲ್ಲಿ ಪ್ರಾರಂಭವಾಯಿತು. ವಿ.ಕೃ.ಗೋಕಾಕರು ನವ್ಯ ಸಾಹಿತ್ಯದ ಕುರಿತು ಮಾಡಿದ ಬಾನುಲಿ ಭಾಷಣವೇ ನವ್ಯ ಸಾಹಿತ್ಯದ ಉಗಮಕ್ಕೆ ಕಾರಣವೆನ್ನಬಹುದು. ನವ್ಯ ಸಾಹಿತ್ಯವು ಕೇವಲ ಕಾವ್ಯಕ್ಕೆ ಸೀಮಿತವಾಗಿರದೆ ಕಾದಂಬರಿ, ನಾಟಕ, ಪ್ರಬಂಧ, ವಿಮರ್ಷೆಗಳಿಗೂ ವ್ಯಾಪಿಸಿತು. ನವ್ಯ ಸಾಹಿತ್ಯವು ಪಾಶ್ಚಾತ್ಯರ ಪ್ರಭಾವದಿಂದಯಿತಾದರೂ ಅದು ನವೋದಯ ಸಾಹಿತ್ಯದಂತೆ ನಮ್ಮ ನೆಲದಲ್ಲೆ ಹುಟ್ಟಿ ಬೆಳೆದಿದೆ. ಗೋಕಾಕರು ಮತ್ತು ಅಡಿಗರನ್ನು ಕನ್ನಡ ನವ್ಯ ಸಾಹಿತ್ಯದ ಪ್ರವರ್ತಕರೆಂದು ಕರೆಯಬಹುದಾಗಿದೆ. ವಿ.ಕೃ.ಗೋಕಾಕ, ಗೋಪಾಲ ಕೃಷ್ಣ ಅಡಿಗ, ಯು.ಆರ್.ಅನಂತಮೂರ್ತಿ, ಪಿ.ಲಂಕೇಶ್ ನವ್ಯ ಕಾವ್ಯ ರಚನೆಯ ಪ್ರಮುಖರಾಗಿದ್ದಾರೆ.

ದಲಿತ ಸಾಹಿತ್ಯವು 1970ರಿಂದೀಚೆಗೆ ಬೆಳೆದು ಬಂದಿದೆ. ಸಮಾಜದ ಇತರ ವರ್ಗದವರೊಂದಿಗೆ ಸಮಾನತೆಯನ್ನು ತಂದುಕೊಡುವುದು ದಲಿತ ಸಾಹಿತ್ಯದ ಉದ್ದೇಶವಾಗಿತ್ತು. ದಲಿತ ಸಾಹಿತ್ಯವನ್ನು ನಾವು ಮೊದಲು ಗುರುತಿಸುವುದು ದೇವನೂರು ಮಹಾದೇವ ಬರೆದ ಏಳು ಕಥೆಗಳ 'ದ್ಯಾವನೂರು' ಸಂಕಲನದಿಂದ. ದಲಿತ ಕವಿ

ಸಿದ್ಧಲಿಂಗಯ್ಯ, ಚೆನ್ನಣ್ಣ ವಾಲೀಕಾರ ಮತ್ತು ಅರವಿಂದ ಮಾಲಗತ್ತಿ, ಮೊಗಳ್ಳಿ ಗಣೇಶ್ ದಲಿತ ಸಾಹಿತ್ಯದ ಪ್ರಮುಖರು.

ಬಂಡಾಯ ಸಾಹಿತ್ಯವನ್ನು ಸಾಮಾಜಿಕ ಅಸಮಾನತೆಯ ವಿರುದ್ಧ, ಅನ್ಯಾಯದ ವಿರುದ್ಧ ಹೋರಾಟ ಮಾಡುವ ಹಾಗೂ ಪ್ರತಿಭಟಿಸುವ ಒಂದು ಮನೋಧರ್ಮವೆನ್ನಬಹುದು. ಬಂಡಾಯ ಸಾಹಿತ್ಯವು ಹೊಸಗನ್ನಡ ಸಾಹಿತ್ಯದ ಇತ್ತೀಚಿನ ಬೆಳವಣಿಗೆಯಾಗಿದೆ. ಅಕ್ಷರ ಜ್ಞಾನದಿಂದ ವಂಚಿತರಾದ ಸಮಾಜದ ಕೆಳವರ್ಗ, ಅಕ್ಷರ ಜ್ಞಾನವನ್ನು ಪಡೆದುಕೊಂಡು ತನ್ನನ್ನು ವಂಚಿಸಿದ್ದ ಮೇಲ್ವರ್ಗದ ಮೇಲೆ ಸಿಡಿದೆದ್ದು, ಪ್ರತಿಭಟನೆಯನ್ನು ಮಾತು, ಕೃತಿಯ ಮೂಲಕ ವ್ಯಕ್ತಪಡಿಸುವ ಮಾಧ್ಯವನ್ನಾಗಿ ಮಾಡಿಕೊಂಡದ್ದನ್ನು ಬಂಡಾಯ ಸಾಹಿತ್ಯ ಎನ್ನಬಹುದು. ಬರಗೂರು ರಾಮಚಂದ್ರಪ್ಪ, ಚಂದ್ರಶೇಖರ ಪಾಟೀಲ, ಚದುರಂಗ, ಕುಂ.ವೀರಭದ್ರಪ್ಪ, ಸಾರಾ ಅಬೂಬಕರ್, ಗೀತಾ ನಾಗಭೂಷಣ ಮುಂತಾದವರು ಪ್ರಮುಖರು.

ಹೀಗೆ ಹಲವಾರು ಕವಲುಗಳಲ್ಲಿ ಬೆಳೆದು ನಿಂತ ಕನ್ನಡ ಸಾಹಿತ್ಯ ಲೋಕದಲ್ಲಿ ಅತ್ಯಂತ ಜನಪ್ರಿಯವಾದುದು ಕಾದಂಬರಿ ಸಾಹಿತ್ಯ ಎಂದು ಹೇಳಬಹುದು. ಇದು ಓದುಗನನ್ನು ಸುಲಭವಾಗಿ ತನ್ನೆಡೆಗೆ ಸೆಳೆಯುತ್ತದೆ. ಮನಸ್ಸನ್ನು ಆವರಿಸುತ್ತದೆ. ಮತ್ತೆ ಓದುಗನನ್ನು ಸೃಜನಶೀಲನನ್ನಾಗಿ ಮಾಡುತ್ತದೆ. ಕಾದಂಬರಿ ಸಾಹಿತ್ಯವು ತನ್ನದೇ ಆದ ವಿಕಾಸ, ವಿಸ್ತಾರವನ್ನು ಹೊಂದಿದ್ದು ಅದರ ರಚನೆಯ ಮೂಲಕವೇ ಹಲವಾರು ಸಾಧ್ಯತೆಗಳನ್ನು ತನ್ನ ಮಡಿಲಿನಲ್ಲಿ ಅಡಗಿಸಿಟ್ಟುಕೊಂಡಿರುವುದನ್ನು ಕಾಣಬಹುದು.

ಕನ್ನಡ ಸಾಹಿತ್ಯ ಇಂದಿನ ಕಾಲಘಟ್ಟದಲ್ಲಿ ಅಪಾರವಾಗಿ ಬೆಳೆದಿದೆ. ಯುವ ಲೇಖಕರ ದಂಡೇ ಪ್ರವಾಹದಂತೆ ಹರಿದು ಬರುತ್ತಿದೆ. ಕೇವಲ ಸಾಹಿತ್ಯದ ವಿದ್ಯಾರ್ಥಿಗಳಷ್ಟೇ ಅಲ್ಲದೇ, ವಿಜ್ಞಾನ, ತಂತ್ರಜ್ಞಾನ ಓದಿಕೊಂಡವರೂ ಕೂಡ ಸಾಹಿತ್ಯದ ಕಡೆ ಮುಖ ಮಾಡಿ ಸಾಹಿತ್ಯ ಸೇವೆಯನ್ನು ಮತ್ತು ಸಾಹಿತ್ಯ ಕೃಷಿಯನ್ನು ಮಾಡುತ್ತಿರುವುದನ್ನು ಕಾಣಬಹುದಾಗಿದೆ. ಪ್ರಾಚೀನ, ಮಧ್ಯಕಾಲೀನ ಹಾಗೂ ಆಧುನಿಕ ಕಾಲಘಟ್ಟಕ್ಕೆ ಅನುಗುಣವಾಗಿ ಮೂಡಿಬಂದಂತಹ ಸಾಹಿತ್ಯ ಪ್ರಕಾರ ಬಹು ವಿಶೇಷತೆಯಿಂದ ಕೂಡಿದೆ. ಇದರಲ್ಲಿ ಹಲವಾರು ಪ್ರಮುಖ ಕಾದಂಬರಿಕಾರರು, ಲೇಖಕರು, ಕವಿಗಳು, ವಾಗ್ಮಿಗಳು ಇದ್ದಾರೆ. ಆದರೂ ಈ ಯಾವ ಪಂಥಕ್ಕೂ ಸೇರದೆ ಈ ಎಲ್ಲಾ ಕಾಲದಲ್ಲೂ ಬರೆಯುತ್ತಿದ್ದ, ಶ್ರೇಷ್ಠ ಕೃತಿಗಳನ್ನು

ರಚಿಸಿರುವ ಲೇಖಕರಿದ್ದಾರೆ. ಕಾದಂಬರಿ ಕ್ಷೇತ್ರವನ್ನೇ ಮಾಧ್ಯಮವನ್ನಾಗಿಸಿಕೊಂಡು ಹೆಸರು ಮಾಡಿದವರಿದ್ದಾರೆ.

ಕಾದಂಬರಿಯು ಜನಸಾಮಾನ್ಯರಿಗೆ ಹೆಚ್ಚು ಪ್ರಿಯವಾದ ಸಾಹಿತ್ಯ ಪ್ರಕಾರವಾದದ್ದರಿಂದ, ಓದುಗರು ಕಾದಂಬರಿಕಾರರನ್ನು ಬಹುಬೇಗ ಗುರುತಿಸುತ್ತಾರೆ. ಒಬ್ಬ ಕಾದಂಬರಿಕಾರನು ತನ್ನ ಸುತ್ತಮುತ್ತಲ ಬದುಕಿನಿಂದ ಕಾದಂಬರಿಗೆ ಬೇಕಾದ ವಸ್ತುವನ್ನು ಆರಿಸಿಕೊಳ್ಳುತ್ತಾನೆ. ಕಾದಂಬರಿಕಾರನಿಗೆ ಇರಬೇಕಾದ ಪ್ರಾಥಮಿಕ ಅಂಶವೆಂದರೆ ಆತ ಸಮಾಜದೊಂದಿಗೆ ಬೆರೆತು ಅರ್ಥೈಸಿಕೊಂಡು ಮತ್ತೆ ಅದೇ ಸಮಾಜಕ್ಕೆ ಸ್ವವಿಮರ್ಶೆ ಮಾಡಿಕೊಳ್ಳುವಂತೆ ತನ್ನ ಕಾದಂಬರಿಯನ್ನು ರಚಿಸುವ ಮೂಲಕ ಸಮಾಜಕ್ಕೆ ಹೊಣೆಗಾರನಾಗಿರುತ್ತಾನೆ. ಕಾದಂಬರಿ ಯಶಸ್ವಿಯಾಗಬೇಕಾದರೆ, ಸಾಹಿತ್ಯ ಓದುಗರು ಸಾಕಷ್ಟಿರಬೇಕು. ಅವರ ಆಸಕ್ತಿ ತಣಿಯುವಂತೆ ಕಾದಂಬರಿಯಲ್ಲಿ ವಸ್ತುವಿಷಯ ಪ್ರತಿಬಿಂಬಿತವಾಗಿರಬೇಕು.

ಭೈರಪ್ಪನವರು ಇಲ್ಲಿಯವರೆಗೆ 23 ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಕಾದಂಬರಿಗಳಲ್ಲಿ ಒಂದಲ್ಲ ಒಂದು ಹೊಸ ವಿಷಯ, ವಿಚಾರವಂತಿಕೆ ಇದ್ದೇ ಇರುತ್ತದೆ. ಇವರ ಕಾದಂಬರಿಗಳಲ್ಲಿ ಕಲ್ಪನೆಗಿಂತ, ವಾಸ್ತವಿಕತೆಗೆ ಹೆಚ್ಚಿನ ಜಾಗವಿರುತ್ತದೆ. ಇವರು ಲೇಖಕನ ಜವಾಬ್ದಾರಿಯನ್ನು ಬಹಳ ಎಚ್ಚರಿಕೆಯಿಂದ ಸರಿದೂಗಿಸಿಕೊಂಡು ಬಂದಿದ್ದಾರೆ. ಭಾರತದ ಮಹಾ ಕಾದಂಬರಿಕಾರರಲ್ಲಿ ಸಮಕಾಲೀನ ಸಾಹಿತ್ಯದಲ್ಲಿ ಭೈರಪ್ಪನವರಿಗೆ ವಿಶಿಷ್ಟ ಸ್ಥಾನವಿದೆ. ಇವರು ಮಧ್ಯಮ ವರ್ಗದ ಓದುಗರ ಅಪಾರ ಬಳಗವನ್ನು ಹೊಂದಿದ್ದಾರೆ.

ಭೈರಪ್ಪನವರು ಇದುವರೆಗೂ ಭೀಮಕಾಯ, ಧರ್ಮಶ್ರೀ, ದೂರಸರಿದರು, ವಂಶವೃಕ್ಷ, ಮತದಾನ, ಜಲಪಾತ, ನಾಯಿನೆರಳು, ತಬ್ಬಲಿಯು ನೀನಾದೆ ಮಗನೇ, ಗೃಹಭಂಗ, ನಿರಾಕರಣ, ಗ್ರಹಣ, ದಾಟು, ಅನ್ವೇಷಣೆ, ಪರ್ವ, ನೆಲೆ, ಸಾಕ್ಷಿ, ಅಂಚು, ತಂತು, ಸಾರ್ಥ, ಮಂದ್ರ, ಆವರಣ, ಕವಲು, ಯಾನ ಕಾದಂಬರಿಗಳನ್ನು ಬರೆದಿದ್ದಾರೆ. ಇವರ ಕಾದಂಬರಿಗಳು ಇಂಗ್ಲಿಷ್, ಹಿಂದಿ, ಮರಾಠಿ, ತೆಲುಗು, ಸಂಸ್ಕೃತ, ಗುಜರಾತಿ, ಉರ್ದು, ಬಂಗಾಳಿ ಮುಂತಾದ ಭಾರತೀಯ ಭಾಷೆಗಳಿಗೆ ಅನುವಾದಗೊಂಡು, ಜನಪ್ರಿಯತೆಯನ್ನು ತಂದುಕೊಟ್ಟಿವೆ.

ಎಸ್.ಎಲ್.ಭೈರಪ್ಪನವರ 'ಜಲಪಾತ' ಸಾಮಾಜಿಕ ಕಾದಂಬರಿ, 1967ರಲ್ಲಿ ಪ್ರಕಟಣೆಯಾಯಿತು. ಆದರೂ ಈ ಕಾದಂಬರಿ ಕನ್ನಡ ಸಾಹಿತ್ಯ ಲೋಕದ ವಿಮರ್ಶಾ

ಲೋಕದಲ್ಲಿ ಚರ್ಚೆಗೆ ಒಳಗಾಗದ ಕೃತಿ ಎಂದೇ ಭಾವಿಸಬಹುದು. ಈ ಹಿನ್ನೆಲೆಯಲ್ಲಿ **"ಜಲಪಾತ ಕಾದಂಬರಿಯಲ್ಲಿ ಕಂಡು ಬರುವ ಮಧ್ಯಮ ವರ್ಗದ ಚಿತ್ರಣ –ಒಂದು ಅಧ್ಯಯನ"** ಎಂಬುದು ನನ್ನ ಸಂಪ್ರಬಂಧದ ವಿಷಯವಾಗಿದೆ.

"ಭೈರಪ್ಪನವರ ಕಾದಂಬರಿ ಬೆಳೆದಿರುವ ರೀತಿ ಬೆರಗನ್ನುಂಟುಮಾಡುತ್ತದೆ. 'ವಂಶವೃಕ್ಷ' 'ತಬ್ಬಲಿಯು ನೀನಾದೆ ಮಗನೇ' 'ದಾಟು' ಬರೆದ ಕಾದಂಬರಿಕಾರರೇ 'ಅನ್ವೇಷಣೆ' 'ನೆಲೆ' 'ಪರ್ವ' ಇವುಗಳನ್ನು ಬರೆದರು ಎನ್ನುವುದು ಅಚ್ಚರಿಯ ಸಂಗತಿ. ಭೈರಪ್ಪನವರ ಹಿಂದಿನ ಕಾದಂಬರಿಗಳಲ್ಲಿ ಪಾತ್ರಗಳು ಒಂದು ಸ್ಪಷ್ಟವಾದ, ಕಟ್ಟುನಿಟ್ಟಾದ ಜೀವನ ಸಿದ್ಧಾಂತಗಳಿಗೆ ಕಟ್ಟಿಬಿದ್ದವರು, ಸ್ಪಷ್ಟ, ಅಚಲ ಅಭಿಪ್ರಾಯವುಳ್ಳವರು.(ಇದರಿಂದ ಅವರ ನಿಲುವು ನಡತೆಗಳು 'ಪ್ರೆಡಿಕ್ಟಬಲ್' ಆದರೂ, ನಿರೀಕ್ಷಿಸಬಹುದಾದರೂ, ಭೈರಪ್ಪನವರ ಕಾದಂಬರಿಗಳಲ್ಲಿ ಕಥೆ ಆಸಕ್ತಿಯನ್ನು ಉಳಿಸಿಕೊಂಡಿತ್ತು ಎನ್ನುವುದು ವಿಶಿಷ್ಟವಾದ ಅಂಶ.) ಆದರೆ ಅವರ ಈಚೆಗಿನ ಕಾದಂಬರಿಗಳಲ್ಲಿ ಈ ಬಗೆಯ ಗಡಸು ಜೀವನ ಸಿದ್ಧಾಂತಗಳ ಘರ್ಷಣೆ ಇಲ್ಲ. ಮನುಷ್ಯ ಸ್ವಭಾವದಲ್ಲಿ ಆಸಕ್ತಿ ಗಾಢವಾಗುತ್ತದೆ. ಅದರ ಗೂಢತೆಯ ಅರಿವಾಗುತ್ತದೆ. 'ಅನ್ವೇಷಣೆ'ಯಲ್ಲಿ ಕೇಂದ್ರ ವ್ಯಕ್ತಿ ಕಾಣುವುದೇ ಇಲ್ಲ. ಆದರೆ ಇತರ ಪಾತ್ರಗಳ ಹುಡುಕಾಟದ ವಸ್ತು ಅವನು. 'ಪರ್ವ' ಭೈರಪ್ಪನವರ ಮಹತ್ವಾಕಾಂಕ್ಷೆಯ ಕೃತಿ. ಮಹಾಭಾರತದ ಕಥೆಯನ್ನು ಹೇಳುವ ಕೃತಿ. ಇದರ ಯಶಸ್ಸಿನ ವಿಷಯದಲ್ಲಿ ತೀವ್ರ ಭಿನ್ನಾಭಿಪ್ರಾಯವಿದೆ. ಆದರೆ ಇದರ ಮಹತ್ವದ ವಿಷಯದಲ್ಲಿ ಇರಲಾರದು. ಪ್ರಾರಂಭದಿಂದ ವಾಸ್ತವಿಕ ಮಾರ್ಗವನ್ನೇ ತುಳಿದ ಭೈರಪ್ಪನವರು ಮಹಾಭಾರತದ ಸಾಮಗ್ರಿಯನ್ನು ನಿರ್ವಹಿಸುವಾಗಲು ವಾಸ್ತವಿಕ ಮಾರ್ಗವನ್ನು ಅನುಸರಿಸಿದರು. ಅದರ 'ಪೌರಾಣಿಕತೆ'ಯನ್ನು ಕಳಚಿದರು. ಕುಂತಿಗೆ ಮಕ್ಕಳನ್ನು ಕರುಣಿಸಿದವರು ದೇವತೆಗಳಲ್ಲ. ಅರ್ಜುನನಿಗೆ ಒಂದು ವರ್ಷ ನಪುಂಸಕತ್ವ ಬರುವುದು ಶಾಪದಿಂದಲ್ಲ. ಭೈರಪ್ಪನವರು ಮಹಾಭಾರತದ ಯುಗದಲ್ಲಿ ಹೆಣ್ಣಿನ ಶೋಷಣೆಯನ್ನು ಕಾಣುತ್ತಾರೆ. ಅವರು ಮಹಾಭಾರತವನ್ನು ಕುರಿತ ಇರಾವತಿ ಕರ್ವೆಯವರ ಪುಸ್ತಕವನ್ನು ತಾವು 'ಪರ್ವ' ಬರೆದಾಗ ಓದಿರಲಿಲ್ಲ ಎಂದಿದ್ದಾರೆ. ಈ ಮಾತನ್ನು ಶಂಕಿಸುವ ಅಗತ್ಯವೇ ಇಲ್ಲ. ಆದರೆ ಭೈರಪ್ಪನವರ ವಿಶ್ಲೇಷಣೆ ಇರಾವತಿ ಕರ್ವೆಯವರ ವಿಶ್ಲೇಷಣೆಯಂತೆ ಸಮಾಜಶಾಸ್ತ್ರೀಯವಾದದ್ದು. ಜೊತೆಗೆ ಅವರು ತಮ್ಮ ಊಹೆಗನುಗುಣವಾಗಿ ಮಾರ್ಪಾಡುಗಳನ್ನು ಮಾಡಿದ್ದಾರೆ. ಈ ಸ್ವಾತಂತ್ರ್ಯ ಕಾದಂಬರಿಕಾರನಿಗಿರುವುದೇ. ಆದರೆ ಇಡೀ ಕೃತಿಯು ಮಾಡುವ ಪರಿಣಾಮವೇನು ಎಂದು

(PTO)

ಪ್ರಶ್ನಿಸಬೇಕಾಗುತ್ತದೆ. 'ಮಹಾಭಾರತ'ದ ಪೌರಾಣಿಕ ವ್ಯಕ್ತಿಗಳು ಮನುಷ್ಯ ಸ್ವಭಾವದ ಮತ್ತು ಬದುಕಿನ ಹಲವು ಸಾಧ್ಯತೆಗಳ ತುತ್ತ ತುದಿಯನ್ನು ಪ್ರದರ್ಶಿಸುತ್ತಾರೆ. ದುರ್ಯೋಧನನ ಛಲಕ್ಕಿಂತ ಛಲವಿಲ್ಲ. ದ್ರೌಪದಿಯ ನೋವಿಗಿಂತ ನೋವಿಲ್ಲ. ಅಶ್ವತ್ಥಾಮನ ಮೂರ್ಖತನಕ್ಕಿಂತ ಮೂರ್ಖತನವಿಲ್ಲ. ಮಹಾಭಾರತವು ತಮಗೆ ನೀಡುವ ಅಸದೃಶ ಅನುಭವಕ್ಕೆ ಈ ಪಾತ್ರಗಳು ಪರ್ವತ ಸದೃಶವಾದವು ಎನ್ನುವುದೊಂದು ಕಾರಣ. ವೈಯಕ್ತಿಕವಾಗಿ ನನಗೆ 'ಪರ್ವ' ಸಂಪೂರ್ಣ ಯಶಸ್ವಿಯಾಗಲಿಲ್ಲ ಎಂದು ಕಾಣುತ್ತದೆ. (ಈ ಅಭಿಪ್ರಾಯದಲ್ಲಿ ಒಪ್ಪದಹಲವಾರು ವಿಮರ್ಶಕರಿದ್ದಾರೆ.)ಆದರೆ ಇದೊಂದು ಮಹತ್ವದ ಕೃತಿ.[1]

ಕನ್ನಡ ನಾಡಿನ ಅತ್ಯಂತ ಪ್ರಸಿದ್ಧ ಕಾದಂಬರಿಕಾರರಲ್ಲಿ ಒಬ್ಬರಾದ ಭೈರಪ್ಪನವರ ಸಾಹಿತ್ಯದ ಬಗ್ಗೆ ತೀವ್ರವಾದ ಭಿನ್ನಾಭಿಪ್ರಾಯಗಳಿವೆ. ಅವರ ಕಾದಂಬರಿಗಳನ್ನು ಬಹುವಾಗಿ ಮೆಚ್ಚಿಕೊಳ್ಳುವವರುಂಟು, ಅವರದು ಪ್ರತಿಗಾಮಿ ಸಾಹಿತ್ಯ ಎಂದು ಟೀಕಿಸುವವರುಂಟು. ಆದರೆ ಅತ್ಯಂತ ಜನಪ್ರಿಯ ಕಾದಂಬರಿಕಾರರಲ್ಲಿ ಒಬ್ಬರು ಎನ್ನುವುದರಲ್ಲಿ ಸಂದೇಹವಿಲ್ಲ. ಅವರ ಕಾದಂಬರಿಗಳು ಇಂಗ್ಲಿಷ್, ಹಿಂದಿ, ಮರಾಠಿ ಮೊದಲಾಗಿ ಹಲವು ಭಾಷೆಗಳಿಗೆ ಅನುವಾದವಾಗಿವೆ.

"ಭೈರಪ್ಪನವರ ಈವರೆಗಿನ ಕಾದಂಬರಿ ಸಾಹಿತ್ಯ ರಚನೆಯಲ್ಲಿ ಎರಡು ಮುಖ್ಯ ಘಟ್ಟಗಳನ್ನು ಗುರುತಿಸಬಹುದು. ಪ್ರಾರಂಭದಿಂದ 'ದಾಟು' ಸೇರಿದಂತೆ ಒಂದು ಘಟ್ಟ 'ಅನ್ವೇಷಣೆ'ಯಿಂದ 'ಸಾಕ್ಷಿ' ಪೂರ್ತಿ ಎರಡನೇಯ ಘಟ್ಟ. ಉಳಿದ ಕಾದಂಬರಿಗಳು ಕಡೆಯ ಘಟ್ಟ (ಈವರೆಗಿನ ಮಟ್ಟಿಗೆ). 'ಪರ್ವ'ವು ಒಂದು ನಿರ್ಧಿಷ್ಟ ಘಟ್ಟದ ಚೌಕಟ್ಟನ್ನು ಮೀರುತ್ತದೆ. ಮೊದಲನೇಯ ಘಟ್ಟದಲ್ಲಿ ನಿಲುವುಗಳ ಘರ್ಷಣೆ. ಗಟ್ಟಿ ವ್ಯಕ್ತಿತ್ವದ ಪಾತ್ರಗಳ ಪರಸ್ಪರ ವಿರೋಧ ಬಲವತ್ತರವಾಗುತ್ತದೆ. ಪಾತ್ರಗಳದು ನಿಷ್ಠುರ ನಿಲುವುಗಳು ಘರ್ಷಣೆ ತುಂಬ ಕುತೂಹಲಕರವಾಗಿರುತ್ತದೆ. ಭೈರಪ್ಪನವರಿಗೆ ಖ್ಯಾತಿಯನ್ನು ತಂದುಕೊಟ್ಟ ವಾದ ವಿವಾದ ಪ್ರವಾಹವನ್ನು ಅವರತ್ತ ಹರಿಸಿದ 'ವಂಶವೃಕ್ಷ' ಈ ಅವಧಿಗೆ ಸೇರಿದ್ದು. ಇದೇ ಕಾಲದಲ್ಲಿ ಬರೆದ ಮತ್ತು ಭೈರಪ್ಪನವರ ಶ್ರೇಷ್ಠ ಕಾದಂಬರಿಗಳಲ್ಲಿ ಒಂದಾದ 'ಗೃಹಭಂಗ' ಮೇಲೆ ಹೇಳಿದ ಸ್ವರೂಪಕ್ಕೆ ಹೊರತಾದದ್ದು. ಇದು ಜೀವ ಶಕ್ತಿಯ ಹೋರಾಟದ ದರ್ಶನ. ಕೇಂದ್ರಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಗಳಿಸಿದ 'ದಾಟು'ವಿನ ವಸ್ತು ಹಿಂದೂ ಸಮುದಾಯದಲ್ಲಿರುವ ಜಾತಿ ಪದ್ಧತಿ ಮತ್ತು ದಲಿತರ ಸ್ಥಿತಿ. (ಇದನ್ನು 'ಭಾರತೀಪುರ'ದೊಂದಿಗೆ ಹೋಲಿಸುವುದು

---

[1] ಪುಟ 266–267, 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಪ್ರೊ.ಎಲ್.ಎಲ್.ಶೇಷಗಿರಿರಾವ್

ಕುತೂಹಲಕರವಾಗಿರುತ್ತದೆ.) 'ಅನ್ವೇಷಣೆ'ಯಿಂದ ಎರಡನೇ ಘಟ್ಟ ಪ್ರಾರಂಭ. ಹುಡುಗ ವಿಶ್ವನಾಥ 'ಗೃಹಭಂಗ'ದ ಕೊನೆಯಲ್ಲಿ ವಿರಕ್ತರೊಬ್ಬರ ಪೋಷಣೆಯಲ್ಲಿ ಉಳಿಯುತ್ತಾನೆ. ಇವನೇ 'ಅನ್ವೇಷಣೆ'ಯ ಕೇಂದ್ರ ಪಾತ್ರ. 'ಗೃಹಭಂಗ'ದ ಹಲವು ಪಾತ್ರಗಳು ಇಲ್ಲಿಯೂ ನಮ್ಮ ಮುಂದಿವೆ. ಆದರೆ ಕಾದಂಬರಿಯ ಸ್ವರೂಪ ಸಂಪೂರ್ಣವಾಗಿ ಬದಲಾಗಿದೆ. ವಿಶ್ವನಾಥ ನೇರವಾಗಿ ಕಾದಂಬರಿಯನ್ನು ಪ್ರವೇಶಿಸುವುದೇ ಇಲ್ಲ. ಅವನ ವಿಷಯ ಹತ್ತಾರು ಮಂದಿ ಮಾತನಾಡುತ್ತಾರೆ, ಈ ಹತ್ತಾರು ಕನ್ನಡಿಗಳಲ್ಲಿ ಆತನ ಪಾತ್ರ ಪ್ರತಿಬಿಂಬಿತವಾಗುತ್ತದೆ. ಹಲವರು ಆವನನ್ನು ಹುಡುಕುತ್ತಿದ್ದಾರೆ. ಅವನು ತನ್ನ ವ್ಯಕ್ತಿತ್ವದ ತನ್ನ ಜೀವನದ ಅರ್ಥದ ಅನ್ವೇಷಣೆಯಲ್ಲಿದ್ದಾನೆ.

ಎರಡನೇಯ ಘಟ್ಟದಲ್ಲಿ ಮನೋಧರ್ಮಗಳ ಮತ್ತು ನಂಬಿಕೆಗಳ ಘರ್ಷಣೆಗಿಂತ ಒಂದು ಬದುಕನ್ನು ಅಥವಾ ವ್ಯಕ್ತಿತ್ವವನ್ನು ಶೋಧಿಸುವುದು ಮುಖ್ಯವಾಗುತ್ತದೆ. 'ಅನ್ವೇಷಣೆ' ಇಂಥ ಕಾದಂಬರಿ. ಇಲ್ಲಿನಿಂದ ಮುಂದಿನ ಕಾದಂಬರಿಗಳಲ್ಲಿ ಅನ್ವೇಷಣೆ ಮತ್ತು ಶೋಧನೆಯ ಆವರಣ ವಿಶಾಲವಾಗುತ್ತದೆ. 'ಅಂಚು' ಸಾವು ಬದುಕುಗಳ ಅರ್ಥವನ್ನು ವಿಶ್ಲೇಷಿಸುತ್ತದೆ. 'ಸಾಕ್ಷಿ, ನೀತಿಯ ಮೂಲವನ್ನು ಶೋಧಿಸುತ್ತಾ ಬದುಕಿನ ಮೌಲ್ಯಗಳನ್ನು ಅನ್ವೇಷಿಸುತ್ತದೆ. ಭೈರಪ್ಪನವರ ಪ್ರತಿ ಕಾದಂಬರಿಯು ಅವರ ಶೋಧನೆಯ ಸ್ವರೂಪಕ್ಕೆ ಅಗತ್ಯವಾದ ಹೊಸ ತಂತ್ರವನ್ನು ಕಂಡುಕೊಳ್ಳುತ್ತದೆ. ನಿರ್ದಿಷ್ಟ ಪಾತ್ರಗಳ ಸ್ವಭಾವಗಳ ಪೃಥಕ್ಕರಣೆಯಲ್ಲಿ ತೊಡಗದೆ ಮನುಷ್ಯನ ಬದುಕಿನ ಮೌಲ್ಯಗಳ ಮತ್ತು ಅರ್ಥದ ಶೋಧನೆಯಲ್ಲಿ ಈ ಕಾದಂಬರಿಗಳು ಒಂದಲ್ಲ ಒಂದು ರೀತಿಯಲ್ಲಿ ತೊಡಗುವುದರಿಂದ ಇವು ಕೊಡುವ ಅನುಭವವು 'ವಂಶವೃಕ್ಷ', 'ದಾಟು' ಮೊದಲಾದ ಕಾದಂಬರಿಗಳು ಕೊಡುವ ಅನುಭವಕ್ಕಿಂತ ಗಾಢವಾಗಿರುತ್ತದೆ.

'ಪರ್ವ'ವು ಈ ಎರಡು ಘಟ್ಟಗಳ ಕಾದಂಬರಿಗಳಿಗಿಂತ ಭಿನ್ನವಾಗಿದೆ. ಇದೊಂದು ಸಾಹಿತ್ಯಕ ವಿಭಾವನೆಯನ್ನು –'ಇಮ್ಯಾಜಿನೇಷನಿ'ನ – ಸಾಹಸ. ಮಹಾಭಾರತದ ಅಗಾಧ ಸಾಮಗ್ರಿಯನ್ನು ಮತ್ತೊಂದು ಸ್ವರೂಪಕ್ಕೆ ಅಳವಡಿಸುವ ಪ್ರಯತ್ನ ಇಲ್ಲಿ ನಡೆದಿದೆ. ಮೂಲ ಮಹಾಕಾವ್ಯದ ಪೌರಾಣಿಕತೆಯನ್ನು ಇಲ್ಲಿ ಕಳಚಿದೆ. ಇದರಿಂದಾದ ಪರಿಣಾಮವೇನು ಎನ್ನುವುದನ್ನು ಕುರಿತು ವಿಮರ್ಶಕರು ಚರ್ಚೆ ನಡೆಸಿದ್ದಾರೆ. 'ಸೂಪರ್‌ನ್ಯಾಚುರಲ್' ಅಥವಾ ಮನುಷ್ಯತೀತ ಅಂಶಗಳನ್ನು ಕೈ ಬಿಟ್ಟ ಭೈರಪ್ಪನವರು ಅಂದಿನ ಸಮಾಜವನ್ನು ಸಮಾಜ ವಿಜ್ಞಾನದ ನಿಲುವಿನಿಂದ ವಿಶ್ಲೇಷಿಸುತ್ತಲೇ ಮನುಷ್ಯನ ಬದುಕಿನಲ್ಲಿ ಕಾಮ ಮತ್ತು ಸಾವುಗಳನ್ನು ಪ್ರಚಂಡ ಪ್ರಭಾವಗಳನ್ನಾಗಿ ವಿಶ್ಲೇಷಿಸುತ್ತಾರೆ. ಮೂಲ ಕಾವ್ಯದಲ್ಲಿ ಧರ್ಮ

ಅಧರ್ಮಗಳ ಹೋರಾಟವನ್ನು ಕೇಂದ್ರವನ್ನಾಗಿ ಮಾಡಿಕೊಂಡಿದೆ, ಅದಕ್ಕೆ ಹೊಂದಿಕೊಂಡಂತೆ ಇನ್ನು ಹಲವು ಪ್ರಶ್ನೆಗಳನ್ನು ಎತ್ತುತ್ತದೆ. (ಯಾವುದೇ ಮಹಾಕೃತಿಯು ಬೃಹದಾಕಾರದ ವೃಕ್ಷದಂತೆ. ವೃಕ್ಷವು ಒಂದು ದಿಕ್ಕಿನಲ್ಲಿ – ಊರ್ಧ್ವಮುಖವಾಗಿ – ಬೆಳೆಯುತ್ತಲೇ ಹಲವು ದಿಕ್ಕುಗಳಲ್ಲಿ ರೆಂಬೆಗಳನ್ನು ಚಾಚುತ್ತದೆ. ಆದರೆ ಇಡೀ ವೃಕ್ಷಕ್ಕೆ ಒಂದು ಸ್ಪಷ್ಟವಾದ ಸ್ವರೂಪವಿರುತ್ತದೆ.) ಬದುಕಿನಲ್ಲಿ ಕಾಮ ಮತ್ತು ಸಾವುಗಳ ಆಟದೊಂದಿಗೇ ಕಾದಂಬರಿಯು ಒಂದು ವಿಶಾಲ ಭೂಖಂಡದ ಇತಿಹಾಸದ ಗಮನವನ್ನು ಗುರುತಿಸುತ್ತದೆ. (ಭೈರಪ್ಪನವರೇ 'ನಾನು ಭಾರತವನ್ನು ಓದಬೇಕಾಗಿದ್ದದು ಸಾಹಿತ್ಯ ಕೃತಿಯಾಗಿಯಲ್ಲಾ. ಈ ದೇಶದ ಸಂಸ್ಕೃತಿಯು ಒಂದು ರೂಪ ತಾಳಿ ಬೇರೊಂದು ರೂಪದ ಸ್ಥಿತ್ಯಾಂತರದಲ್ಲಿ ಕಾಲದ ಸ್ಪಷ್ಟ ಚಿತ್ರವಾಗಿ' ಎಂದಿದ್ದಾರೆ.) ಈ ಗಮನವು ಭೀಷ್ಮರಂತಹ ಘನ ಪಾತ್ರಗಳಲ್ಲಿ ಮೂರ್ತವಾಗುತ್ತದೆ. ಎಲ್ಲ ದೃಷ್ಟಿಯಿಂದ 'ಪರ್ವ' ಈ ಶತಮಾನದ ಕನ್ನಡ ಕಾದಂಬರಿಯ ಜಗತ್ತಿನ ಒಂದು ಶಿಖರ. ಭೈರಪ್ಪನವರ ಒಂದೊಂದು ಯಶಸ್ವೀ ಕಾದಂಬರಿಯು ಓದುಗನಿಗೂ ವಿಮರ್ಶಕನಿಗೂ ಹೊಸ ಸವಾಲಾಗುತ್ತದೆ ಎನ್ನುವುದೊಂದು ಸಂತೋಷದ ವಿಷಯ."[2]

ಕನ್ನಡ ಸಾಹಿತ್ಯ ಸಂದರ್ಭದಲ್ಲಿ ಕಾದಂಬರಿ ಪ್ರಕಾರ ಒಂದು ಪ್ರಮುಖ ಮಾಧ್ಯಮವಾಗಿದ್ದು, ನವೋದಯ, ಪ್ರಗತಿಶೀಲ, ನವ್ಯ, ನವ್ಯೋತ್ತರದ ಚಳವಳಿಗಳ ಸಂದರ್ಭದಲ್ಲಿ ಇದರ ಬೆಳವಣಿಗೆಯನ್ನು ವಿಶೇಷವಾಗಿ ಗುರುತಿಸಬಹುದು. ವಿಶೇಷವೆಂದರೆ ಈ ಯಾವ ಗುಂಪಿಗೂ ಸೇರದ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಜನಪ್ರಿಯ ಮತ್ತು ಮಹತ್ವದ ಕಾದಂಬರಿಕಾರರೆಂದರೆ ಡಾ.ಎಸ್.ಎಲ್.ಭೈರಪ್ಪನವರು. ತಮ್ಮ ಕಾದಂಬರಿಗಳ ಮೂಲಕ ಸಾಮಾಜಿಕ ಸಮಸ್ಯೆಗಳು, ಆಧುನಿಕ ಮತ್ತು ಸಂಪ್ರದಾಯಿಕ ಮೌಲ್ಯಗಳ ಘರ್ಷಣೆಗಳನ್ನು ಓದುಗರ ಮುಂದಿಟ್ಟು ಅತ್ಯಂತ ಪರಿಣಾಮಕಾರಿಯಾಗಿ ಚಿತ್ರಿಸುವ ಮೂಲಕ ಕನ್ನಡ ಕಾದಂಬರಿ ಕ್ಷೇತ್ರದಲ್ಲಿ ಒಬ್ಬ ಸಮರ್ಥ ಕಾದಂಬರಿಕಾರರಾಗಿ ಗುರುತಿಸಿಕೊಂಡಿರುವುದನ್ನು ಕಾಣಬಹುದು.

ತಾತ್ವಿಕ ಚಿಂತನೆ ಇವರ ಕಾದಂಬರಿಗಳಲ್ಲಿ ಕಂಡುಬರುವ ಮುಖ್ಯ ಅಂಶವಾಗಿದೆ. ಇವರ ಕಾದಂಬರಿಗಳು ಯಶಸ್ಸನ್ನು ಸಾಧಿಸುವುದು. ತೀವ್ರ ತೆರನಾದ ಸಂವೇದನೆಯಿಂದ,

---

[2] ಪುಟ 326–328, 'ಹೊಸಗನ್ನಡ ಸಾಹಿತ್ಯ ಚರಿತ್ರೆ', ಪ್ರೊ.ಎಲ್.ಎಲ್.ಶೇಷಗಿರಿರಾವ್

ದಟ್ಟ ಅನುಭವದ ಚಿತ್ರಣದಿಂದ. ಇದಕ್ಕೆ ಪೂರಕವಾಗಿ ಸಮರ್ಥವಾದ ಭಾಷೆಯನ್ನು ಬಳಸುತ್ತಾರೆ ಗೃಹಭಂಗ, ಧರ್ಮಶ್ರೀ, ವಂಶವೃಕ್ಷ, ತಬ್ಬಲಿಯೂ ನೀನಾದೆ ಮಗನೇ ಮುಂತಾದ ಕಾದಂಬರಿಗಳಲ್ಲಿ ಈ ಸೂಕ್ಷ್ಮತೆಗಳನ್ನು ಕಾಣಬಹುದು.

ಭೈರಪ್ಪನವರಿಗೆ ಕೀರ್ತಿ ಹಾಗೂ ಸ್ಥಾನಮಾನಗಳನ್ನು ತಂದುಕೊಟ್ಟ ಮೊದಲನೆಯ ಕಾದಂಬರಿ ಎಂದರೆ 'ವಂಶವೃಕ್ಷ'. ಈ ಕೃತಿ ಕನ್ನಡದ ಮೊದಲ ಕಾದಂಬರಿಯಾದ ಇಂದಿರಾಬಾಯಿ "ಪ್ರಾರಂಭಿಸಿದ ಸುಧಾರಣಾವಾದಿ ಸಾಮಾಜಿಕ ಕಾದಂಬರಿಗಳ ಪರಂಪರೆಯಲ್ಲಿಯೇ ಬರುತ್ತದೆ" ಎನ್ನಬಹುದು.

ಭೈರಪ್ಪನವರು ಮೂಲತಃ ತತ್ವಶಾಸ್ತ್ರ ಪ್ರಾಧ್ಯಾಪಕರು. ಸಾಹಿತ್ಯ, ಸಂಸ್ಕೃತಿ ಮತ್ತು ಸಮಕಾಲೀನ ಬೆಳವಣಿಗೆಗಳ ಬಗೆಗಿನ ಅವರ ಅಧ್ಯಯನ ವ್ಯಾಪಕವಾದದ್ದು, ವಿಸ್ಮಯಕರವಾದದ್ದು. ಈ ಅಧ್ಯಯನ ಅವರ ಚಿಂತನ–ಮಂಥನಗಳೇ ಕಾದಂಬರಿಗೆ ಗಟ್ಟಿನೆಲೆಗಳಾಗಿವೆ. ಅವರು ಗಟ್ಟಿಯಾದ ಸಾಹಿತ್ಯವನ್ನು ಸೃಜಿಸಿ ಸಾಮಾಜಿಕ, ಸಾಂಸ್ಕೃತಿಕ ಜೀವನವನ್ನು ಪೋಷಿಸಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ್ದಾರೆ. ಎಸ್.ಎಲ್.ಭೈರಪ್ಪನವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ಅತಿ ಹೆಚ್ಚು ಜನಪ್ರಿಯ ಮತ್ತು ವಿವಾದಕ್ಕೆ ಕಾರಣರಾದ ಕಾದಂಬರಿಕಾರರಾಗಿದ್ದಾರೆ.ಅವರ ಕಾದಂಬರಿಗಳಲ್ಲಿ ವಸ್ತು ವೈವಿಧ್ಯತೆಯನ್ನು ಕಾಣಬಹುದು. ಇವರ ಪ್ರತಿಯೊಂದು ಕಾದಂಬರಿ ಆಳವಾದ ಅಧ್ಯಯನದಿಂದ ಮತ್ತು ಸಂಶೋಧನೆಯಿಂದ ಮೂಡಿ ಬರುತ್ತವೆ. ಇವರು ಆಯ್ದುಕೊಳ್ಳುವ ವಸ್ತುಗಳು ಸಮಕಾಲೀನ ಸ್ಥಿತಿಗೆ ಸವಾಲನ್ನು ಒಡ್ಡುತ್ತವೆ.

ಭೈರಪ್ಪನವರ ಕಾದಂಬರಿ 'ಜಲಪಾತ' ಇಂದಿನ ದಿನಮಾನಗಳಲ್ಲಿ ಹಲವಾರು ವಿಷಯಗಳಲ್ಲಿ ಮಹತ್ವ ಪಡೆದುಕೊಳ್ಳುತ್ತದೆ. ಜಲಪಾತಕ್ಕೂ ಮುನ್ನ ಭೈರಪ್ಪನವರ ಕಾದಂಬರಿಗಳು ಪ್ರಕಟಗೊಂಡಿದ್ದವು. ಆದರೂ . ಜಲಪಾತ ಕಾದಂಬರಿ ಇನ್ನಿತರ ಕಾದಂಬರಿಗಳಂತೆ ಜನಪ್ರಿಯವಾಗದೇ ಇದ್ದಿದ್ದು ವಿಸ್ಮಯವೇ ಸರಿ. ಹಾಗಾಗಿ ಈ ಕಾದಂಬರಿಯನ್ನು ಆಯ್ದುಕೊಂಡಿದ್ದು, ನನ್ನ ಮೊದಲ ಆದ್ಯತೆ ಎಂದೇ ಹೇಳಬಹುದು. 'ಜಲಪಾತ' ಕಾದಂಬರಿಯಲ್ಲಿ ಬರುವ ಮುಂಬಯಿ ನಗರದ ಮಧ್ಯಮ ವರ್ಗದ ಜೀವನ ಚಿತ್ರಣ, ಗ್ರಾಮೀಣ ಬದುಕಿನ ಸ್ಥಿತ್ಯಂತರ ಮತ್ತು ಮನುಷ್ಯನ ವ್ಯಕ್ತಿತ್ವದ ಆಂತರಿಕ ಮತ್ತು ಬಾಹ್ಯ ತೊಳಲಾಟಗಳು ಈ ಕಾದಂಬರಿಯ ಮುಖ್ಯ ವಸ್ತುವಾಗಿರುತ್ತದೆ.

ಭೈರಪ್ಪನವರ ಕಾದಂಬರಿ 'ಜಲಪಾತ' ಇಂದಿಗೂ ಎಷ್ಟು ಪ್ರಸ್ತುತ ಎಂಬುದನ್ನು ತಿಳಿಸಿಕೊಡುವ ಮಹತ್ತರ ಉದ್ದೇಶವಿದೆ. ಕಾಲ ಬದಲಾದರೂ ಸಮಾಜದ ವ್ಯಕ್ತಿಗಳ ಮನಸ್ಥಿತಿ ಮತ್ತು ಅವರ ಮನೋಧೋರಣೆ ಹಾಗೇ ಇದೆ ಎಂಬುದು ಈ ಕಾದಂಬರಿ ಓದಿದ ಎಂತಹವರಿಗೂ ಅವರಿವಾಗುತ್ತದೆ. ಕಾದಂಬರಿಯಲ್ಲಿ ಕಂಡುಬರುವ ಅತ್ಯಂತ ಸಾಮಾಜಿಕ ಕಳಕಳಿಯುಳ್ಳ ವ್ಯಕ್ತಿ ಚಿತ್ರಣ, ಅಲ್ಲಿನ ಮೌಲ್ಯ, ಸಾಮಾಜಿಕ ಸಂಧಾನ ಮುಂತಾದವುಗಳನ್ನು ತಿಳಿಸಿಕೊಡುವ ಉದ್ದೇಶದಿಂದ ಈ ಅಧ್ಯಯನವನ್ನು ಕೈಗೆತ್ತಿಕೊಳ್ಳಲಾಗಿದೆ. ಹಾಗೆಯೇ ಜಲಪಾತ ಕಾದಂಬರಿಯಲ್ಲಿ ಬರುವ ಪಾತ್ರಗಳನ್ನು ಅರ್ಥೈಸಿಕೊಳ್ಳುವುದು, ನಗರ ಹಾಗೂ ಗ್ರಾಮೀಣ ಪ್ರದೇಶದ ಬದುಕಿನ ಆಗು–ಹೋಗುಗಳನ್ನು ಪರಿಶೀಲಿಸುವುದು ಮತ್ತು ಮುಂಬೈ ಜನರ ಮತ್ತು ಅಗ್ರಹಾರ ಜನರ ಸಾಮಾಜಿಕ ಸ್ಥಿತಿಗತಿಗಳನ್ನು ಅರ್ಥಮಾಡಿಕೊಳ್ಳುವುದು, ಜಲಪಾತ ಕಾದಂಬರಿಯ ಪಾತ್ರಧಾರಿಗಳು ಹೇಳ ಹೊರಟಿರುವ ವಸ್ತು ವಿಷಯವನ್ನು, ಚರ್ಚಿಸುವುದು ನನ್ನ ಉದ್ದೇಶವಾಗಿದೆ. ಪ್ರಮುಖವಾಗಿ ಈ ಕಾದಂಬರಿಯು ಮುಂಬಯಿ ಜನರ ಸಾಮಾಜಿಕ ಜೀವನದ ಏಳು –ಬೀಳುಗಳನ್ನು ಚಿತ್ರಿಸಿದೆ. ಇಲ್ಲಿನ ಜನರ ಒತ್ತಡ, ಆಸೆ, ಆಕಾಂಕ್ಷೆಗಳು, ಪ್ರತಿಭೆ, ನೋವು ನಲಿವು, ಬದುಕನ್ನು ಕಟ್ಟಿಕೊಳ್ಳುವ ಸಲುವಾಗಿ ಒದ್ದಾಡಿ ಬದುಕಬೇಕಾದ ಅನಿವಾರ್ಯತೆ ಮುಂತಾದವುಗಳನ್ನು ಓದುಗನ ಮನಸಿಗೆ ನಾಟುತ್ತವೆ.

'ಜಲಪಾತ'ದ ಒಳ ಹರಿವಿನಲ್ಲಿನ ಮೌಲ್ಯ ಸಂಘರ್ಷ, ಒಂದು ಸ್ತರದಲ್ಲಿ ಸಂಪ್ರದಾಯಬದ್ಧ ಮತ್ತು ಆಧುನಿಕ ವಿಚಾರಧಾರೆಗಳ ನಡುವಿನ ಸಂಘರ್ಷ. ಮತ್ತೊಂದು ಸ್ತರದಲ್ಲಿ, ಎಂದಿನಿಂದಲೋ ಒಪ್ಪಿಕೊಂಡು ಬಂದಿರುವ ನೈತಿಕ ಮೌಲ್ಯತಳು ಹಾಗೂ ವಿಚಾರಗಳ ನಡುವಿನ ಸಂಘರ್ಷ. ಇವೆರಡರ ಜೊತೆಗೇ ಯಂತ್ರ ನಾಗರೀಕತೆ ಬದುಕಿನ ಎಲ್ಲ ರಂಗಗಳಲ್ಲಿಯೂ ತರುವ ಕ್ರೌರ್ಯ, ಮಧ್ಯಮ ಹಂತದ ಗುಣ, ಮತ್ತು ಏಕತಾನತೆಯ ಚಿತ್ರಣದೊಂದಿಗೆ, ಪ್ರಕೃತಿಗೂ ಮನುಷ್ಯನಿಗೂ ನಡುವೆ ಇರಬೇಕಾದ ಸಾಮರಸ್ಯದ ಕೊಂಡಿ ಕಳಚಿಕೊಂಡಿರುವುದೂ 'ಜಲಪಾತ'ದಲ್ಲಿ ಅನಾವರಣಗೊಳ್ಳುತ್ತದೆ.[3]

ಹೀಗೆ ಜಲಪಾತ ಕಾದಂಬರಿಯು ಹಲವಾರು ಮಜಲುಗಳಲ್ಲಿ ಓದುಗನನ್ನು ಚಿಂತನೆಗೆ ಹಚ್ಚುವಲ್ಲಿ ಕಾದಂಬರಿಯ ಸತ್ವ ಅಡಗಿದೆ. ಮುಂಬಯಿ ನಗರದಲ್ಲಿ ಕಂಡುಬರುವ ಜೀವನದ ವೈವಿಧ್ಯತೆ ಮತ್ತು ನಗರೀಕರಣದ ಬೆಳವಣಿಗೆಯೊಂದಿಗೆ ಮನುಷ್ಯ ಯಾಂತ್ರಿಕವಾಗಿ ಸೊರಗಿ ಹೋಗುತ್ತಿರುವ ಕಾಲಘಟ್ಟದಲ್ಲಿ ಆತನ ಸಾರ್ಥಕ ಜೀವನದ ಉದ್ದೇಶವನ್ನು

[3] ಪುಟ 110, 'ಯುಗಸಾಕ್ಷಿ', ಎಲ್.ವಿ.ಶಾಂತಕುಮಾರಿ

ಕಂಡಕೊಳ್ಳುವುದನ್ನು ಕಾಣಬಹುದು. ಈ ಕಾದಂಬರಿಯ ನಾಯಕ ಶ್ರೀಪತಿ ಕಲಾವಿದನಾಗಿ ಯಶಸ್ವಿಯಾಗುತ್ತಾನೆಯೇ? ನಾಯಕನ ಹೆಂಡತಿ ವಸು ಸಂಗೀತದಲ್ಲಿ ಮೇರು ಸಾಧನೆಯನ್ನು ಮಾಡುತ್ತಾಳೆಯೇ? ಪಾತ್ರದಲ್ಲಿ ಚಿತ್ರಿತವಾಗಿರುವ ಡಾ.ನಾಡಗೌಡರ ಪಾತ್ರದ ಚಿತ್ರಣ ಇಂದಿಗೂ ಪ್ರಸ್ತುತವೇ? ಮುಂತಾದ ಅಂಶಗಳನ್ನು ಈ ಕಾದಂಬರಿಯ ಮೂಲಕ ಕಂಡುಕೊಳ್ಳುವುದಾಗಿದೆ.

ಇತ್ತೀಚೆಗಷ್ಟೇ ಜಲಪಾತ ಕಾದಂಬರಿಗೂ ಮುನ್ನ ಬರೆದ ವಂಶವೃಕ್ಷ ಕಾದಂಬರಿಯು ಐವತ್ತು ವರ್ಷಗಳನ್ನು ಪೂರೈಸಿಕೊಂಡಿದೆ. ಇದು ಬಹು ವಿವಾದಕ್ಕೂ ಒಳಗಾದ ಕೃತಿಯೆಂದೂ ಹೇಳಬಹುದು. ಇದೇ ಸಂದರ್ಭದಲ್ಲಿ 1967 ರಲ್ಲಿ ಬರೆಯಲ್ಪಟ್ಟ ಕಾದಂಬರಿ 'ಜಲಪಾತ' ಯಾಕೆ? ಜನಪ್ರಿಯತೆಯನ್ನು ಹೊಂದುವಲ್ಲಿ ವಿಫಲತೆಯನ್ನು ಹೊಂದಿತು ಎಂಬುದನ್ನು ಕಂಡುಕೊಳ್ಳುವುದು ಕೂಡ ಈ ಅಧ್ಯಯನದ ಪ್ರಮುಖ ಉದ್ದೇಶವಾಗಿದೆ. ಬಹುಶಃ ಓದುಗರು ವಂಶವೃಕ್ಷದ ನಂತರ ಬಂದ ಜಲಪಾತವನ್ನು ಅಷ್ಟೇನೂ ಪರಿಗಣಿಸಲಿಲ್ಲವೇನೋ ಎಂದೆನಿಸುತ್ತದೆ. ಆದರೂ ಜಲಪಾತ ಕಾದಂಬರಿಯಲ್ಲಿ ಹೇಳಿರುವ ವಿಷಯಗಳು ಇಂದಿಗೂ ವಾಸ್ತವತೆಯ ಮೇಲೆ ನಿಂತಿದೆ.

ಅಧ್ಯಾಯ 2

ಎಸ್.ಎಲ್.ಭೈರಪ್ಪನವರ ಬದುಕು ಬರಹ

ಕನ್ನಡ ಸಾಹಿತ್ಯವು ತುಂಬಾ ಶ್ರೀಮಂತವಾದುದು. ಇಲ್ಲಿ ಜ್ಞಾನ ಪೀಠ ಪ್ರಶಸ್ತಿ ಪಡೆದ ಎಂಟು ಮಂದಿ ಮಹಾನ್ ಸಾಹಿತಿಗಳಿದ್ದಾರೆ. ಇಲ್ಲಿನ ಸಾಹಿತ್ಯವು ಭಾರತದ ಇನ್ನಿತರ ಭಾಷೆಗಳಿಗೆ ಅನುವಾಗುತ್ತಿದ್ದು, ಶಾಸ್ತ್ರೀಯ ಭಾಷೆಯ ಸ್ಥಾನಮಾಮವನ್ನು ಕೂಡ ಪಡೆದುಕೊಂಡಿದೆ. ಇಂತಹ ಶ್ರೀಮಂತ ಭಾಷೆಯಲ್ಲಿ ಸಾಹಿತ್ಯ ಕೃಷಿಯನ್ನು ಮಾಡುತ್ತಿರುವ ಎಸ್.ಎಲ್.ಭೈರಪನವರು ಬರವಣಿಗೆಯಲ್ಲಿ ತಮ್ಮದೇ ಆದ ಛಾಪನ್ನು ಮೂಡಿಸಿದ್ದಾರೆ. ಆ ಛಾಪಿನ ಮೂಲಕವೇ ಕನ್ನಡ ಭಾಷೆಗಷ್ಟೇ ಅಲ್ಲದೇ ಇನ್ನಿತರ ಭಾಷೆಗಳಿಗೂ ಅನುವಾದಗೊಂಡು ಕನ್ನಡದ ಕೀರ್ತಿ ಪತಾಕೆಯನ್ನು ಎತ್ತಿ ಹಿಡಿದಿದ್ದಾರೆ.

ಸಮಕಾಲೀನ ಭಾರತೀಯ ಸಾಹಿತ್ಯದಲ್ಲಿ ಜನಪ್ರಿಯ ಕಾದಂಬರಿಕಾರರಾಗಿರುವ ಎಸ್.ಎಲ್.ಭೈರಪ್ಪನವರು ಹಾಸನ ಜಿಲ್ಲೆಯ ಚೆನ್ನರಾಯಪಟ್ಟಣ ತಾಲ್ಲೂಕಿನ ಸಂತೆ ಶಿವರ ಗ್ರಾಮದವರು. ಇವರು ಜನಿಸಿದ್ದು 26–7–1934ರಂದು. ಇವರು ತಮ್ಮ ಬಾಲ್ಯದಲ್ಲಿಯೇ ತನ್ನ ತಾಯಿ ಮತ್ತು ತಮ್ಮಂದಿರನ್ನು ಪ್ಲೇಗ್‌ನಿಂದಾಗಿ ಕಳೆದುಕೊಳ್ಳುತ್ತಾರೆ.

ಭೈರಪ್ಪನವರದು ವಿಭಿನ್ನ ವ್ಯಕ್ತಿತ್ವ, ಇವರಿಗೆ ಈಜುವುದು ಅಭ್ಯಾಸ. ದಿಟ್ಟತನ, ಧೈರ್ಯ, ಸಾಹಸ ಪ್ರವೃತ್ತಿ ಹೀಗೆ ಇವುಗಳೆಲ್ಲವೂ ಚಿಕ್ಕ ವಯಸ್ಸಿನಲ್ಲಿಯೇ ಮೈಗೂಡಿಕೊಂಡಿದ್ದವು. ಶಾಲಾ ದಿನಗಳಲ್ಲಿ ಬುದ್ಧಿವಂತ ವಿದ್ಯಾರ್ಥಿಯಾಗಿದ್ದ ಭೈರಪ್ಪರವರನ್ನು ಎಲ್ಲಾ ರೀತಿಯ ನೆರವುಗಳಿಂದ ಬೆಳೆಸಿದವರು ಸ್ವಾಮಿ ಮೇಷ್ಟ್ರ ಮತ್ತು ಶ್ರೀನಿವಾಸ ಅಯ್ಯಂಗಾರ್ ಎಂಬ ಗುರುಗಳು. ಇವರು ನೋಡಿದ "ಗುಬ್ಬಿ ಕಂಪೆನಿ"ಯ ಕುರುಕ್ಷೇತ್ರ ನಾಟಕವು ಒಂದು ಹೊಸ ಅನುಭವವನ್ನು ನೀಡಿತು. ನಂತರ ಶಾಲಾ ದಿನಗಳಲ್ಲಿ ಕುರುಕ್ಷೇತ್ರ ನಾಟಕ ರಚಿಸಿದ್ದು ಇವರ ಬರವಣಿಗೆಯ ಆರಂಭವನ್ನು ತಿಳಿಸುತ್ತದೆ. ಆಗ ಅವರಿಗೆ ವಯಸ್ಸು ಕೇವಲ 12 ರಿಂದ 13.

ಎಸ್.ಎಲ್.ಭೈರಪ್ಪನವರು ತಮ್ಮ ಪ್ರಾಥಮಿಕ ಶಿಕ್ಷಣವನ್ನು ಚನ್ನರಾಯಪಟ್ಟಣ ತಾಲ್ಲೂಕಿನಲ್ಲಿ ಪೂರ್ಣಗೊಳಿಸಿದರು. ಗೊರೂರಿನಲ್ಲಿ ಸ್ವಾಮಿಮೇಷ್ಟ್ರ ಅವರ ಸಹಾಯದಿಂದ ಮಾಧ್ಯಮಿಕ ಶಿಕ್ಷಣವನ್ನು ಮುಂದುವರೆಸುತ್ತಾರೆ. ಗೊರೂರಿನಲ್ಲಿ ರಾಮಸ್ವಾಮಿ ಅಯ್ಯಂಗಾರ್ ಅವರ ಮನೆಯು ಸೇರಿದಂತೆ ವಾರನ್ನ ಮಾಡಿಕೊಂಡು ತಮ್ಮ ಶಿಕ್ಷಣವನ್ನು

ಮುಂದುವರಿಸುತ್ತಾರೆ. ಇವರಿಗೆ ಪ್ರಾಥಮಿಕ ಶಾಲೆಯ ವಿದ್ಯಾರ್ಥಿಗಳಿಗೆ ಮನೆಪಾಠ ಹೇಳುವ ಅವಕಾಶವು ದೊರೆಯುತ್ತದೆ. ಗೊರೂರಿನಲ್ಲಿ ಪ್ರೌಢಶಿಕ್ಷಣ ಇಲ್ಲವಾದ್ದರಿಂದ ನುಗ್ಗೆಹಳ್ಳಿ ಶ್ರೀನಿವಾಸ್ ಅಯ್ಯಂಗಾರ್ ಅವರ ಸಲಹೆ ಮೇರೆಗೆ ಭಿಕ್ಷಾನ್ನ ಮಾಡಿಕೊಂಡು ಓದು ಮುಂದುವರೆಸುತ್ತಾರೆ. ನವೋದಯ ಪ್ರೌಢಶಾಲೆಯಲ್ಲಿ ಕನ್ನಡ ಪಂಡಿತರಾದ ಸಿ.ಆರ್.ಶ್ರೀನಿವಾಸ್ ಅವರಿಂದ ಪ್ರೋತ್ಸಾಹ ಸಿಗುತ್ತದೆ. ಚರ್ಚಾಸ್ಪರ್ಧೆ ಓದಿನಲ್ಲಿ ಮೇಲುಗೈ ಸಾಧಿಸುತ್ತಾರೆ. ತಮ್ಮ ವಿದ್ಯಾಭ್ಯಾಸಕ್ಕಾಗಿ ಗೇಟ್ ಕೀಪರ್ ಕೆಲಸ ಮಾಡುತ್ತಾ ಅಲ್ಲಿ ನೋಡಿದ "ಚಂದ್ರಲೇಖ" ಸಿನಿಮಾ ಕಥೆಯನ್ನು ರಜಾ ದಿನಗಳಲ್ಲಿ ಸ್ವಾರಸ್ಯಕರವಾಗಿ ಹೇಳುತ್ತಾ ಹಾಡುಗಳನ್ನು ಅಭಿನಯಪೂರ್ವಕವಾಗಿ ಹಾಡಿ ಸುತ್ತಹಳ್ಳಿ ಜನಗಳಿಂದ ಹಣ ಪಡೆದು ಓದಲು ಮತ್ತು ಶಾಲಾ ಶುಲ್ಕ ಕಟ್ಟಲು ಬಳಸಿಕೊಳ್ಳುತ್ತಾರೆ.

ಚನ್ನರಾಯಪಟ್ಟಣದಲ್ಲಿ ಪ್ರೌಢಶಾಲೆ ತೇರ್ಗಡೆ ಹೊಂದಿದ ಮೇಲೆ (ಪೋರ್ತ್ ಫಾರಂ) ಮೊದಲ ವರ್ಷ ಶಾರದ ವಿಲಾಸ ಹೈಸ್ಕೂಲಿಗೆ ಸೇರಿ ಉತ್ತಮ ಚರ್ಚಾಪಟುವಾಗಿ ಬಹುಮಾನವನ್ನು ಪಡೆಯುತ್ತಾರೆ. ಶಾರದ ವಿಲಾಸ ಹೈಸ್ಕೂಲಿನಲ್ಲಿ ಬಿ.ರಾಮಣ್ಣ, ಕೆ.ಬಿ.ನಾರಾಯಣ ಸೋಸಲೆ, ರಾಜಗೋಪಾಲ್ ಅಯ್ಯಂಗಾರ್ ಸೇರಿದಂತೆ ಹಲವು ಮಂದಿ ಭೈರಪ್ಪನವರ ಮೇಲೆ ಪ್ರಭಾವ ಬೀರಿದರು. ಬಡ ಹುಡುಗನಾದರೂ ಆತ್ಮಾಭಿಮಾನದಿಂದ ಬದುಕಬೇಕು ಎಂಬುದನ್ನು ಬೋಧಿಸಿದವರು 'ಮೈಸೂರು ಪತ್ರಿಕೆ'ಯ ತಿರುಮಕೂಡಲು ನಾರಾಯಣರವರು. ಸೃಜನಶೀಲ ಗುಣಗಳನ್ನು ಮೈಗೂಡಿಸಿಕೊಳ್ಳುತ್ತಿದ್ದ ಭೈರಪ್ಪನವರು ಕುಸ್ತಿಯ ಆಕರ್ಷಣೆಗೆ ಒಳಗಾಗಿ ಗರಡಿಗೆ ಹೋಗಲು ಆರಂಭಿಸುತ್ತಾರೆ.

ಇವರು ಎಸ್ಎಸ್ಎಲ್‌ಸಿ ತೇರ್ಗಡೆ ಹೊಂದಿದ ನಂತರ ಯುವರಾಜ ಕಾಲೇಜು ಸೇರಿ ಇಂಟರ್ ಮುಗಿಸುತ್ತಾರೆ. ಇಲ್ಲಿಂದ ಮುಂದೆ ಕಲಿಕೆಯ ಹವ್ಯಾಸ ಚಿಂತನ – ಮಂಥನಗಳಲ್ಲಿ ತೊಡಗುತ್ತಾರೆ. ಎ.ಎನ್.ಮೂರ್ತಿರಾವ್, ಎಸ್.ವಿ.ರಂಗಣ್ಣ, ವಿ.ಸೀತಾರಾಮಯ್ಯ, ಮಾಸ್ತಿ, ಕಾರಂತರು, ವಿ.ಕೃ.ಗೋಕಾಕ್ ಹಾಗೂ ಮೊದಲಾದ ವಿದ್ವಾಂಸರುಗಳ ಉಪನ್ಯಾಸವನ್ನು ಕೇಳಿ ಪ್ರಭಾವಿತರಾಗುತ್ತಾರೆ. ಕಾಲೇಜು ಶಿಕ್ಷಣದುದ್ದಕ್ಕೂ ಭೈರಪ್ಪನವರಿಗೆ ದ್ರೋಣಾಚಾರ್ಯರಂತೆ ಮಾರ್ಗದರ್ಶನ ಮಾಡಿದವರು ಪ್ರೊ.ಯಮುನಾಚಾರ್ಯರು.

ಯಮುನಾಚಾರ್ಯರು ತಮ್ಮ ಮೇಲೆ ಬೀರಿದ ಪ್ರಭಾವವನ್ನು 'ಭಿತ್ತಿ' ಕಾದಂಬರಿಯಲ್ಲಿ ಹೀಗೆ ಹೇಳಿದ್ದಾರೆ. "ಯಮುನಾಚಾರ್ಯರ ಅಧ್ಯಯನ ಸಾಹಿತ್ಯವನ್ನು ಒಳಗೊಂಡಿತ್ತು. ಗ್ರೀಕರ ದುರಂತ ನಾಟಕಗಳಲ್ಲದೇ, ಬ್ರಾಡ್ಲೆಯ ವ್ಯಾಖ್ಯಾನದ ಸಮೇತ ಶೇಕ್ಸ್‌ಪಿಯರ್‌ನ ರುದ್ರ ನಾಟಕಗಳು ಐತಿಹಾಸಿಕ ನಾಟಕಗಳನ್ನು ಅಲ್ಲಲ್ಲಿ ಸನ್ನಿವೇಶಗಳ ಸಮೇತ ಉದ್ಧರಿಸುವಷ್ಟು ಓದಿದ್ದರು. ಥೋರೋ, ಎಮರ್‌ಸನ್, ಡಾಂಟೆ, ಟಾಲ್‌ಸ್ಟಾಯ್‌ರನ್ನು ಚೆನ್ನಾಗಿ ಓದಿದ್ದರು. ರೋಮಾರೋಲಾರ ಜೀನ ಕ್ರಿಷ್ಟಿಫಿಯಾವನ್ನು ನನಗೆ ಓದಲು ಹೇಳಿದವರು ಅವರೇ. ಭಾಗವತ, ರಾಮಾಯಣಗಳನ್ನು ಓದಿದ್ದರು. ವ್ಯಾಸಭಾರತದಲ್ಲಿ ವಿದುರ ನೀತಿ ಹಾಗೂ ಶಾಂತಿ ಪರ್ವಗಳಲ್ಲಿ ಅವರ ಆಸಕ್ತಿ ಹೆಚ್ಚು. ಕಾಳಿದಾಸ ಭಾಸಾದಿಗಳ ಪರಿಚಯವಿತ್ತು. ಅವರು ನಾಟಕದ ವರದಾಚಾರ್ಯರಿಗೆ ಸಮೀಪ ಬಂಧುಗಳು. ವರದಾಚಾರ್ಯರ ತಮ್ಮನ ಮಗಳೇ ಯಮುನಾಚಾರ್ಯರ ಹೆಂಡತಿ. ಫಿಲಾಸಫಿಯಲ್ಲಿ ಬೇರೆ ಯಾವ ಮೇಷ್ಟ್ರು ಯಮುನಾಚಾರ್ಯರಂತೆ ಭಿನ್ನ ಬುದ್ಧಿ ಭಾವನೆಗಳನ್ನು ವಿಸ್ತರಿಸಿ ಮೇಲೆತ್ತಲಿಲ್ಲ"[4] ಯಮುನಾಚಾರ್ಯರು ತಮ್ಮ ಮೇಲೆ ಅವರ ಪ್ರಭಾವ ಬೀರಿದ ಬಗ್ಗೆ ಹೇಳುತ್ತಾರೆ. ಅವರ ಮಾರ್ಗದರ್ಶದಂತೆ ಎಸ್.ಎಲ್.ಭೈರಪ್ಪನವರು ಅಧ್ಯಯನ ಮಾಡಿ, ಸ್ನಾತಕೋತ್ತರ ಪದವಿಯನ್ನು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗುವುದರ ಜೊತೆಗೆ ಎರಡು ಚಿನ್ನದ ಪದಕ ಒಂದು ನಗದು ಬಹುಮಾನವನ್ನು ಪಡೆಯುತ್ತಾರೆ. ಇಲ್ಲಿ ಭೈರಪ್ಪನವರು ತಮ್ಮ ಗುರುಗಳಿಗೆ ನೀಡಿರುವ ಗೌರವವನ್ನು ಕಾಣಬಹುದು. ಯಾವುದೇ ಒಬ್ಬ ಗುರು ಒಬ್ಬ ಪ್ರತಿಭಾವಂತ ವಿದ್ಯಾರ್ಥಿಯನ್ನು ಕಂಡು ಹಿಡಿಯಬೇಕು, ಇಲ್ಲವೆ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಬೇಕಾದ ಪೂರಕ ಮಾಹಿತಿಯನ್ನು ಪಾಠದಲ್ಲಿ ಒದಗಿಸಿಕೊಡಬೇಕು. ಹೀಗೆ ಎರಡೂ ಕೆಲಸವನ್ನು ಮಾಡಿದ ಯಮುನಾಚಾರ್ಯರನ್ನು ಭೈರಪ್ಪನವರು ತಮ್ಮ ಆತ್ಮಕತೆಯಲ್ಲಿ ಸ್ಮರಿಸಿಕೊಳ್ಳುತ್ತಾರೆ.

'ಜಟ್ಟಿ ಮತ್ತು ಮಟ್ಟಿ' ಎಂಬ ಕುಸ್ತಿ ಪೈಲ್ವಾನನ್ನು ಕುರಿತು ಕಾದಂಬರಿಯನ್ನು ರಚಿಸಿ ಅದನ್ನು ಪ್ರಕಟಿಸಿ, ಓದಿಗಾಗಿ ಹಣ ಪಡೆಯುವ ಸಲುವಾಗಿ ತರಾಸು ಅವರ ಬಳಿ ಸಹಕಾರ ಬೇಡುತ್ತಾರೆ. 'ಭೀಮಕಾಯ' ಕಾದಂಬರಿ ಮತ್ತು 'ಗತಜನ್ಮಕಥೆ' ಎಂಬ ಎರಡು ಕೃತಿಗಳನ್ನು ಇಂಟರ್ ಓದುವಾಗಲೇ ರಚಿಸುತ್ತಾರೆ. ಭೈರಪ್ಪನವರ ಮೇಲೆ ಪ್ರಭಾವ ಬೀರಿದ ಮತ್ತೊಬ್ಬ ವ್ಯಕ್ತಿ ಎನ್.ಕೃಷ್ಣಪ್ಪ.

---

[4].ಪುಟ 256, 'ಭಿತ್ತಿ', ಎಸ್.ಎಲ್.ಭೈರಪ್ಪ

ಇಂಟರ್ ಪಾಸಾದ ಮೇಲೆ ಮಹಾರಾಜ ಕಾಲೇಜಿನಲ್ಲಿ ತತ್ವಶಾಸ್ತ್ರವನ್ನು ಐಚ್ಛಿಕ ವಿಷಯವಾಗಿ ಆರಿಸಿಕೊಂಡು ಬಿ.ಎ ಆನರ್ಸ್‌ಗೆ ಸೇರಿಕೊಂಡರು. ಕಾರ್ಯಕ್ರಮವೊಂದರಲ್ಲಿ "ಗಂಗೂಬಾಯಿ ಹಾನಗಲ್" ಅವರ ಸಂಗೀತ ಕೇಳಿ ಶಾಸ್ತ್ರೀಯವಾಗಿ ಕಲಿಯಲು ಆರಂಭಿಸಿದರು. ಹುಬ್ಬಳ್ಳಿಯ ಕಾಡಸಿದ್ದೇಶ್ವರ ಕಾಲೇಜಿನಲ್ಲಿ ಅಧ್ಯಾಪಕರಾಗಿ 1958ರಲ್ಲಿ ಕೆಲಸಕ್ಕೆ ಸೇರಿ ತಮ್ಮ ವೃತ್ತಿ ಜೀವನವನ್ನು ಆರಂಭಿಸಿದರು. ಎಂ.ಎಸ್.ಕಸ್ತೂರಿ ಅವರಲ್ಲಿ ಸಂಗೀತಾಭ್ಯಾಸ ಮುಂದುವರಿಯುತ್ತದೆ. ಅಲ್ಲಿಯೇ 'ಧರ್ಮಶ್ರೀ' ಕಾದಂಬರಿ ಹುಟ್ಟುತ್ತದೆ.

ಭೈರಪ್ಪನವರು ತಮ್ಮ 'ಭಿತ್ತಿ' ಆತ್ಮವೃತ್ತಾಂತದಲ್ಲಿ ತಮ್ಮ ಬರವಣಿಗೆಗೆ ಮೂಲ ಧಾತುವಾದ ತಮ್ಮ ಬಯಲು ಸೀಮೆ ಕುರಿತು ಈ ರೀತಿ ಹೇಳಿಕೊಂಡಿದ್ದಾರೆ. "ನನ್ನ ಬರವಣಿಗೆಯಲ್ಲಿ ಹಳ್ಳಿಯ ಚಿತ್ರಣವಾಗಿ ಚನ್ನರಾಯಪಟ್ಟಣ, ಅರಸೀಕೆರೆ, ತಿಪಟೂರು ತಾಲ್ಲೂಕುಗಳೇ ಪದೇ ಪದೇ ಬರುವ ಕಾರಣವೇನೆಂದರೆ ಈ ಪ್ರದೇಶದ ಅನುಭವವೇ ನನಗೆ ದಟ್ಟವಾಗಿ ಆಗಿರುವುದು. ಹುಬ್ಬಳ್ಳಿ, ಧಾರವಾಡಗಳ ಕಡೆಯ ಕೆಲವು ಹಳ್ಳಿಗಳನ್ನು ನಾನು ನೋಡಿದ್ದೇನೆ. ಅಲ್ಲಿ ಸಂಚರಿಸಿದ್ದೇನೆ. ಹಾಗೆ ಗುಜರಾತ್, ಬಿಹಾರ, ಯುಪಿಗಳ ಕೆಲವು ಹಳ್ಳಿಗಳನ್ನೂ ನೋಡಿ ಬಲ್ಲೆ. ಆದರೆ ಜೀವನ ವಿವರ ಭಾಷೆ ಮತ್ತು ಪಾತ್ರದ ಅರಿವುಗಳ ದೃಷ್ಟಿಯಿಂದ ಯಾವ ಅನುಮಾನ ಹಿಂಜರಿಕೆಗಳೂ ಇಲ್ಲದೇ ನಮ್ಮ ಈ ತೆಂಗಿನ ಸೀಮೆಯ ಜೀವನ ಗೊತ್ತಿರುವಷ್ಟು ದಟ್ಟವಾಗಿ ಬೇರೆಯವು ಗೊತ್ತಿಲ್ಲ. ಹಳ್ಳಿಯ ಕನ್ನಡವೆಂದರೆ ನನ್ನ ಹಿಡಿತಕ್ಕೆ ಬರುವುದು ಈ ನನ್ನ ಸೀಮೆಯದೇ. ಕೋಪ, ತಾಪ, ಖುಷಿ, ಪ್ರೀತಿ, ಸಜ್ಜನಿಕೆ, ಹಾದರ ಮೊದಲಾದ ಸಂದರ್ಭದಲ್ಲಿ ಬೈಗುಳಗಳಲ್ಲಿ ಈ ಪ್ರದೇಶದ ಕನ್ನಡವು ಹೇಗೆ ಬಾಗಿ ಬಳುಕಿ ಚಿತ್ರಕಶಕ್ತಿಯಿಂದ ಬಳಕೆಯಾಗುತ್ತದೆಂಬುದು ನನಗೆ ಜೀವನಾನುಭವದಿಂದ ಗೊತ್ತು. ಉಳಿದ ಕನ್ನಡ ಅಷ್ಟಕ್ಕೂ ಗೊತ್ತಿಲ್ಲ"[5] ಭೈರಪ್ಪನವರ ಕಾದಂಬರಿಗಳು ಹಲವಾರು ಭಾಷೆಗಳಿಗೆ ಭಾಷಾಂತರಗೊಂಡಿವೆ. ಇವರ ಕಾದಂಬರಿಗಳು ಸಾರ್ವಕಾಲಿಕ ಮತ್ತು ಸಮಕಾಲೀನ ಪ್ರಸ್ತುತತೆಯನ್ನು ಹೊಂದಿರುವುದರಿಂದ ಸಾರ್ವಜನಿಕ ಚರ್ಚೆಯನ್ನು ಹುಟ್ಟಿಹಾಕಿವೆ. ಉದಾ: 'ಆವರಣ', 'ಯಾನ'.

---

[5] ಪುಟ 21, 'ಭಿತ್ತಿ', ಎಸ್.ಎಲ್.ಭೈರಪ್ಪ

ಯಶಸ್ಸು:

ಇವರಿಗೆ 2015ರಲ್ಲಿ ಸಾಹಿತ್ಯ ಅಕಾಡೆಮಿ ಫೆಲೋಶಿಪ್, 2011ರಲ್ಲಿ ನಾಡೋಜ ಪ್ರಶಸ್ತಿ, 2011ರಲ್ಲಿ 'ಮಂದ್ರ' ಕಾದಂಬರಿಗೆ 'ಸರಸ್ವತಿ ಸಮ್ಮಾನ್' ಪ್ರಶಸ್ತಿ, 2005ರಲ್ಲಿ ಕರ್ನಾಟಕ ಸರ್ಕಾರದ 'ಪಂಪ' ಪ್ರಶಸ್ತಿ, 1975ರಲ್ಲಿ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, 1966ರಲ್ಲಿ ಕನ್ನಡ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಜೊತೆಗೆ ಇನ್ನೂ ಮುಂತಾದ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಅಷ್ಟೇ ಅಲ್ಲದೆ, 1999 ರಲ್ಲಿ ಕನಕಪುರದಲ್ಲಿ ನಡೆದ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದ್ದರು.

1958ರಲ್ಲಿ ಸರಸ್ವತಿಯವರೊಡನೆ ಭೈರಪ್ಪನವರ ವಿವಾಹ ನಡೆಯುತ್ತದೆ. ಈ ಮಧ್ಯೆ ಇಂಗ್ಲಿಷ್ ವಿಭಾಗದ ಪ್ರೊ.ನಾಡಗೌಡರ ಸಲಹೆ ಮೇರೆಗೆ ಅಮೆರಿಕ ದೇಶದಲ್ಲಿ 'ಸ್ಮಿತ್‌ಮಂಡ್' ಮತ್ತು 'ಫುಲ್‌ಬ್ರೈಟ್ ಪ್ರತಿಷ್ಠಾನ'ದ ವಿದ್ಯಾರ್ಥಿ ವೇತನ ದೊರಕುತ್ತಿದ್ದರೂ, ಕಾರಾಣಾಂತರಗಳಿಂದ ತಪ್ಪುತ್ತದೆ. ಗುಜರಾತ್‌ನ ಸರ್ದಾರ್ ಪಟೇಲ್ ವಿಶ್ವವಿದ್ಯಾನಿಲಯಕ್ಕೆ 1960ರಲ್ಲಿ ಸೇರುತ್ತಾರೆ. 1967ರಲ್ಲಿ ಎನ್‌ಸಿಇಆರ್‌ಟಿಗೆ ಸೇರುತ್ತಾರೆ. ದೆಹಲಿಯಲ್ಲಿ ನಾಲ್ಕೂವರೆ ವರ್ಷದಲ್ಲಿ 'ಗ್ರಹಣ', 'ಗೃಹಭಂಗ', 'ನಿರಾಕರಣ', 'ದಾಟು', ಕಾದಂಬರಿಗಳನ್ನು ರಚಿಸುತ್ತಾರೆ. 1971ರಲ್ಲಿ ಮೈಸೂರಿನ ರೀಜನಲ್ ಕಾಲೇಜ್ ಆಫ್ ಎಜುಕೇಷನ್‌ನಲ್ಲಿ ಕೆಲಸಕ್ಕೆ ಸೇರುತ್ತಾರೆ. ಅವರು ಇಲ್ಲೂ ಕೂಡ 'ಅನ್ವೇಷಣಾ', 'ಪರ್ವ', 'ನೆಲೆ', 'ಸಾಕ್ಷಿ', 'ಅಂಚು' ಮತ್ತು 'ತಂತು' ಕಾದಂಬರಿಗಳನ್ನು ಬರೆದಿದ್ದಾರೆ. 1991ರಲ್ಲಿ ನಿವೃತ್ತರಾಗಿ ವಿಶ್ರಾಂತಿ ಜೀವನವನ್ನು ನಡೆಸುತ್ತಿದ್ದಾರೆ.

ಭೈರಪ್ಪನವರ ಕಾದಂಬರಿಗಳಾದ ವಂಶವೃಕ್ಷ ಮತ್ತು ಮತದಾನ ಕನ್ನಡ ಚಲನಚಿತ್ರಗಳಾಗಿ ಜನಪ್ರಿಯವಾಗಿವೆ. 'ಮತದಾನ' ಚಲನಚಿತ್ರಕ್ಕೆ ರಾಷ್ಟ್ರಪ್ರಶಸ್ತಿ ಒಲಿದಿದೆ. 'ತಬ್ಬಲಿಯೂ ನೀನಾದೆ ಮಗನೇ' ಕಾದಂಬರಿ 'ಗೋಧೂಳಿ' ಹಿಂದಿ ಚಲನಚಿತ್ರವಾಗಿ ಅಪಾರ ಮೆಚ್ಚುಗೆ ಪಡೆದಿದೆ. 'ದಾಟು' ಮತ್ತು 'ಗೃಹಭಂಗ' ಕಾದಂಬರಿಗಳು ಕಿರುತೆರೆಯಲ್ಲಿ ಮೆಗಾ ಧಾರಾವಾಹಿಗಳಾಗಿ ಪ್ರಸಾರಗೊಂಡಿವೆ. 'ಗೋಧೂಳಿ' ಚಲನಚಿತ್ರಕ್ಕೆ ಭಾರತ ಸರ್ಕಾರವು ಶ್ರೇಷ್ಠ ಕಥಾ ಪ್ರಶಸ್ತಿ ನೀಡಿ ಗೌರವಿಸಿದೆ.

ಪ್ರತಿಭಾವಂತ ಸೃಜನಶೀಲ ಮಹಾನ್ ಮೇಧಾವಿ ಭೈರಪ್ಪನವರನ್ನು ಹುಡುಕಿಕೊಂಡು ಹಲವಾರು ಪ್ರಶಸ್ತಿಗಳು ಬಂದಿವೆ. 'ವಂಶವೃಕ್ಷ' ಕಾದಂಬರಿಗೆ ಕೇಂದ್ರಸಾಹಿತ್ಯ

ಅಕಾಡೆಮಿಯಿಂದ 1968ರಲ್ಲಿ ಶ್ರೇಷ್ಠ ಸಾಹಿತ್ಯ ಕೃತಿ ಪ್ರಶಸ್ತಿ, 'ದಾಟು' ಕಾದಂಬರಿಗೆ ಕರ್ನಾಟಕ ಸಾಹಿತ್ಯ ಅಕಾಡೆಮಿಯಿಂದ 1974ರಲ್ಲಿ ಶ್ರೇಷ್ಠ ಕೃತಿ ಪ್ರಶಸ್ತಿ ಮತ್ತು 1975ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿಯಿಂದ ಶ್ರೇಷ್ಠ ಕೃತಿ ಪ್ರಶಸ್ತಿ ದೊರಕಿದೆ. ಅವರು ಸಾಹಿತ್ಯಕ್ಕೆ ನೀಡಿದ ಸಮಗ್ರ ಕೊಡುಗೆಗಾಗಿ 1986ರಲ್ಲಿ ಕರ್ನಾಟಕ ಸರ್ಕಾರದ ಪ್ರಶಸ್ತಿ, 1988ರಲ್ಲಿ 'ಸಾಕ್ಷಿ' ಕಾದಂಬರಿಗೆ ಗ್ರಂಥಲೋಕದವರು ಕೊಡುವವರ್ಷದ ಶ್ರೇಷ್ಠ ಕವಿ ಪ್ರಶಸ್ತಿ, 1996ರಲ್ಲಿ ಸಮಗ್ರ ಕೃತಿಗಳಿಗೆ ಮಾಸ್ತಿ ಪ್ರಶಸ್ತಿ 1996–97ರಲ್ಲಿ ಕೋಲ್ಕತ್ತಾದ ಭಾರತೀಯ ಭಾಷಾ ಪರಿಷತ್ತಿನ ಸಂವತ್ಸರ ಪುರಸ್ಕಾರ, 1999ರಲ್ಲಿ ಸಮಗ್ರ ಸಾಹಿತ್ಯಕ್ಕೆ ಗೊರೂರು ಪ್ರಶಸ್ತಿ, 2005ರಲ್ಲಿ ಕರ್ನಾಟಕ ಸರ್ಕಾರದಿಂದ 'ಪಂಪ' ಪ್ರಶಸ್ತಿ, 2007ರಲ್ಲಿ ಎನ್‌ಟಿಆರ್ ರಾಷ್ಟ್ರೀಯ ಪ್ರಶಸ್ತಿ, 2011ರಲ್ಲಿ ಸರಸ್ವತಿ ಸಮ್ಮಾನ್ ಪ್ರಶಸ್ತಿ, 2004ರಲ್ಲಿ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ ಮತ್ತು 2007ರಲ್ಲಿ ಗುಲ್ಬರ್ಗ ವಿಶ್ವವಿದ್ಯಾನಿಲಯವು ಗೌರವ ಡಾಕ್ಟರೇಟ್ ಪದವಿ ನೀಡಿ ಗೌರವಿಸಿದೆ. 2011ರಲ್ಲಿ ಹಂಪಿ ಕನ್ನಡ ವಿಶ್ವವಿದ್ಯಾನಿಲಯವು ನಾಡೋಜ ಪದವಿ ನೀಡಿ ಗೌರವಿಸಿದೆ.

ಎಸ್.ಎಲ್.ಭೈರಪ್ಪ ಅವರ ಕೃತಿಗಳ ಪರಿಚಯ ಹೀಗಿದೆ.

1. ಭೀಮಕಾಯ – 1958
2. ಧರ್ಮಶ್ರೀ – 1961
3. ದೂರ ಸರಿದರು – 1962
4. ಮತದಾನ – 1965
5. ವಂಶವೃಕ್ಷ – 1965
6. ಜಲಪಾತ – 1967
7. ನಾಯಿ ನೆರಳು – 1968
8. ತಬ್ಬಲಿಯು ನೀನಾದೆ ಮಗನೇ – 1968
9. ಗೃಹಭಂಗ – 1970
10. ನಿರಾಕರಣ – 1971
11. ಗ್ರಹಣ –1972
12. ದಾಟು – 1973
13. ಅನ್ವೇಷಣೆ – 1973
14. ಪರ್ವ – 1979
15. ನೆಲೆ – 1983
16. ಸಾಕ್ಷಿ – 1986
17. ಅಂಚು – 1990
18. ತಂತು. – 1993
19. ಸಾರ್ಥ – 1998
20. ಮಂದ್ರಾ – 2002
21. ಆವರಣ– 2007
22. ಕವಲು – 2010
23. ಯಾನ – 2014

ಆತ್ಮವೃತ್ತಾಂತ:

ಭಿತ್ತಿ – 1996

ಸಾಹಿತ್ಯ ಚಿಂತನ ಗ್ರಂಥಗಳು:

ಸತ್ಯ ಮತ್ತು ಸೌಂದರ್ಯ

ಕಥೆ ಮತ್ತು ಕಥಾವಸ್ತು

ನಾನೇಕೆ ಬರೆಯುತ್ತೇನೆ?

ಸಂದರ್ಭ: ಸಂವಾದ 2011

ಸಂಪಾದಿತ:

1.ಗಂಗೂಬಾಯಿ ಹಾನಗಲ್ –1988 (ಅಶೋಕ್ ಡಿ.ರಾನಡೆ – ಅವರೊಡನೆ)

2.ಮನ –1992 (ಜೆ.ಆರ್.ಲಕ್ಷ್ಮಣ್ ರಾವ್ ಮತ್ತು ಪ್ರಧಾನಗುರುದತ್ತರೊಡನೆ)

ಚಲನಚಿತ್ರಗಳು:

ವಂಶವೃಕ್ಷ

ತಬ್ಬಲಿ ನೀನಾದೆ ಮಗನೇ

ಮತದಾನ

ನಾಯಿ ನೆರಳು

ಧಾರಾವಾಹಿಗಳು:

ಗೃಹಭಂಗ

ದಾಟು

ಅಧ್ಯಾಯ 3

ಜಲಪಾತ ಕಾದಂಬರಿಯಲ್ಲಿ ಸಾಮಾಜಿಕ ಜೀವನ ಚಿತ್ರಣ

1) ಬ್ರಾಹ್ಮಣರ ಅಗ್ರಹಾರದ ವಸ್ತುಸ್ಥಿತಿ ಚಿತ್ರಣ

ಜಲಪಾತ ಕಾದಂಬರಿಯಲ್ಲಿ ಬ್ರಾಹ್ಮಣರ ಅಗ್ರಹಾರದ ವಸ್ತುಸ್ಥಿತಿ ಚಿತ್ರಣವಿದೆ. ಅಗ್ರಹಾರದ ಚಿತ್ರಣವನ್ನು ಕಾದಂಬರಿಯ ಕಥಾ ನಾಯಕನಾದ ಶ್ರೀಪತಿಯ ಕಣ್ಣಿನಿಂದಲೇ ನೋಡಲಾಗುತ್ತದೆ. ಬ್ರಾಹ್ಮಣರ ಅಗ್ರಹಾರವೆಂದರೆ ಅದೊಂದು ರೀತಿಯಲ್ಲಿ ಕಲೆಗಳ ಸಂಗಮ. ಸಾಂಸ್ಕೃತಿಕ ಹಿನ್ನೆಲೆಯನ್ನು ಹೊಂದಿರುವ ಕೇಂದ್ರಗಳಾಗಿವೆ ಎನ್ನಬಹುದು. ಇಲ್ಲಿನ ಮಹಿಳೆಯರಲ್ಲಿ ಒಂದೊಂದು ಕಲೆ ಬೆರೆತು ಕೊಂಡಿರುತ್ತದೆ. ಹಾಗೆಯೇ ಶ್ರೀಪತಿಗೂ ಚಿತ್ರಕಲೆಯಲ್ಲಿ ಬ್ರಾಹ್ಮಣರ ಅಗ್ರಹಾರ ಕಲಾವೇದಿಕೆಯಾಗಿದೆ ಎಂದರೆ ತಪ್ಪಾಗಲಾರದು.

ಶ್ರೀಪತಿಯ ಕಲೆಗೆ ಜೀವ ತುಂಬಿದ್ದು ಅಗ್ರಹಾರದ ಕೇಶವ ದೇವಸ್ಥಾನದ ಹೊರ ಪೌಳಿಯಲ್ಲಿರುವ ಪುರಾಣದ ವಿಗ್ರಹಗಳು. ಇವೇ ಅವನಿಗೆ ಗುರುಗಳು. ಚಿಕ್ಕ ವಯಸ್ಸಿನಲ್ಲಿ ಕಾಗದದ ಮೇಲೆ ಅವುಗಳ ಆಕಾರವನ್ನು ಬರೆಯುತ್ತಿದ್ದನು. ಅದಕ್ಕೂ ಮೊದಲು ಶ್ರೀಪತಿಯ ಅಮ್ಮನೇ ಅವನಿಗೆ ಗುರುವಾಗಿದ್ದಳು. ಪ್ರತಿದಿನವೂ ದೇವರ ಮುಂದೆ ಮನೆಯ ಬಾಗಿಲಿಗೆ ವಿವಿಧ ರೀತಿಯಲ್ಲಿ ರಂಗೋಲಿ ಚಿತ್ರವನ್ನು ಬಿಡಿಸುತ್ತಿದ್ದಳು. ತೇರಿನ ದಿನದಂದು ಬೀದಿಯ ಅಗಲಕ್ಕೂ ರಂಗೋಲಿ ಕಲೆಯನ್ನು ಅಭಿವ್ಯಕ್ತಿಸುತ್ತಿದ್ದಳು. ಶಂಖ, ಚಕ್ರ, ಈಶ್ವರಲಿಂಗ, ಗಣಪತಿ, ಇಂದ್ರ, ರಥ, ಐರಾವತ ಹೀಗೆ ಅನೇಕ ಚಿತ್ರಗಳನ್ನು ರಂಗೋಲಿಯಲ್ಲಿಯೇ ಬಿಡಿಸುತ್ತಿದ್ದಳು. ಇವುಗಳನ್ನು ಶ್ರೀಪತಿಯನ್ನು ಪ್ರೇರೇಪಿಸುತ್ತಿದ್ದವು.

ಶ್ರೀಪತಿಗೆ ಅಗ್ರಹಾರವೇ ಗುರು. ಇಲ್ಲಿ ಕಲಿತ ಕಲೆಯನ್ನು ಮುಂದೆ ಮುಂಬಯಿ ತನಕ ಕೊಂಡೊಯ್ದು ಯಶಸ್ವಿಯಾಗುತ್ತಾನೆ. ಅಗ್ರಹಾರ ಎಂದೆಂದಿಗೂ ಶ್ರೀಪತಿಯ ಮನದಾಳದಲ್ಲಿ ಶಾಶ್ವತ ಸ್ಥಾನವನ್ನು ಗಳಿಸಿಕೊಂಡಿದೆ. ತನ್ನ ತಾಯಿ, ಅತ್ತೆ, ಮಾವ ಹೀಗೆ ಅನೇಕ ಜನರ ಪ್ರಭಾವಕ್ಕೆ ಒಳಗಾದ ಈತ ಅಗ್ರಹಾರವನ್ನು ನೋಡುವ ದೃಷ್ಟಿ ವಿಭಿನ್ನವಾದುದು. ತನ್ನ ಅಮ್ಮನಿಂದ ಪ್ರಭಾವಿತನಾಗಿ ಚಿತ್ರಕಲೆಯಲ್ಲಿ ಆಸಕ್ತಿ ಹುಟ್ಟಿಸಿಕೊಳ್ಳುವುದು ಈ ಕಾದಂಬರಿಯ ವಿಶೇಷ. ಹಳ್ಳಿಗಳು ಮೊದಲೆಲ್ಲಾ ಜೀವಂತಿಕೆಯ ಕೇಂದ್ರ ಬಿಂದುವಾಗಿದ್ದವು. ಅವುಗಳಲ್ಲಿ ಪ್ರೀತಿ

ಪ್ರೇಮದ ಸಂಕೇತವಿರುತ್ತಿತ್ತು. ಆದರೆ, ಇಂದು ಹಳ್ಳಿಗಳನ್ನು ನೋಡಿದರೆ, ನಗರೀಕರಣಕ್ಕೆ ಒಳಗಾಗಿ ತಮ್ಮ ಜೀವಂತಿಕೆಯನ್ನು ಕಳೆದುಕೊಳ್ಳುತ್ತಿವೆ ಎಂದೆನಿಸುತ್ತಿದೆ.

ಅ) ಶ್ರೀಪತಿ ಮತ್ತು ನಂಜನಗೂಡಿನ ಸಂಬಂಧ

ಕಲೆ ಎಂಬುದು ಆರಾಧನೆ ಇದ್ದಂತೆ. ಒಮ್ಮೆ ಅದು ಮನಸ್ಸನ್ನು ಆವರಿಸಿಕೊಂಡು ಬಿಟ್ಟರೆ, ಮೈಮನವೆಲ್ಲ ಅದರಲ್ಲಿ ಲೀನವಾಗಿಯೇ ಬಿಡುತ್ತದೆ. ಹೀಗೆಯೇ ಶ್ರೀಪತಿಗೂ ಕೂಡ ಆಗುತ್ತದೆ. ತಮ್ಮ ಊರು ಅಗ್ರಹಾರದಲ್ಲಿ ತನ್ನ ತಾಯಿಯ ಮೂಲಕ ಚಿತ್ರಕಲೆಯ ಬಗ್ಗೆ ಪ್ರೇರಣೆ ಹೊಂದಿದ್ದ ಈತ ತನ್ನ ಅಮ್ಮ ಸತ್ತ ನಂತರ ತನ್ನ ಮಾವನ ಜೊತೆ ತಿರುಮಕೂಡಲು ನರಸೀಪುರಕ್ಕೆ ಬರುತ್ತಾನೆ. ಶ್ರೀಪತಿಗೆ ಚಿತ್ರಕಲೆಯಲ್ಲಿ ಸೆಳೆತವಿದ್ದುದರಿಂದ ತನ್ನ ಅತ್ತೆ ವ್ರತ ಮಾಡುವಾಗ ದೇವರ ಮುಂದೆ ದೊಡ್ಡ ದೊಡ್ಡ ರಂಗೋಲಿ ಬರೆದು ಅವುಗಳಿಗೆ ಮರದ ಹೊಟ್ಟನ್ನು ಕೆಂಪು, ಕಪ್ಪು, ಹಳದಿ, ನೀಲಿ ಮೊದಲಾದ ಬಣ್ಣಗಳಲ್ಲಿ ತನ್ನ ರಚನೆಗಳಿಗೆ ರಂಗು ಮೂಡಿಸುತ್ತಿದ್ದುದನ್ನು ಕಂಡು ಶ್ರೀಪತಿಯೂ ಆಕೃತಿಗಳನ್ನು ಬರೆದು ತೋರಿಸುತ್ತಾನೆ. ಇದು ಆತನ ಅತ್ತೆಯಲ್ಲಿ ಪ್ರೀತಿ ಮೂಡಿಸುತ್ತದೆ. ಅಲ್ಲದೆ, ಈತನಿಗೂ ಚಿತ್ರಕಲೆಯಲ್ಲಿ ಅತಿ ಹೆಚ್ಚು ವಿಶ್ವಾಸವೂ ಆಸಕ್ತಿಯೂ ಮೂಡುತ್ತದೆ.ಒಮ್ಮೊಮ್ಮೆ ಕಲೆಗೆ ಸ್ಪೂರ್ತಿ ನೀಡುವವರು ಬೇಕಾಗುತ್ತದೆ. ಇದರಿಂದ ಪ್ರೇರೇಪಿತರಾಗಿ ಯಾವುದೇ ಕಲೆಯಲ್ಲಿ ಮುಂದುವರಿಯಬಹುದು. ಇದು ಶ್ರೀಪತಿಗೆ ಮತ್ತೊಂದು ಮಜಲಿನ ಚಿತ್ರ ರಚನೆಗೆ ಸ್ಪೂರ್ತಿ ಸಿಕ್ಕಿದಂತಾಗುತ್ತದೆ. ತನ್ನ ಕಲೆಯ ಬಗ್ಗೆ ಇನ್ನೂ ಹೆಚ್ಚಿನ ಆಸಕ್ತಿಯನ್ನು ಬೆಳೆಸಿಕೊಳ್ಳುತ್ತಾನೆ.

ಆ) ಶ್ರೀಪತಿ ಮತ್ತು ಮೈಸೂರು ಸಂಬಂಧ

ಶ್ರೀಪತಿ ತನ್ನ ಮಾವನ ಮನೆ ಮೈಸೂರಿನಲ್ಲಿ ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವಾಗ ತನ್ನ ಮಾವನ ಮಕ್ಕಳ ಕಸೂತಿಗೆ ಇವನೇ ಡಿಸೈನ್ ಮಾಡಿಕೊಡುತ್ತಾನೆ. ಯಾವ ಪುಸ್ತಕದಲ್ಲಿ ಚಿತ್ರವಿರಲಿ ಅದನ್ನು ಎರಡು ಸಲ ಮನಸ್ಸಿಟ್ಟು ಬರೆದರೆ ಮೂರನೆಯ ಸಲ ಹಾಗೆಯೇ ಬೇರೊಂದು ಚಿತ್ರ ಬರೆದು ಬಿಡುತ್ತಿದ್ದ. ಹೀಗೆ ಬರೆದ ಸತ್ಯನಾರಾಯಣ ಚಿತ್ರದ ಮೇಲೆ ಮಾವನ ಕಣ್ಣು ಬಿದ್ದು ಅದಕ್ಕೆ ಕಟ್ಟು ಹಾಕಿಸಿ ಪೂಜೆಗೂ ಇಟ್ಟು ಕೊಳ್ಳುತ್ತಾನೆ. ಇದು ಶ್ರೀಪತಿಯಲ್ಲಿ ಚಿತ್ರಕಲೆಯ ಬಗ್ಗೆ ಅಪಾರವಾದ ನಂಬಿಕೆ ಉಂಟಾಗಲು ಕಾರಣವಾಗುತ್ತದೆ. ಶ್ರೀಪತಿಯ ಮಾವ ಇವನ ಕಲೆಗೆ ಜೀವ ತುಂಬಲು ಚಿತ್ರಕಲಾಶಾಲೆಗೆ

ಸೇರಿಸುತ್ತಾರೆ. ಅಲ್ಲಿಂದ ಮುಂದಕ್ಕೆ ಈತ ತನ್ನ ಜೀವನವನ್ನು ಚಿತ್ರಕಲೆಯಲ್ಲಿಯೇ ಮುಂದುವರಿಸಿಕೊಂಡು ಹೋಗುತ್ತಾನೆ.

2 ಕಾದಂಬರಿಕಾರರ ತೀರ್ಮಾನ

'ಜಲಪಾತ' ಕಾದಂಬರಿ ನಿಜಕ್ಕೂ ಅದ್ಭುತವಾದ ಕಾದಂಬರಿ. ಇದನ್ನು ಅರಗಿಸಿಕೊಂಡವರು ಡಾ.ನಾಡಗೌಡರನ್ನು ವಿಭಿನ್ನ ದೃಷ್ಟಿಕೋನದಿಂದ ನೋಡಬಹುದು. ಇಲ್ಲಿ ಡಾ.ನಾಡಗೌಡರು ತಮಗೆ ಮಕ್ಕಳು ಎಂಬುದರ ಹೊರತಾಗಿ ಸಮಾಜಕ್ಕೆ ಉತ್ತಮ ಗುಣವುಳ್ಳ ಆರೋಗ್ಯ ಹೊಂದಿರುವ ಸದೃಢ ಮೈಕಟ್ಟಿನ ಸಂತಾನವನ್ನು ಪಡೆಯಲಿ ಎಂದು ತಮ್ಮ ಹೆಂಡತಿಯಿಂದ ಬಯಸುತ್ತಾರೆ. ಆದರೆ ಸಾಮಾಜಿಕ ಚೌಕಟ್ಟಿನಲ್ಲಿ ಇದು ತುಂಬಾ ಕಷ್ಟ. ಸಮಾಜದಲ್ಲಿ ಮದುವೆ ಎಂದರೆ ಒಂದು ಅದ್ಭುತವಾದ ಚೌಕಟ್ಟನ್ನು ಒದಗಿಸಿಕೊಟ್ಟಿದೆ.

ಸಮಾಜದಲ್ಲಿ ಗಂಡ ಹೆಂಡತಿಗೆ ವಿಶೇಷ ಸ್ಥಾನಮಾನವಿದೆ. ಗಂಡನಿಂದಲೇ ಮಕ್ಕಳನ್ನು ಪಡೆಯಬೇಕೆಂಬ ಅಘೋಷಿತ ಸಂಪ್ರದಾಯವಿದೆ. ಹಾಗಾಗಿ ಪ್ರಾಣಿ ವರ್ಗದಲ್ಲಿರುವಂತೆ ಮನುಷ್ಯರಲ್ಲಿ ಉಚ್ಚ – ನೀಚ ಎಂಬ ವರ್ಗವನ್ನು ವಿಂಗಡಿಸಲು ಸಾಧ್ಯವಿಲ್ಲ. ಸಾಮಾಜಿಕ ಚೌಕಟ್ಟಿನಲ್ಲಿ ಬದುಕಲಾರದ ಹೆಣ್ಣಿನ ಪಾತಿವ್ರತ್ಯವನ್ನು ಎತ್ತಿ ಹಿಡಿಯುವ ಉದ್ದೇಶದಿಂದ ಕಾದಂಬರಿಕಾರರು ಡಾ.ನಾಡಗೌಡ ಹಾಗೂ ಅವನ ಹೆಂಡತಿ ಇಬ್ಬರೂ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಾರೆ. ಇಲ್ಲಿ ಕಾದಂಬರಿಕಾರರ ತೀರ್ಮಾನ ಸಮಾಜದಲ್ಲಿ ಸಾಮಾಜಿಕ ಮೌಲ್ಯಗಳನ್ನು ಎತ್ತಿ ಹಿಡಿಯುವುದಾಗಿದೆ.

"ಮಹಾಭಾರತದ ಕಾಲದಲ್ಲಿ ಯೋನಿ ನಿಯೋಗದಿಂದ ಪಡೆದ ಸಂತಾನ ವಂಶಭಾಹಿರ ಧರ್ಮ ಭಾಹಿರವೆಂಬ ಅಭಿಪ್ರಾಯವು ಕಂಡುಬಂದಿದೆ. ನಂತರದ ಕಾಲಮಾನದಲ್ಲಿ ವಿವಾಹ ಬಂಧನದಿಂದ ಹೊರಗೆ ಅನ್ಯ ಪುರುಷ ಅಥವಾ ಅನ್ಯ ಸ್ತ್ರೀಯಿಂದ ಪಡೆದ ಸಂತಾನ ಅಕ್ರಮ ಸಂತಾನ ಎಂದು ಅಂತಹ ಸಂತಾನಕ್ಕೆ ಸಾಮಾಜಿಕ ಅಂತಸ್ತಗಾಲಿ, ಆಸ್ತಿಯ ಉತ್ತರಾಧಿಕಾರವಾಗಲಿ ದೊರೆಯುವ ಸಾಧ್ಯತೆಯೇ ಇಲ್ಲವಾಯಿತು. ಇದೇ ನಿಯಮ, ಹೆಣ್ಣು ವಿವಾಹ ಪೂರ್ವ ಪಡೆಯುವ ಸಂತಾನಕ್ಕೂ ಅನ್ವಯಿಸಿತ್ತು. ನಾಡಗೌಡರು ತಿಳಿಸುವಂತೆ ನಿರೋಗಿ ದೃಢಕಾಯ, ಪುರುಷನ ವೀರ್ಯದಿಂದ ಮಕ್ಕಳನ್ನು ಪಡೆಯಬೇಕೆನ್ನುವುದಾದರೆ ಪಾರಂಪರಿಕವಾಗಿ ಬಂದಿರುವ ಸಾಮಾಜಿಕ ನಿಯಮಗಳ ನೆಲೆಗಟ್ಟು ಸಂಪೂರ್ಣವಾಗಿ ಬದಲಾಗಬೇಕಾಗುತ್ತದೆ. ಜಲಪಾತದ ಒಳ ಹರಿವಿನಲ್ಲಿನ ಮೌಲ್ಯ

ಸಂಘರ್ಷ, ಒಂದು ಸ್ತರದಲ್ಲಿ ಸಂಪ್ರದಾಯ ಮತ್ತು ಆಧುನಿಕ ವಿಚಾರಧಾರೆಗಳ ನಡುವಿನ ಸಂಘರ್ಷ. ಮತ್ತೊಂದು ಸ್ತರದಲ್ಲಿ, ಎಂದಿನಿಂದಲೋ ಒಪ್ಪಿಕೊಂಡು ಬಂದಿರುವ ನೈತಿಕ ಮೌಲ್ಯಗಳು ಹಾಗೂ ಆಧುನಿಕ ವಿಚಾರಗಳ ಸಂಘರ್ಷ. ಇವೆರಡರ ಜೊತೆಗೆ ಯಂತ್ರ ನಾಗರಿಕತೆ ಬದುಕಿನ ಎಲ್ಲಾ ರಂಗಗಳಲ್ಲಿಯೂ ತರುವ ಕ್ರೌರ್ಯ, ಮಧ್ಯಮ ಹಂತ ಗುಣ, ಏಕಾತನತೆಯ ಚಿತ್ರಣದೊಂದಿಗೆ ಪ್ರಕೃತಿಗೂ ಮನುಷ್ಯನಿಗೂ ನಡುವೆ ಇರಬೇಕಾದ ಸಾಮರಸ್ಯದ ಕೊಂಡಿ ಕಳಚಿಕೊಂಡಿರುವುದು ಜಲಪಾತದಲ್ಲಿ ಅನಾವರಣಗೊಳ್ಳುತ್ತದೆ"[6]

ಕಾದಂಬರಿಯಲ್ಲಿ ಮತ್ತೊಂದು ಮುಖವನ್ನು ನೋಡಬಹುದಾದರೆ, ಅದು ಹಳ್ಳಿ ಮತ್ತು ಮುಂಬಯಿ ನಡುವಿನ ಅಂತರ. ಜೀವನ ಪಯಣ. ತನ್ನನ್ನು ತಾನು ಕಂಡುಕೊಳ್ಳುವಿಕೆ ಮುಂತಾದ ಅಂಶಗಳು. ಕಾದಂಬರಿಯ ನಾಯಕ ಅಗ್ರಹಾರದಿಂದ ಮುಂಬೈಗೆ ಹೋಗಿರುತ್ತಾನೆ. ಆತ ಮತ್ತೆ ತನ್ನ ಊರಾದ ಅಗ್ರಹಾರಕ್ಕೆ ಬರುತ್ತಾನೆ. ಆದರೆ, ಅಗ್ರಹಾರವೆಂಬ ಇಡೀ ಊರು ಸಂಪೂರ್ಣ ಬದಲಾವಣೆಯನ್ನು ಕಂಡಿರುತ್ತದೆ. ಜನರಲ್ಲಿ ಪ್ರೀತಿ ವಿಶ್ವಾಸಕ್ಕೆ ಬದಲಾಗಿ ವ್ಯವಹಾರ ಮನೆ ಮಾಡಿಕೊಂಡಿರುತ್ತದೆ. ಸಂಗೀತ ಅರಳುತ್ತದೆ, ಚಿತ್ರಕಲೆ ಬೆಳೆಯುತ್ತದೆ ಎಂದುಕೊಂಡು ಹಳ್ಳಿಗೆ ಬಂದ ಶ್ರೀಪತಿಗೆ ಮತ್ತು ವಸುವಿಗೆ ದುರಂತಗಳೇ ಎದುರಾಗುತ್ತವೆ.

ಶ್ರೀಪತಿಯ ನಾದಿನಿ ಕೇಳುತ್ತಾಳೆ –" ಭೂಪತಿ ನಿನಗೆ ಮುಂಬೈನಲ್ಲಿ ಕೆಲಸ ಸಿಕ್ಕುವುದಲ್ಲವೇ? ಅದಕ್ಕೆ ಭೂಪತಿ ಹೇಳುತ್ತಾನೆ–ಕೆಲಸಬಲ್ಲ ಅನುಭವಸ್ಥನಿಗೆ ಬೊಂಬೈಯಲ್ಲಲ್ಲದೆ ಮತ್ತೆ ಎಲ್ಲಿ ಕೆಲಸ ಸಿಕ್ಕಬೇಕು? ನಾಲ್ಕು ದಿನ ಹೆಚ್ಚು ಕಮ್ಮಿ ಸಿಕ್ಕಿಯೇ ಸಿಕ್ಕುತ್ತೆ".[7] ಎನ್ನುವಾಗ ಅವನ ಅಸಹಾಯಕತೆ ಹಳ್ಳಿಗಳು ಪರಿವರ್ತನೆಯಾದ ರೀತಿ ಕಂಡುಬರುತ್ತದೆ. ಅಷ್ಟೊತ್ತಿಗಾಗಲೇ ಹಳ್ಳಿಗಳು ಆಧುನಿಕತೆ ಒಳಗಾಗುತ್ತಿದ್ದುದು ಕಂಡು ಬರುತ್ತದೆ. ಮುಂದೆ ನಾವು ಭೂಮಿಗೆ ಹತ್ತಿದ ಜನರಲ್ಲ. ಈಗ ಹಳ್ಳಿಯ ಮಕ್ಕಳೇ ಹಳ್ಳಿಯನ್ನು ಬಿಟ್ಟು ನಗರಗಳಿಗೆ ಓಡುತ್ತಿದ್ದಾರೆ ಎನ್ನುವಾಗ ಅವರ ಅಸಹಾಯಕತೆ ಕಂಡುಬರುತ್ತದೆ.

"ನಾವು ಭೂಮಿಗೆ ಹತ್ತಿದ ಜನರಲ್ಲ. ಈಗ ಹಳ್ಳಿಯ ಭೂಮಿಯ ಮಕ್ಕಳೇ ಹಳ್ಳಿಯನ್ನು ಬಿಟ್ಟು ನಗರಗಳಿಗೆ ಓಡುತ್ತಿದ್ದಾರೆ. ಅಗ್ರಹಾರಕ್ಕೆ ಬಂದ ದಿನದಿಂದ ನಮಗೆ ಪಡಿಪಾಟಲಿನ ವಿನಾ ಸುಖವೆಂಬುದು ಎಳ್ಳಷ್ಟೂ ಇಲ್ಲ. ಅಷ್ಟು ಕಷ್ಟವಿದ್ದರೂ ಜನರು

---

[6] ಪುಟ ಸಂಖ್ಯೆ 110. 'ಯುಗಸಾಕ್ಷಿ', ಎಲ್.ವಿ.ಶಾಂತಕುಮಾರಿ
[7] ಪುಟ ಸಂಖ್ಯೆ 168. 'ಜಲಪಾತ', ಎಸ್.ಎಲ್.ಭೈರಪ್ಪ

ಮುಂಬಯಿಗೆ ಯಾಕೆ ಹೋಗುತ್ತಾರೆ? ದುಡಿಯುತ್ತೇನೆ ಎನ್ನುವವನಿಗೆ ಮುಂಬಯಿ ಕೆಲಸ ಕೊಡುತ್ತದೆ. ಎಂಥವನಿಗೂ ಎರಡು ಹೊತ್ತಿನ ಊಟಕ್ಕೆ ಸಾಕಾಗುವಷ್ಟು ಕೂಲಿ ಕೊಡುತ್ತದೆ; ಇಲ್ಲವೇ ಭಿಕ್ಷೆಯಲ್ಲಾದರೂ ಎರಡು ರೂಪಾಯಿ ಸಿಕ್ಕುತ್ತದೆ."[8] ಶ್ರೀಪತಿಯ ಸ್ವಗತವನ್ನು ಲೇಖಕರು ಉದ್ದೇಶಪೂರ್ವಕವಾಗಿ ಆಡಿಸಿದ್ದಾರೆ.

"ನನಗೆ, 'ಬೊಂಬಾಯಿ ಬಿಟ್ಟು ಯಾಕೆ ಬಂದಿರಿ, ಮಿಸ್ಟರ್? ನಾನೂರು ರೂಪಾಯಿ ಸಂಬಳ ಮತ್ತೆ ಯಾರು ಕೊಡ್ತಾರೆ? ನನ್ನ ನೋಡಿ. ಹೆಸರಿಗೆ ತಾಲ್ಲೂಕಿನ ದಣಿ. ಮುನ್ನೂರು ರೂಪಾಯಿ ಸಂಬಳ. ಸುಬ್ರಾಯರಂಥ ರೆವೆನ್ಯೂ ಇನ್‌ಸ್ಪೆಕ್ಟರು ಸಿಕ್ಕದಿದ್ದರೆ ಕಾಲೇಜಿನಲ್ಲಿ ಓದ್‌ತಿರೋ ಮಗನಿಗೆ ಹಾಸ್ಟೆಲಿಗೆ ದುಡ್ಡು ಕಳಿಸೋಕೆ ಗತಿ ಇರೋದಿಲ್ಲ. ನೌಕರಿ ಮಾಡಿದ್ರೆ ಬೊಂಬಾಯಿಯಲ್ಲಿ ಮಾಡ್‌ಬೇಕು. ಲಕ್ಷ್ಮಿಯ ಪಟ್ಟಣವಲ್ಲವೆ? ಅದು ಬೊಂಬಾಯಿಯಲ್ಲ, ಧನಲಕ್ಷ್ಮೀನಗರ' ಎಂದರು." ಎಂಬುದನ್ನು ಮುಂಬೈ ನಗರವು ಜೀವನಕ್ಕೆ ಆಧಾರವಾಗುವ ಬಗ್ಗೆ ತಿಳಿಸಿಕೊಡುತ್ತದೆ.[9]

"ಮತ್ತೆ ಮುಂಬಯಿಗೆ ಹೋಗುವ ವಿಚಾರದಲ್ಲಿ ವಸುವನ್ನು ಕೇಳಿದೆ. 'ಇಲ್ಲಿ ಏನಿದೆ ಅಂತ ಇರಬೇಕು? ಮಗು ಸತ್ತ ದಿನದಿಂದ ನನಗೆ ಈ ಮನೆ ಸ್ಮಶಾನ ಅನಿಸುತ್ತೆ. ಕೈಲಿ ದುಡ್ಡಿದ್ದು ತಕ್ಷಣ ಡಾಕ್ಟರನ್ನು ಕರೆಸಿದ್ದರೆ ಮಗು ಸಾಯುತ್ತಿರಲಿಲ್ಲ. ಬೊಂಬಾಯಿಯಲ್ಲಾಗಿದ್ದರೆ ನಾವು ಹೀಗೆ ಬಿಡುತ್ತಿದ್ದೆವೆ? ನೀವು ಇಲ್ಲಿಗೆ ಬಂದರೂ ಗಣಿಯಲ್ಲಿ ಕೂಲಿಮಾಡುವುದು ತಪ್ಪಲಿಲ್ಲ. ಅದೇ ಕೂಲಿ ಬೊಂಬಾಯಿಯಲ್ಲಿ ಮಾಡಿದರೆ ಹೊಟ್ಟೆ ತುಂಬಿ, ಬಟ್ಟೆಗೆ ಆಗಿ ಮಗೂನ ವಿದ್ಯಾಭ್ಯಾಸವು ಚನ್ನಾಗಿ ಆಗುತ್ತೆ ಅಲ್ಲವೇ? ಎಂದರು."[10] ಎಂಬ ಮಾತುಗಳು ಕಂಡು ಬರುತ್ತವೆ. ಈ ಎಲ್ಲ ಮಾತುಗಳನ್ನು ಅವಲೋಕಿಸಿದಾಗ ಹಳ್ಳಿಗಿಂತ ಮುಂಬೈ ವಾಸಿ ಎನಿಸುತ್ತದೆ.

'ನೀನು ಕಲಾವಿದ ಅಂತ ನನಗೆ ಗೊತ್ತಿಲ್ಲವೆ? ಈಗ ಕಲೆಗಿಲೆ ಏನಿದ್ದರೂ ದೊಡ್ಡ ಊರಿನಲ್ಲಿ ಮಾತ್ರ. ಹಳ್ಳೀಲಿ ಅದು ಯಾರಿಗೆ ಬೇಕು? ಜೀವನವೇ ನಡೆಯದ ಮೇಲೆ ಕಲೇನ ಕಟ್ಟಿಕೊಂಡು ಮಾಡೋದೇನು? ಆಮೀನೆಲ್ಲ ನುಣ್ಣಗೆ ಮಾರಿಬಿಡು. ಅದೇ ದುಡ್ಡನ್ನು ಬ್ಯಾಂಕಿನಲ್ಲಿ ಬಡ್ಡಿಗೆ ಹಾಕು. ಬಂದ ಸಂಪಾದನೇಲಿ ಸುಖವಾಗಿ ಸಂಸಾರಮಾಡಿಕೊಂಡು

---

[8] ಪುಟ ಸಂಖ್ಯೆ 169, 'ಜಲಪಾತ', ಎಸ್.ಎಲ್.ಭೈರಪ್ಪ
[9] ಪುಟ ಸಂಖ್ಯೆ 173, , 'ಜಲಪಾತ', ಎಸ್.ಎಲ್.ಭೈರಪ್ಪ
[10] ಪುಟ ಸಂಖ್ಯೆ 169–170, 'ಜಲಪಾತ', ಎಸ್.ಎಲ್.ಭೈರಪ್ಪ

ಬೊಂಬಾಯಿಯಲ್ಲಿರಿ. ಈ ಊರಿಗೆ ಬಂದದ್ದಕ್ಕೆ ವಿಶ್ವನಿಗೆ ಎರಡು ವರ್ಷ ಓದು ದಂಡ. ಒಂದು ಮಗುವಿನ ಬಲಿ ಅಂತ ಮನಸ್ಸಿನಲ್ಲಿ ಮಾಡಿಕೊಂಡು ಸಮಾಧಾನ ತಂದುಕೊ, ಇಲ್ಲಿಗೆ ಬಂದಮೇಲೆ ಇನ್‌ಶ್ಯೂರೆನ್ಸ್ ಪ್ರೀಮಿಯಂ ಸಹ ಕಟ್ಟಿಲ್ಲವಂತೆ.'[11] ಎಂಬ ಮಾತುಗಳಂತೂ ವಾಸ್ತವಕ್ಕೆ ಸನಿಹವಾಗಿ ಕಂಡುಬರುತ್ತವೆ.

3. ಸಮಾಜದ ಮುಖವಾಡ

ಎಸ್.ಎಲ್.ಭೈರಪ್ಪನವರು ತಮ್ಮ ಕಾದಂಬರಿಯಲ್ಲಿ ವರ್ತಮಾನದ ನೈಜ ಸಂಗತಿಗಳನ್ನು ಮನಸ್ಸಿಗೆ ಮುಟ್ಟುವಂತೆ ಚಿತ್ರಿಸಿದ್ದಾರೆ.ಮನುಷ್ಯನ ನಾನಾ ರೂಪದ ಮುಖವಾಡಗಳು ಕಾದಂಬರಿಯಲ್ಲಿ ಕಂಡು ಬರುತ್ತವೆ. ಈ ಕಾದಂಬರಿಯಲ್ಲಿ ಕಂಡು ಬರುವ ನಾಡಗೌಡ ಮತ್ತು ಆತನ ಪತ್ನಿಯ ಪಾತ್ರ ಸ್ತ್ರೀ ಪುರುಷರ ಲೈಂಗಿಕತೆ ಕುರಿತು ಓದುಗರಲ್ಲಿ ಜಿಜ್ಞಾಸೆ ಹುಟ್ಟು ಹಾಕುತ್ತದೆ.

ಡಾ.ನಾಡಗೌಡರು ಒಬ್ಬ ಪಶುವೈದ್ಯರಾಗಿದ್ದು, ಬಾಂಬೆ ಪಶುವೈದ್ಯಕೀಯ ಕಾಲೇಜಿನಲ್ಲಿ ಗೈನಕಾಲಜಿ ಪ್ರೊಫೆಸರ್. ಕಾದಂಬರಿಯಲ್ಲಿ ಜಾನುವಾರುಗಳಿಗೆ ಕೃತಕ ಗರ್ಭಧಾರಣೆ ಕುರಿತು ಸಂಶೋಧನೆ ನಡೆಸುತ್ತಿರುವ ವಿಜ್ಞಾನಿ. ಇವರು ಬಿಜಾಪುರದವರು. ಇವರ ಪತ್ನಿಯ ತವರು ಹುಬ್ಬಳ್ಳಿ.

ನಾಡಗೌಡರು ಮತ್ತು ಶ್ರೀಪತಿ ಮುಂಬಯಿನಲ್ಲಿ ನೆರೆ ಹೊರೆಯಲ್ಲಿ ವಾಸಿಸುವರು. ಶ್ರೀಪತಿಯು ಒಬ್ಬ ಸೂಕ್ಷ್ಮ ಚಿತ್ರಕಲಾವಿದ. ಕಂದಾಚಾರಗಳನ್ನು ನಂಬದ ನಾಡಗೌಡರು ವಿಚಾರವಾದಿ. ಅವರ ಪತ್ನಿ ಸದೃಢ ಮೈಕಟ್ಟಿನ ಸಾಂಪ್ರದಾಯಿಕ ಮನೋಭಾವದವರು. ಈ ದಂಪತಿಗಳಿಗೆ ಮಕ್ಕಳಿಲ್ಲದಿರುವುದು ಕಾದಂಬರಿಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ಡಾ.ನಾಡಗೌಡರು ಕೃತಕ ಗರ್ಭಧಾರಣೆ ವಿಷಯದಲ್ಲಿ ಆಳವಾಗಿ ಸಂಶೋಧನೆ ಮಾಡುತ್ತಿದ್ದು ತಮ್ಮ ಮನೆಗಿಂತ ಹೆಚ್ಚಾಗಿ ಮುಂಬೈ ಕಸಾಯಿಖಾನೆಯಲ್ಲಿಯೇ ಹಸು, ಹೋರಿಗಳ ಮಾದರಿಗಳನ್ನು ಸಂಗ್ರಹಿಸಲು ದಿನ ಕಳೆಯುತ್ತಾರೆ.

"ಪಶುಗಳಲ್ಲಿ ಒಳ್ಳೆಯ ಮರಿ ಇಯಲು ಎಲ್ಲ ಹೆಣ್ಣು ಪ್ರಾಣಿಗಳೂ ಹೇಗೆ ಆರೋಗ್ಯ ಅನುವಂಶಿಕತೆ, ಮೊದಲಾದ ದೃಷ್ಟಿಯಿಂದ ಯೋಗ್ಯವಾಗಿಲ್ಲವೋ, ಎಲ್ಲಾ ಗಂಡು ಪ್ರಾಣಿಗಳು

---

[11] ಪುಟ ಸಂಖ್ಯೆ 168, 'ಜಲಪಾತ', ಎಸ್.ಎಲ್.ಭೈರಪ್ಪ

ಉತ್ತಮ ಮರಿಗಳನ್ನು ಹುಟ್ಟಿಸಲು ಯೋಗ್ಯವಾಗಿಲ್ಲವೋ, ಹಾಗೆಯೇ ಮನುಷ್ಯರಲ್ಲಿಯೂ ಎಲ್ಲ ಗಂಡು ಹೆಣ್ಣುಗಳು ಸಮರ್ಥ ತಂದೆ ತಾಯಿ ಆಗಲಾರರು. ಅನುವಂಶಿಕವಾಗಿ ನಿರೋಗಿಗಳಾಗಿ, ಮೇಲ್ಮಟ್ಟದ ಬುದ್ಧಿ ಶಕ್ತಿಯನ್ನು ಹೊಂದಿ ಶರೀರದಾರ್ಢ್ಯದಿಂದ ಇರುವ ಗಂಡಸರು, ಹೆಂಗಸರು ಮಾತ್ರ ಮಾತಾಪಿತೃಗಳಾಗಬೇಕು. ಉಳಿದವರು ಮದುವೆಯಾದರೂ ಅವರಿಗೆ ಮಕ್ಕಳಾಗಲೇಬಾರದು. ಎಂದರೆ ದುರ್ಬಲರ, ರೋಗಿಗಳ ಬುದ್ಧಿ ಹೀನರ ಸಂತಾನವು ಬೆಳೆಯುವುದಕ್ಕೆ ಅವಕಾಶವನ್ನೇ ಕೊಡಬಾರದು"[12]

ಈ ಮಾತುಗಳನ್ನು ನಾಡಗೌಡರು ಶ್ರೀಪತಿಗೆ ಹೇಳುತ್ತಾರೆ. ಇವರ ಹಾಗೆ ಪ್ರತಿಯೊಬ್ಬ ಮನುಷ್ಯನು ಚಿಂತಿಸಿದರೆ, ಬಹುಶಾ: ವಂಶವನ್ನು ಮುಂದುವರಿಸಲು ಸಾಧ್ಯವಾಗುವುದಿಲ್ಲ. ಮಾನವೀಯ ಮೌಲ್ಯಗಳಿಗೆ ಬೆಲೆ ಇರುವುದಿಲ್ಲ. ಸಮಾಜದಲ್ಲಿ ದುರ್ಬಲರು ಬದುಕುವುದಕ್ಕೆ ಸಾಧ್ಯವೇ ಇಲ್ಲದಂತಾಗುತ್ತದೆ. ಎಲ್ಲರೂ ಬದುಕಬೇಕು, ಪ್ರತಿಯೊಬ್ಬನಿಗೂ ಬದುಕುವ ಹಕ್ಕಿದೆ ಎಂಬ ಹಕ್ಕನ್ನು ತಿರಸ್ಕರಿಸುವ ಈ ಮಾತುಗಳನ್ನು ಅರಗಿಸಿಕೊಳ್ಳಲು ಕಷ್ಟ ಸಾಧ್ಯವಾಗುತ್ತದೆ. ಸಾಮಾಜಿಕ ಅಸಮಾನತೆಯನ್ನು ಬೆಂಬಲಿಸಿದಂತೆ ಆಗುತ್ತದೆ. ಈ ಮಾತುಗಳನ್ನು ಒಪ್ಪಲು ಸಾಧ್ಯವಿಲ್ಲ. ಒಪ್ಪಲೇಬೇಕು ಅನಿಸಿದರೆ, ದೃಢಕಾಯರಲ್ಲದವರು ಮತ್ತು ರೋಗಿಷ್ಟರು ಮದುವೆಯನ್ನೇ ಮಾಡಿಕೊಳ್ಳಬಾರದೇ? ಮಕ್ಕಳನ್ನೇ ಹೆರಬಾರದೇ? ಕೇವಲ ದೈಹಿಕವಾಗಿ ದೃಢಕಾಯರಾಗಿದ್ದರೆ ಮಾತ್ರ ಸಾಕೆ? ಮಾನಸಿಕವಾಗಿ ಸದೃಢರಾಗಬಾರದೇ? ಎಂಬ ಹಲವಾರು ಪ್ರಶ್ನೆಗಳು ನಮ್ಮ ಮುಂದೆ ನಿಲ್ಲುತ್ತವೆ. ಭಾರತೀಯ ಸಮಾಜದಲ್ಲಿ ಇಂತಹ ಚಿಂತನೆಗಳನ್ನು ಅರಗಿಸಿಕೊಳ್ಳುವುದು ತುಂಬಾ ಕಷ್ಟ ಕೇವಲ ಬಲಹೀನರು, ಮಾನಸಿಕ ದುರ್ಬಲರು ಮಾತ್ರ ಈ ರೀತಿಯಾಗಿ ಯೋಚಿಸುವುಕ್ಕೆ ಸಾಧ್ಯವೆನಿಸುತ್ತದೆ.

ಈ ಕಾದಂಬರಿಯ ದುರಂತಮಯ ಅಂಶವೆಂದರೆ ಸಮಾಜ ಒಪ್ಪದ ರೀತಿಯಲ್ಲಿ ತನ್ನ ಪತ್ನಿಯನ್ನು ನಡೆಸಿಕೊಳ್ಳುವುದು. ಡಾ.ನಾಡಗೌಡರು ತಮ್ಮ ಸಂಶೋಧನೆಯನ್ನು ಪ್ರಾಣಿಗಳ ಮೇಲೆ ಪ್ರಯೋಗಿಸಬೇಕಾಗಿತ್ತೇ ವಿನ: ತಮ್ಮ ವೈಯಕ್ತಿಕ ಜೀವನದಲ್ಲಿ ಅಲ್ಲ. ಆದರೆ ಇವರು ತಮ್ಮ ಸಂಶೋಧನೆಯ ಫಲಿತಾಂಶವನ್ನು ತಮ್ಮ ಪತ್ನಿಯ ಮೇಲೆ ಪ್ರಯೋಗಿಸಲು ಮುಂದುವರೆಯುವುದು ಕಂಡುಬರುತ್ತದೆ.

---

[12] ಪುಟ ಸಂಖ್ಯೆ 72–73. 'ಜಲಪಾತ', ಎಸ್.ಎಲ್.ಭೈರಪ್ಪ

ಲೈಂಗಿಕ ತೃಪ್ತಿಗಾಗಿ ನಡೆಸುವ ಕ್ರಿಯೆ ಮತ್ತು ಸಂತಾನದ ಉತ್ಪತ್ತಿಗಾಗಿ ನಡೆಸುವ ಲೈಂಗಿಕ ಕ್ರಿಯಗಳು ಸಂಪೂರ್ಣ ಬೇರೆ ಬೇರೆಯಾಗಿದ್ದು, ಗಂಡ ಹೆಂಡತಿ ಪರಸ್ಪರ ಉತ್ತಮರಲ್ಲದ ಪಕ್ಷದಲ್ಲಿ ಲೈಂಗಿಕ ಕ್ರಿಯೆ ನಡೆಸಬಹುದೇ ವಿನ: ಮಕ್ಕಳನ್ನು ಹೊಂದಬಾರದು. ಒಂದು ವೇಳೆ ಮಕ್ಕಳು ಬೇಕೆಂದದಾದಲ್ಲಿ ಹೆಂಡತಿಯು ಕೃತಕ ಗರ್ಭದಾರಣೆಯ ಮೂಲಕ ಉಚ್ಚ ಗಂಡಸಿನ ವೀರ್ಯ ಬಳಸಿಕೊಂಡು ಗರ್ಭ ಧರಿಸಬಹುದು ಎಂಬುದು ಇವರ ವಾದ.

ಡಾ.ನಾಡಗೌಡರ ಪ್ರಕಾರ ಉಚ್ಚ ಮತ್ತು ನೀಚ ಎಂಬ ಎರಡು ವರ್ಗಗಳನ್ನು ರೋಗ ಮತ್ತು ನಿರೋಗದ ಮನುಷ್ಯರಿಗೆ ಹೋಲಿಸುತ್ತಾರೆ. ಉಚ್ಚ ಎಂದರೆ, ಯಾವುದೇ ರೋಗವಿಲ್ಲದ ಸದೃಢ ಮೈಕಟ್ಟಿನ ದೀರ್ಘಾಯುಷ್ಯ ಹೊಂದಿರುವವರು.ಇದಕ್ಕೆ ಬದಲಾಗಿ ನೀಚ ಎಂದರೆ, ರೋಗವನ್ನು ಹೊಂದಿರುವ ಸದೃಢ ಮೈಕಟ್ಟಿಲ್ಲದ ಹಾಗೂ ಪೂರ್ಣಾಯುಷ್ಯ ಇಲ್ಲದ ಮನುಷ್ಯ ಎಂದರ್ಥ.

ಡಾ.ನಾಡಗೌಡರ ಹೆಂಡತಿಗೆ ತೀವ್ರವಾದ ಸಂತಾನ ಅಭಿಲಾಷೆ ಇದ್ದರೂ ಅದಕ್ಕೆ ನಾಡಗೌಡರು ಒಪ್ಪುವುದಿಲ್ಲ. ಕಾರಣವೇನೆಂದರೆ ನಾಡಗೌಡರು ಉತ್ತಮ ತಳಿ ಗುಣ ಹೊಂದಿದವರಲ್ಲ. ನಾಡಗೌಡರ ಪೀಳಿಗೆಯವರೆಲ್ಲ ಮಧುಮೇಹ ರೋಗಿಗಳು. ಹೀಗಾಗಿ ತಾವು ಸಂತಾನ ಪಡೆಯಲು ಯೋಗ್ಯರಲ್ಲ ಎಂಬ ಭಾವನೆಯಿಂದ ಅವರು ಕೃತಕ ಸಾಧನದ ಮೂಲಕ ಹೆಂಡತಿಯೊಡನೆ ಲೈಂಗಿಕ ಕ್ರಿಯೆಯಲ್ಲಿ ತೊಡಗುತ್ತಾರೆ. ತಮ್ಮ ಪತ್ನಿ, ಮಕ್ಕಳಿಗಾಗಿ ಹಂಬಲಿಸಿದರೂ, ಸಂತಾನಹರಣ ಮಾಡಿಸಿಕೊಂಡು ಬರುತ್ತಾರೆ.

ಇದನ್ನು ನಾಡಗೌಡರೇ ತಮ್ಮ ಪತ್ನಿಗೆ ತಿಳಿಸಿದಾಗ ಪ್ರತಿರೋಧ ಒಡ್ಡುತ್ತಾಳೆ. ಸಂತಾನ ಪಡೆಯುವ ತನ್ನ ಆಸೆ ತಪ್ಪಿತ್ತಲ್ಲ ಎಂದು ಕೊರಗುತ್ತಿರಬೇಕಾದರೆ, ಉತ್ತಮ ಗಂಡಸಿನ ವೀರ್ಯವನ್ನು ಕೃತಕ ಗರ್ಭಧಾರಣೆ ಮಾಡಿಸುವ ಸಲಹೆ ಮುಂದಿಡುತ್ತಾರೆ. ಆದರೆ ಸಾಂಪ್ರದಾಯಿಕ ಹೆಣ್ಣು ಮಗಳಾದ ನಾಡಗೌಡರ ಪತ್ನಿ ಇದಕ್ಕೆ ತೀವ್ರವಾಗಿ ವಿರೋಧಿಸುತ್ತಾಳೆ. ಇದರಿಂದ ಯಾವ ಹೆಣ್ಣು ಕೂಡ ಬೇರೆ ಗಂಡಸಿನ ಸುಖ ಪಡೆಯಲು ಬಯಸುವುದಿಲ್ಲ. ಈಗಿನ ಕಾಲದಲ್ಲಿಯೂ ಹೆಣ್ಣು, ಗಂಡ ಎಂದರೆ ಪತಿ ದೇವ ಎಂದು ಪೂಜಿಸುವ ಹಿಂದೂ ಸಂಸ್ಕೃತಿಯಲ್ಲಿ ಗಂಡನನ್ನು ಬಿಟ್ಟರೂ ಬೇರೆ ಗಂಡಸಿನಿಂದಲೂ ಸುಖ ಮತ್ತು ಸಂತಾನ ಪಡೆಯಲು ಬಯಸುವುದಿಲ್ಲ. ಮಕ್ಕಳನ್ನು ಪಡೆಯುವ ಸುಖದಿಂದ ವಂಚಿತಳಾದ ಈಕೆ ತವರು ಮನೆಗೆ ಹೋಗಿ ರೈಲಿಗೆ ತಲೆ ಕೊಡುತ್ತಾಳೆ.

ಈ ವಿಷಯವನ್ನು ತಿಳಿದ ಡಾ.ನಾಡಗೌಡರು ಇಂದ್ರಿಯ ಸುಖಕ್ಕಾಗಿ ವೇಶ್ಯಾ ಗೃಹ ಪ್ರವೇಶಿಸಿ ಅಲ್ಲೂ ನೆಮ್ಮದಿ ಕಾಣದಾಗುತ್ತಾರೆ. ಕುಡಿತಕ್ಕೆ ಮೊರೆ ಹೋದ ಇವರು ಖಿನ್ನತೆಗೆ ಒಳಗಾಗಿ "ಮಾರ್ಫೀನ್" ಎಂಬ ಔಷಧಿಯನ್ನುಹೆಚ್ಚಾಗಿ ತೆಗೆದುಕೊಂಡು ಆತ್ಮಹತ್ಯೆಮಾಡಿಕೊಳ್ಳುತ್ತಾರೆ.

ಡಾ.ನಾಡಗೌಡರು ಸಮಾಜದ ಕಣ್ಣಿಗೆ ಉತ್ತಮ ವ್ಯಕ್ತಿ ಸಂಶೋಧಕ ಮತ್ತು ಜೀವನದ ಬಗ್ಗೆ ಅವರ ಮೌಲ್ಯಗಳ ಬಗ್ಗೆ ಬೇರೆಯವರಿಗೆ ತಿಳುವಳಿಕೆ ಹೇಳಬೇಕಾದವರೂ ಸಂತಾನ ಪಡೆಯುವುದು ಹೆಣ್ಣಿನ ಮನೋಸಹಜ ಹೆಬ್ಬಯಕೆ ಎಂಬುದನ್ನು ಮರೆತು ತಮ್ಮ ಪತ್ನಿಗೆ ಮೋಸ ಮಾಡುತ್ತಾರೆ. ಹೆಣ್ಣಿಗೆ ಬೇಕಾದ ಲೈಂಗಿಕ ತೃಪ್ತಿ ಮತ್ತು ಸಂತಾನದ ಕನಸನ್ನು ನುಚ್ಚು ನೂರು ಮಾಡುತ್ತಾರೆ. ಇವೆಲ್ಲವೂ ಸಮಾಜದ ಕಟ್ಟುಪಾಡುಗಳ ನಡುವೆಯೇ ಬೇರೆಯವರಿಗೆ ತಿಳಿಯದಂತೆ ನಡೆಯುತ್ತಾ ಹೋಗುತ್ತವೆ.

ಸಾಮಾಜಿಕವಾಗಿ ಪರಿಪೂರ್ಣನಾಗಬೇಕಾದ ಸಮಾಜಕ್ಕೆ ಒಂದು ಮುಖವಾಡ ಮತ್ತು ತನ್ನ ಹೆಂಡತಿಯ ಜತೆಗೆ ಇನ್ನೊಂದು ಮುಖವಾಡ ಧರಿಸಿಕೊಂಡು ತನ್ನ ವೈಯಕ್ತಿಕ ಆಸೆಯಿಂದ ದೂರವಿರುತ್ತಾರೆ. ಹೆಂಡತಿಯ ಭಾವನೆಗಳುಳ್ಳ ಜೀವಿ ಎಂಬುದರ ಬದಲಾಗಿ ಪ್ರಾಣಿಗಳಂತೆ ನೋಡುವುದು ನಿಜಕ್ಕೂ ದುರದೃಷ್ಟಕರ ಸಂಗತಿ.

'ಜಲಪಾತ ಬರೆದು ಸುಮಾರು ನಲವತ್ತು ವರ್ಷಗಳಾಗಿವೆ. ಆ ಕಾಲಕ್ಕೂ, ಈಗಿನ ಕಾಲಘಟ್ಟಕ್ಕೂ ವೈಚಾರಿಕ ವಿಧಾನದಲ್ಲಿ ಸಾಕಷ್ಟು ಬದಲಾವಣೆಗಳಾಗಿ, ಫರ್ಟಿಲಿಟಿ ಕ್ಲಿನಿಕ್ ಗಳು ಆರಂಭವಾಗಿ, ವಿವಾಹಿತ ದಂಪತಗಳದೇ ಭ್ರೂಣದಿಂದ ಪ್ರಣಾಳಶಿಶು, ಅಥವಾ ಬೇರೆಯವರ ವೀರ್ಯದಿಂದಲೂ ಮಕ್ಕಳು ಪಡೆಯುವುದು, ಮದುವೆಯ ಬಂಧನವಿಲ್ಲದೇ ಮಕ್ಕಳು ಪಡೆಯುವುದು, ಆಧುನಿಕ ನಿಯೋಗ ಪದ್ಧತಿಯಾಗಿ ಪ್ರಚಲಿತವಾಗಿವೆ. ಸಾಮಾಜಿಕ ಮನ್ನಣೆಯನ್ನು ಪಡೆದೆ".[13] ಎಂಬತಂಹ ಮಾತುಗಳು ಕಾಲ ಸರಿದಂತೆಲ್ಲಾ ಯಾವ ರೀತಿಯ ಬದಲಾವಣೆಗೆ ಒಳಗಾಗಿ ಸಮಾಜದ ಪರಿವರ್ತನೆಗೆ ಕಾರಣವಾಗುತ್ತವೆ ಎಂಬುದನ್ನು ಕಾಣಬಹುದು.

ಪ್ರಾಣಿಗಳ ಮೇಲೆ ನಡೆಸುವ ಸಂಶೋಧನೆಯನ್ನು ತನ್ನ ಹೆಂಡತಿಯ ಮೇಲೆ ನಡೆಸುವಷ್ಟರ ಮಟ್ಟಿಗೆ ಡಾ.ನಾಡಗೌಡ ಸಾಮಾಜಿಕ ಮೌಲ್ಯಗಳ ಅಧಃಪತನಕ್ಕೆ

---

[13] *ಪುಟ ಸಂಖ್ಯೆ 109, 'ಯುಗಸಾಕ್ಷಿ', ಎಲ್.ವಿ.ಶಾಂತಕುಮಾರಿ*

ಮುನ್ನುಡಿಯಾಗುವ ಎಲ್ಲಾ ಸೂಚನೆಯನ್ನು ತುಂಬಿ ಕೊಡುತ್ತಾರೆ. ಹೆಣ್ಣಿಗೆ ಸಹಜವಾಗಿ ಬೇಕಾದ ತಾಯ್ತನವನ್ನು ಕೊಡಲಾರದೆ ಹೋಗುತ್ತಾರೆ. ನಾಡಗೌಡರ ವೈಜ್ಞಾನಿಕ ಪ್ರಪಂಚದಲ್ಲಿ ಯಾವ ಮಾನವೀಯ ಸಂಬಂಧಗಳಿಗೂ ಬೆಲೆ ಇಲ್ಲ. ಇಲ್ಲಿ ಉಚ್ಚ ಮತ್ತು ನೀಚ ಎಂಬ ವರ್ಗ ಮಾತ್ರ ಪ್ರಾಮುಖ್ಯತೆಯನ್ನು ಮಾತ್ರ ಪಡೆದುಕೊಂಡಿದೆ.

ಕಾದಂಬರಿಯಲ್ಲಿನ ಪಾತ್ರಗಳ ಚಿತ್ರಣ

ಚಿತ್ರ ಕಲಾವಿದ ಶ್ರೀಪತಿ

ಎಸ್.ಎಲ್.ಭೈರಪ್ಪನವರು ಜಲಪಾತ ಕಾದಂಬರಿಯಲ್ಲಿ ಮುಂಬಯಿ ನಗರ ಹಾಗೂ ಗ್ರಾಮೀಣ ಪ್ರದೇಶದ ಚಿತ್ರಣವನ್ನು ಗಟ್ಟಿಯಾದ ಹಿನ್ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ. ಕಾದಂಬರಿಕಾರರು ತಾವು ಮುಂಬಯಿಯಲ್ಲಿ ನೆಲಸಿದ ಪ್ರದೇಶದ ಗ್ರಹಿಕೆಯನ್ನು ಆಧರಿಸಿದ ಈ ಕಾದಂಬರಿ ಸಮಕಾಲೀನ ಜಗತ್ತಿಗೆ ಸವಾಲೊಡ್ಡುವಂತಾಗಿದೆ.

"ಶ್ರೀಪತಿ –ಕಲಾವಿದ" ಈತನ ಕಲಾವಂತಿಕೆಗೆ ಜೀವ ತುಂಬಿದ್ದು ಅಗ್ರಹಾರ. ತನ್ನ ಅಮ್ಮನ ರಂಗೋಲಿಗಳು, ಅದಾದ ನಂತರ ತನ್ನ ಮಾವನ ಜತೆಗೂಡಿ ತಿರುಮಕೂಡಲು ನರಸೀಪುರಕ್ಕೆ ಬಂದ ಮೇಲೆ ಇನ್ನು ಹೆಚ್ಚಿನ ಪ್ರೋತ್ಸಾಹ ಸಿಗುತ್ತದೆ. ಈತ ತನ್ನ ಅತ್ತೆ ರಂಗೋಲಿಗಳಿಗೆ ಬಣ್ಣ ತುಂಬುತ್ತಿದ್ದ, ಆನಂತರದಲ್ಲಿ ರಾಮಾಚಾರ್ಯರ ಬಳಿ ಚಿತ್ರ ಕಲೆ ಕಲಿಯಲು ಹೋಗುತ್ತಾನೆ. ಅವರು ಇವನನ್ನು ಬೆಟ್ಟದ ತಪ್ಪಲಿಗೋ, ಕುಕ್ಕರಹಳ್ಳಿ ಕೆರೆಯ ಹತ್ತಿರಕ್ಕೋ ಹೋಗಿ ಚಿತ್ರ ಬರೆದುಕೊಂಡು ಬರುವುದಕ್ಕೆ ಹೇಳುತ್ತಾರೆ. ದೋಷಗಳನ್ನು ತಿದ್ದಿಕೊಳ್ಳುವ ಕ್ರಮವನ್ನು ಹೇಳುತ್ತಾರೆ.

ಇದು ಆತನಿಗೆ ಚಿತ್ರಕಲೆಯಲ್ಲಿ ಪಳಗಬೇಕಾದ ತಾಂತ್ರಿಕ ಕೌಶಲ್ಯಗಳನ್ನು ಒದಗಿಸಿಕೊಡುತ್ತದೆ. ತನ್ನ ಜೀವನದ ದಾರಿಯನ್ನು ಕಂಡುಕೊಳ್ಳುವ ಸೃಜನಶೀಲತೆಯನ್ನು ಮೆರೆಯುವ ಹೆಬ್ಬಾಗಿಲಾಗಿ ಪರಿಗಣಿಸುತ್ತದೆ. ಮುಂಬಯಿಯಲ್ಲಿ ಕೆಲಸಕ್ಕೆ ಸೇರಿಕೊಂಡ ನಂತರ ಈತನಿಗೆ ಸ್ವತಂತ್ರವಾಗಿ ಚಿತ್ರ ಬರೆಯಲು ಅನುಮತಿ ಸಿಗುತ್ತದೆ.

ಮನುಷ್ಯ ವ್ಯವಹಾರಿಕ ಜೀವನ ನಡೆಸುವುದು ಎಷ್ಟು ಕಷ್ಟ ಎಂಬುದು ಇವರಿಗೆ ಮನವರಿಕೆಯಾಗುತ್ತದೆ. ವಿದ್ಯಾವಂತರಾದರೂ ಕೂಡ ಕೆಲಸ ದೊರಕದೇ ಜೀವನ ನಡೆಸುವುದೇ ಕಷ್ಟಕರವಾಗಿರುತ್ತದೆ. ಜೀವನ ಸಂಕಷ್ಟ ಪರಿಸ್ಥಿತಿಯ ತಾಕಲಾಟವನ್ನು

ಕಾದಂಬರಿಕಾರರು ಚಿತ್ರಿಸುತ್ತಾ ಹೋಗುತ್ತಾರೆ. ಜೀವನ ಎಂದ ಮೇಲೆ ಕಷ್ಟ – ಸುಖ, ನೋವು ನಲಿವು, ಏಳು ಬೀಳು ಇವುಗಳೆಲ್ಲ ಸಂಸಾರದಲ್ಲಿ ಬಂದು ಹೋಗುತ್ತಿರುತ್ತವೆ. ಆದರೆ ಶ್ರೀಪತಿ ಮತ್ತು ವಸು ವಿದ್ಯಾವಂತರಾದರೂ ಶ್ರೀಪತಿ ಚಿತ್ರಕಲಾವಿದ. ಕಲೆಯಲ್ಲಿ ಕಲೆಗಾರ. ಆದರೆ ವಸು ಸಂಗೀತಗಾರ್ತಿಯಾಗಿದ್ದರೂ, ಇಬ್ಬರ ಜೀವನ ಕಷ್ಟವಾಗಿರುತ್ತದೆ.

ಅದೇ ರೀತಿಯಲ್ಲಿ ಮುಖ್ಯವಾಗಿ ಡಾ.ನಾಡಗೌಡ ವೈದ್ಯಕೀಯ ಜೀವನ ನಡೆಸಲು ಅನುಕೂಲವಿದ್ದರೂ ಕೂಡ ತನ್ನ ಹೆಂಡತಿಯ ಆಸೆಗಳನ್ನು ಈಡೇರಿಸದೇ ತನ್ನ ಹೆಂಡತಿಯನ್ನು ಕಳೆದುಕೊಳ್ಳುವ ಸನ್ನಿವೇಶವನ್ನು ಜೀವನವನ್ನು ಎಸ್.ಎಲ್.ಭೈರಪ್ಪನವರು ವಿಭಿನ್ನವಾಗಿ ಕಾದಂಬರಿಯಲ್ಲಿ ಚಿತ್ರಿಸುತ್ತಾ ಹೋಗುತ್ತಾರೆ. ಅಂದರೆ ಬಯಸಿದ್ದೆಲ್ಲ ಸಿಗುವುದು ಕಷ್ಟ. ಕಷ್ಟ ಎಂದು ಬಯಸದೆ ಇರುವುದು ತಪ್ಪು. ಜೀವನದಲ್ಲಿ ಏನೆಲ್ಲಾ ಬಂದು ಹೋದರೂ ಅದನ್ನು ಎದುರಿಸಿ ಬದುಕುವುದೇ ಜೀವನ ಎಂಬುದನ್ನು ಕಾಣಬಹುದು. ಗಂಡು ಹೆಣ್ಣಿನ ಮೂಲಕ ಜೀವನ ಪರಿಸ್ಥಿತಿಯನ್ನು ವರ್ಣನೆ ಮಾಡುವುದರ ಮುಖಾಂತರ ಜಲಪಾತ ಕಾದಂಬರಿಯನ್ನು ಬರೆದಿದ್ದಾರೆ. 'ಜಲಪಾತ' ಎಂಬುದೇ ಜೀವನದ ಸತ್ಯವನ್ನು ತಿಳಿಸುವ ಮತ್ತು ಜೀವನದ ಪ್ರಮುಖ ಧ್ಯೇಯವನ್ನು ಅರ್ಥ ಮಾಡಿಕೊಳ್ಳವುದೇ ಆಗಿದೆ.

'ಸುಮಾರು ಹದಿನೈದು ದಿನದಲ್ಲಿ ಜೋಗದ ನೆನಪು ಬಂತು.ಅಲ್ಲಿ ಬರೆದು ಅಸಮರ್ಪಕವಾಗಿ ನಿಂತಿದ್ದ ಕ್ಯಾನ್ವಾಸುಗಳನ್ನು ವಸುವೇ ಸುರಕ್ಷಿತವಾಗಿ ಇಟ್ಟಿದ್ದಳು. ಅದನ್ನು ತೆಗೆಸಿ ನೋಡಬೇಕು ಎನಿಸಿತು. ಎರಡು ದಿನ ಅದನ್ನೇ ಪರೀಕ್ಷಿಸುತ್ತಿದ್ದೆ. ಮಾರನೆಯ ದಿನ, ಹೊಸದಾಗಿ ಜೋಗದ ಚಿತ್ರ ಬರೆಯಬೇಕೆನಿಸಿತು. ಒಂದೆರೆಡು ಗಂಟೆಗಳಲ್ಲಿಯೇ ಅದಮ್ಯವಾದ ಅಭಿವ್ಯಕ್ತಿಯ ಮೋರೆಯಾಗಿ ಬೆಳೆಯಿತು. ಮಾಡುತ್ತಿದ್ದ ಜಾಹೀರಾತಿನ ಕೆಲಸವನ್ನು ತೆಗದಿಟ್ಟು ದೊಡ್ಡ ಕ್ಯಾನ್ವಸನ್ನು ಸ್ಟ್ಯಾಂಡಿಗೆ ಹೊಂದಿಸಿ, ಪಿನ್ನು ತಗುಲಿಸಿ, ಜಲಪಾತವನ್ನು ಕಲ್ಪಿಸಿಕೊಂಡೆ. ಹಳೆಯ ಚಿತ್ರಗಳನ್ನು ಮತ್ತೆ ನೋಡಲಿಲ್ಲ. ಹಿನ್ನೆಲೆಯಲ್ಲಿ ಚಂದ್ರನಿಂದ ಬೆಳಗುವ ಆಕಾಶ, ಅದರ ಕೆಳಗೆ ಬೆಳದಿಂಗಳಿನಲ್ಲಿ ಕಪ್ಪಗೆ ಕಾಣುವ ಹಸಿರು ಕಾಡನ್ನು ಹೊದೆದ ಗುಡ್ಡದ ಏರು.ಅದರ ಕೆಳಗೇ, ಎರಡಾಗಿ ಸೀಳಿದ ಭಾರಿ ಹದ ಪರ್ವರದ ಸೀಳಿನೊಳಕ್ಕೆ ನದಿಯು ಬೀಳುತ್ತಿದೆ. ನೀರಿನ ನೊರೆಗಳ ಸ್ಪಂದನದಲ್ಲಿ ಅವುಗಳ ಅಂತರದಲ್ಲಿ ತೆಳುವಾಗಿ ಕಾಣುವ ಶೂನ್ಯ ಪ್ರದೇಶದಲ್ಲಿ ಸಹ ಶಕ್ತಿಯು ಪ್ರಕಟವಾಗುತ್ತಿದೆ. ಪ್ರತಾಪಕ್ಕೆ ಬೀಳುವ ಧಾರೆಯಲ್ಲಿ ಲಯವಿದೆ. ಅದು ಪ್ರತಾಪವನ್ನು ಮುಟ್ಟಿ ಭೂಮಿಯಲ್ಲಿ ಒಂದಾಗುತ್ತದೆ. ಇಡೀ ಚಿತ್ರದಲ್ಲಿ ಜೋಗದ ಸೃಷ್ಟಿ ಶಕ್ತಿಯು ಲಯ ಪೂರ್ಣವಾಗಿ ಪ್ರಕಟವಾಗಿದೆ. ಬೆರಳುಗಳು

ಕಲ್ಪನೆಯ ಸಾಧನವಾಗಿ ಕೆಲಸ ಮಾಡಿದುವು. ಇಡೀ ಚಿತ್ರದ ವರ್ಣ, ರೇಖೆ ಮತ್ತು ರಾಶಿವಿನ್ಯಾಸಗಳಲ್ಲಿ ಸಾಂಗತ್ಯವು ಸಾಧಿಸಿತು. ಬೆಳಗಿನ 9 ಗಂಟೆಗೆ ಪ್ರಾರಂಭಿಸಿದ ಚಿತ್ರವನ್ನು ಸಂಜೆ ನಾಲ್ಕೂವರೆ ವೇಳೆ ಬರೆದು ಮುಗಿಸಿದೆ. ನಡುವೆ ಒಂದು ನಿಮಿಷದ ವಿಶ್ರಾಂತಿ ಸಹ ತೆಗೆದುಕೊಳ್ಳಲಿಲ್ಲ. ನನಗೇ ಒಂದು ವಿಧವಾದ ಸಾರ್ಥಕತೆಯ ಅನುಭವವಾಯಿತು. ನನ್ನಲ್ಲಿದ್ದ ಸೃಷ್ಟಿ ಶಕ್ತಿಯ ಕಲಾವಿದನು ಸತ್ತಿಲ್ಲ, ಬದುಕಿದ್ದಾನೆ; ಜೀವನವು ನಿಸ್ಸಾರ್ಥಕ ಸ್ಥಿತಿಯಲ್ಲ, ಎಂಬ ಭಾವನೆಯೊಡನೆ ಕುಂಚವನ್ನು ಕೆಳಗೆ ಇಟ್ಟೆ[14] ಎನ್ನುವಾಗ ಶ್ರೀಪತಿಯ ಸಾರ್ಥಕನ ಭಾವನೆ ಕಂಡು ಬರುತ್ತದೆ.

ಜಲಪಾತ ಕಾದಂಬರಿಯಲ್ಲಿ ಶ್ರೀಪತಿಯು ಪಾತ್ರ ಮಹತ್ವ ಪಡೆದುಕೊಳ್ಳುವುದು ಒಂದು ಘಟ್ಟವಾದರೆ, ಅವರ ವೃತ್ತಿ ಬದುಕು ಸಹ ಅಷ್ಟೇ ವೈವಿಧ್ಯತೆಯಿಂದ ಮನೋಜ್ಞವಾಗಿ ಸಾಗುತ್ತದೆ. ಮುಂಬಯಿನಲ್ಲಿ ತಕ್ಕಮಟ್ಟಿಗೆ ಬದುಕಿನ ಬಂಡಿ ತಳ್ಳುತ್ತಿದ್ದರೂ, ಶ್ರೀಪತಿ ಕ್ಷಣ ಕ್ಷಣದಲ್ಲೂ ತನ್ನ ಗ್ರಾಮ್ಯ ಸಂಸ್ಕೃತಿ ಮತ್ತು ಬೆಳೆದು ಬಂದ ಪ್ರತಿ ಅಂಶಗಳನ್ನು ನೆನೆಸಿಕೊಳ್ಳುತ್ತಾನೆ. ಕಲೆಯ ಸಾರ್ಥಕತೆಯನ್ನು ಕಾಣುತ್ತಾನೆ.

ಈ ಕಾದಂಬರಿಯಲ್ಲಿ ಜಲಪಾತ ಎಂದರೆ, ಚಿತ್ರ ಕಲೆಯ ಜಲಪಾತವೇ? ಜೀವನದ ಜಲಪಾತವೇ? ಸಾವಿನ ಜಲಪಾತವೇ? ಅಂತೂ ಜಲಪಾತದ ಕಾದಂಬರಿ ಒಂದು ಜೀವನದ ಅದ್ಭುತವಾದ ಅನುಭೂತಿಯೊಂದನ್ನು ತಂದುಕೊಡುತ್ತದೆ.

ಶ್ರೀಪತಿಯು ಹಳ್ಳಿಗೆ ಬಂದ ಸಂದರ್ಭದಲ್ಲಿ ತನ್ನ ಕಲೆಗೆ ಹೆಚ್ಚು ಅವಕಾಶಗಳು ಸಿಗುತ್ತವೆ ಎಂದುಕೊಳ್ಳುತ್ತಾನೆ. ಆದರೆ ಹಳ್ಳಿಯಲ್ಲಿ ಮೂರು ಚಿತ್ರಗಳನ್ನು ಬರೆಯುವಷ್ಟರ ಹೊತ್ತಿಗೆ ಈತನಿಗೆ ಬೇಸರ ಮೂಡಿರುತ್ತದೆ. ವಸುವಿಗೆ ಸಂಗೀತದ ಮೇಲೆ ಆಸಕ್ತಿಯೂ ಹೊರಟು ಹೋಗಿರುತ್ತದೆ.

ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಮುಂಬಯಿ ಎಂಬ ಮಹಾನಗರ ದುಡಿಯುವವನ ಕೈಯನ್ನು ಯಾವಾಗಲೂ ಹಿಡಿಯುತ್ತದೆ. ಆದರೆ ದುಡಿಯುವ ಆಸಕ್ತಿ ಬೇಕಷ್ಟೇ. ಅಲ್ಲಿ ಸಿದ್ಧಿಸಿದ ಕಲೆ ವಿಜೃಂಭಿಸುತ್ತದೆ. ಆದರೆ ಹಳ್ಳಿಗಳೆಲ್ಲ ಮಿನಿ ಮುಂಬಯಿ ಆಗುತ್ತವೆ. ಅಲ್ಲಿನ ಜನರು ನಾಗರೀಕತೆಗೆ ತೆರೆದುಕೊಳ್ಳುತ್ತಾ ಮೂಲ ಗ್ರಾಮೀಣ ಸೊಗಡನ್ನೇ ಮರೆಯುತ್ತಿದ್ದಾರೆ. ಹಳ್ಳಿಗಳು ನವ ನಾಗರೀಕತೆಯ ಆಮಿಷಗಳಿಗೆ ಒಳಗಾಗಿ ತನ್ನ ಸತ್ವವನ್ನು

---

[14] ಪುಟ ಸಂಖ್ಯೆ 67–68 'ಜಲಪಾತ', ಎಸ್.ಎಲ್.ಭೈರಪ್ಪ

ಕಳೆದುಕೊಂಡಿವೆ. ಹಳ್ಳಿಗಿಂತ ಮುಂಬಯಿ ಸರಿ ಎಂದು ಕಾದಂಬರಿಕಾರರೂ ತೀರ್ಮಾನಿಸುತ್ತಾರೆ. ದುಡಿಯುವುದಕ್ಕೆ ಮುಂಬಯಿಯಲ್ಲಿ ಕೆಲಸವಾದರೂ ಸಿಗುತ್ತದೆ. ಆದರೆ ಹಳ್ಳಿಗಳಲ್ಲಿ ದುಡಿಯಲು ಎಲ್ಲಿ ಕೆಲಸ ಸಿಗುತ್ತದೆ. ಇಂದಿನ ಪರಿಸ್ಥಿತಿಯನ್ನು ಮುಂದಾಲೋಚನೆ ಮಾಡಿ ಕಾದಂಬರಿಕಾರರು ಚಿತ್ರಿಸಿರುವುದು ಅವರ ಕಲ್ಪನಾಶಕ್ತಿ ಮತ್ತು ಸೃಜನಶಿಲತೆಯನ್ನು ತಿಳಿಸುತ್ತದೆ.

ಶ್ರೀಪತಿಯ ಮಾವ ಗುಂಡುರಾಯರು

ಇವರು ವೃತ್ತಿಯಲ್ಲಿ ಶಿರಸ್ತೇದಾರರಾದರೂ ತುಂಬಾ ಸಹೃದಯ ವ್ಯಕ್ತಿ. ತನ್ನ ಅಳಿಯನಿಗೆ ಚಿತ್ರಕಲೆಯಲ್ಲಿ ಪ್ರೋತ್ಸಾಹದ ಜೊತೆಗೆ ಅನ್ನದ ಬಗ್ಗೆ ಮಹತ್ವದ ಮಾತುಗಳನ್ನಾಡುತ್ತಾರೆ.

"ಅನ್ನಂ ಬಹು ಕುರ್ವೀತ, ತದ್ ವ್ರತಮ್" ಎಂದು ಹೇಳುತ್ತಿದ್ದ. 'ನ ಕಂಚನ ವಸತೌ ಪ್ರತ್ಯಾಚಕ್ಷೀತ. ತದ್ ವ್ರತಮ್ ತಸ್ಮಾದ್ಯಯಾ ಕಯಾ ಚ ವಿಧಯಾ ಬಹ್ವನ್ನಂ ಪ್ರಾಪ್ನುಯಾತ್ ಆರಾಧ್ಯಸ್ಮಾ ಅನ್ನ ಮಿತ್ಯಾಚಕ್ಷತೇ"[15] ಎನ್ನುತ್ತಿದ್ದ. ಹೀಗೆ ನುಡಿಯುತ್ತಿದ್ದರು ಶ್ರೀಪತಿಯ ಮಾವನವರು. ಈ ಒಂದು ಸಂದರ್ಭ ಅನ್ನದ ಬಗ್ಗೆ ಇವರಿಗೆ ಅಪಾರವಾದ ಗೌರವ ಇರುವುದನ್ನು ಸೂಚಿಸುತ್ತದೆ. ಇಂದಿನ ದಿನಗಳಲ್ಲಿ ಅನ್ನವೇ ಇಲ್ಲವೆಂದು ಬಡಿದಾಡುತ್ತಿರುವಾಗ ಈ ವಾಕ್ಯ ಬಹಳ ಪ್ರಾಮುಖ್ಯತೆ ಪಡೆದುಕೊಳ್ಳುತ್ತದೆ.

ಇವರು ಮನೆಗೆ ಬಂದವರನ್ನು ಇರಿ ಎನ್ನುತ್ತಿದ್ದರು. ಅವರಿಗೆ ಊಟವನ್ನು ಹಾಕುತ್ತಿದ್ದರು. ಇದು ಇವರ ಉದಾರ ಗುಣವನ್ನು ಎತ್ತಿ ತೋರಿಸುತ್ತದೆ. ಇನ್ನು ಲಂಚದ ವಿಚಾರಕ್ಕೆ ಬಂದಾಗ ಇಂದಿಗೂ ಅನ್ವಯವಾಗುವಂತಹ ಬಹು ಅಮೂಲ್ಯವಾದ ಮಾತುಗಳನ್ನು ಆಡುತ್ತಾರೆ.

"ಮಾವ ಅನ್ನ ಕೊಟ್ಟು ಹುಟ್ಟಿದ್ದ. ಅವನಿಗೆ ಊಟವೆನ್ನುವುದು ಒಂದು ಯಜ್ಞವಿದ್ದಂತೆ. ನಿತ್ಯದ ಸಾಮಾನ್ಯ ಊಟವನ್ನು ಸಹ ಶ್ರದ್ಧೆ ಭಯ ಭಕ್ತಿಗಳಿಂದ ಕೂಡಿದ ಪೂರ್ಣತೆಯಿಂದ ಮಾಡುತ್ತಿದ್ದ. ಯಾವಾಗಲೂ ಅಗ್ರದ ಬಾಳೆ ಎಲೆಯ ಮೇಲೆಯೇ ಊಟಮಾಡುತ್ತಿದ್ದ".[16] ತಮ್ಮ ಮಗ ಸುಬ್ಬು ಲಂಚ ತಿನ್ನುತ್ತಾನೆ ಎಂದು ಗೊತ್ತಾದಾಗ–

[15] ಪುಟ ಸಂಖ್ಯೆ 34, 'ಜಲಪಾತ', ಎಸ್.ಎಲ್.ಭೈರಪ್ಪ

[16] ಪುಟ ಸಂಖ್ಯೆ 34, 'ಜಲಪಾತ', ಎಸ್.ಎಲ್.ಭೈರಪ್ಪ

"ಸುಬ್ಬೂ, ಏನೇ ಆದರೂ ಲಂಚ ಮುಟ್ಟಬ್ಯಾಡ. ಅದು ಅಧರ್ಮ ಪಾಪ ಎನ್ನುತ್ತಾರೆ. ಅದಕ್ಕೆ ಮಗ 'ಅಲ್ಲ ಅಣ್ಣ ನೀನು ಅಧಿಕಾರದಲ್ಲಿದ್ದಾಗ ಏನೂ ತಗೊಂಡಿರಲಿಲ್ಲವೇ? ಎಂದು ಪ್ರಶ್ನಿಸಿದಾಗ ಆಗ ಮಾವ ಕೊಡುವ ಉತ್ತರ ಇಂದಿಗೂ ಪ್ರಸ್ತುತ ಎಂದೆನಿಸುತ್ತದೆ. ಅದು ಲಂಚವಲ್ಲ ಕಣೋ ಅನ್ನ. ಅನ್ನಾನ ಯಾರೂ ಲಂಚವಾಗಿ ಕೊಡೂದಿಲ್ಲ. ಅನ್ನ ಕೊಟ್ಟೋನ ಮನೇಲಿ ಮತ್ತೆ ಮತ್ತೆ ತುಂಬಿ ಬೆಳೆಯುತ್ತೆ. ತಿಂದೋನಿಗೆ ತೃಪ್ತಿಯಾಗುತ್ತೆ. ಲಂಚವಾದರೆ ತಿಂದೋನು ನಾಶವಾಗ್ತಾನೆ. ಕೊಡೋನು ಬಡವನಾಗಿ ಹಾಳಾಗ್ತಾನೆ. ಅನ್ನಕ್ಕೆ ಲೆಕ್ಕವಿಲ್ಲ. ಲಂಚಕ್ಕೆ ಉಂಟು. ಲೆಕ್ಕಾಚಾರಕ್ಕೆ ಸಿಕ್ಕೋ ವಸ್ತುವನ್ನು ಯಾವನಿಂದಲೂ ತಗೋಬಾರದು".[17] ಇಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಲಂಚವೇ ತಾಂಡವವಾಡುತ್ತಿರುವಾಗ ಅದರ ಬಗ್ಗೆ ಧ್ವನಿ ಎತ್ತಿ ತಿರಸ್ಕಾರದ ಮಾತನಾಡಿರುವುದು ಒಂದು ಅತ್ಯದ್ಭುತವಾದ ಮಾತೇ ಸರಿ. ಇವರ ದೃಷ್ಟಿಕೋನ ತುಂಬಾ ಸುದೀರ್ಘವಾದ ಆಲೋಚನೆ ಕೂಡಿದ್ದೇ ಆಗಿದೆ. ಇಲ್ಲಿ ಹಿಂದಿನ ಸಂಪ್ರದಾಯದ ಝುಲಕುಗಳು ಹಾದು ಹೋಗುತ್ತವೆ. ಜೊತೆಗೆ, ಅಂದಿನ ಸಾಮಾಜಿಕ ವ್ಯವಸ್ಥೆಯಲ್ಲಿ ಮೌಲ್ಯಗಳು ಮತ್ತು ಅದರ ಬಗೆಗಿನ ಆದರ ಮತ್ತು ತಿರಸ್ಕಾರವನ್ನು ಕೂಡ ಎತ್ತಿ ಹೇಳುತ್ತವೆ.

ಗುಂಡುರಾಯರ ಹೆಂಡತಿ ಐವತ್ತು ಸೇರು ಬತ್ತ ಕೊಟ್ಟು ಕೊಳ್ಳೆಗಾಲದ ಸೀರೆ ಕೊಂಡುಕೊಂಡಾಗ ಈ ವಿಷಯ ತಿಳಿದು, "ತಿನ್ನೋಕೆ ಅಂತ ಕೊಟ್ಟ ಅನ್ನ ದೇವರನ್ನ ಮಾರಿ ನೀನು ಸೀರೆ ತಗೋಬೌದೆ? ಇದರಿಂದ ಮನೆಗೆ ಒಳ್ಳೆದಾಗೋದಿಲ್ಲ"[18] ಎಂದು ಹೇಳಿ ಒಬ್ಬ ಮುತ್ತೈದೆಗೆ ದಾನವಾಗಿ ಕೊಡಿಸುತ್ತಾರೆ. ಇದು ಗುಂಡುರಾಯರ ವ್ಯಕ್ತಿತ್ವದ ಘನತೆಯನ್ನು ಎತ್ತಿ ತೋರಿಸುತ್ತದೆ.

ಸುಧಾಬಾಯಿ:

ಜಲಪಾತ ಕಾದಂಬರಿಯಲ್ಲಿ ಬರುವ ಮತ್ತೊಂದು ಪ್ರಮುಖ ಪಾತ್ರ ಸುಧಾಬಾಯಿಯವರದು. ಇವರು ಡಾ. ನಾಡಗೌಡರವರ ಪತ್ನಿ ಹುಬ್ಬಳ್ಳಿಯ ಉತ್ತಮ ಸಂಪ್ರದಾಯಸ್ಥ ಕುಟುಂಬದಿಂದ ಬಂದವರು. ಇವರು ಶ್ರೀಪತಿ ವಸು ಮನೆಯ ಅಕ್ಕ ಪಕ್ಕದವರು. ಈಕೆಗೆ ಮದುವೆಯಾದರೂ ಮಕ್ಕಳ ಸೌಭಾಗ್ಯವಿಲ್ಲ. ಇದಕ್ಕೆ ಕಾರಣ ಡಾ.ನಾಡಗೌಡ ಅವರ ಆಧುನಿಕ ಚಿಂತನೆ. ಡಾ. ನಾಡಗೌಡರವರ ಚಿಂತನೆಗಳು

---

[17] ಪುಟ 35, 'ಜಲಪಾತ', ಎಸ್.ಎಲ್.ಭೈರಪ್ಪ
[18] ಪುಟ ಸಂಖ್ಯೆ 36, 'ಜಲಪಾತ', ಎಸ್.ಎಲ್.ಭೈರಪ್ಪ

ಕಾದಂಬರಿಯುದ್ದಕ್ಕೂ ನಮ್ಮನ್ನು ತಲ್ಲಣಗೊಳಿಸುತ್ತವೆ. ಹಾಗೆಯೇ ಚಿಂತೆಗೂ ಈಡು ಮಾಡುತ್ತವೆ.

"ನಾನು ವಂಶಸ್ಥರ ಮನೆಯ ಮಗಳು ನೀವು ಇಷ್ಟು ನೀಚರು ಅಂತ ಗೊತ್ತಿದ್ರೆ, ನಮ್ಮ ಅಣ್ಣ ನಿಮಗೆ ನನ್ನನ್ನು ಕೊಟ್ಟು ಮದುವೆ ಮಾಡುತ್ತಿರಲಿಲ್ಲ. ನಾನು ಪತಿವ್ರತೆ' ಎಂದಳು. ಇದರಲ್ಲಿ ತಪ್ಪೇನಿದೆ? ನಿನ್ನ ಪಾತಿವ್ರತ್ಯ ಹಾಳಾಗುವಂತಹದ್ದು ಏನಿದೆ? ನಾನೂ ಒಪ್ತುತ್ತೀನಿ. ಅಲ್ಲದೇ ಇದೇನು ಬೇರೆ ಗಂಡಸಿನ ಸಂಗ ಮಾಡಿದಂತೆ ಅಲ್ಲ' ಎಂದು ನಾನು ವಿವರಿಸಿದರೂ ಅವಳ ತಲೆ ಅದು ಹೋಗಲಿಲ್ಲ. 'ಪರಪುರುಷರ ಸಂಘವೇ ಮಾಡಬೇಕೇ? ಈ ವಂಶದ ಮಗುವಿನ ತಾಯಿಯಾಗುವುದಕ್ಕೇ ನನ್ನನ್ನು ಮದುವೆ ಮಾಡಿರೋದು. ಈ ವಂಶದಲ್ಲದೇ, ಬೇರೆ ರಕ್ತವನ್ನ ನನ್ನ ಹೊಟ್ಟೇಲಿಟ್ಟುಕೊಂಡು ಬೆಳೆಸಿದರೆ ನನ್ನ ಧರ್ಮ ಏನಾದೀತು?ನೀವು ಚಂಡಾಲರು!'

'ಸುಧಾ, ನಿನ್ನ ಹಳೆಯ ನಂಬಿಕೆಯನ್ನು ಬಿಡು. ವಂಶ, ಕುಲ, ಇವೆಲ್ಲಾ ಮೂಢನಂಬಿಕೆ. ದೃಢಕಾಯನೂ ಧೀರ್ಘಾಯುವೂ' ನನ್ನ ಮಾತನ್ನು ಅರ್ಧಕ್ಕೇ ತಡೆದು ಅವಳು ಹೇಳಿದಳು: 'ನನಗೆ ದೃಢಕಾಯದ ಮಗು ಬ್ಯಾಡ. ಅದು ಹುಟ್ಟಿದ ಮೂರು ದಿನಕ್ಕೇ ಸತ್ತರೂ ಸೈ. ಭಗವಂತ ಆಯಸ್ಸು ಬರೆದದ್ದಕ್ಕೆ ಯಾರು ಏನೂ ಮಾಡೂಹಂಗಿಲ್ಲ. ಅದು ಧರ್ಮದಿಂದ ನಮಗೆ ಹುಟ್ಟಿದ ಮಗು ಆಗಬೇಕು. ನೀವು ಇಂತ ಚಂಡಾಲರು ಅನ್ನೋದು ತಿಳಿದಮ್ಯಾಲೆ ನಿಮ್ಮ ಕೂಡ ಸಂಸಾರ ಮಾಡಬಾರದು"[19] ಭಾರತೀಯ ಸಮಾಜದಲ್ಲಿ ಹೆಣ್ಣಿಗೆ ಉನ್ನತ ಸ್ಥಾನವಿದೆ. ಆಕೆ ವಿವಾಹ ವಾಗಿದ್ದರಂತೂ ಜನರು ನೋಡುವ ದೃಷ್ಟಿಕೋನವೇ ಬೇರೆಯಾಗಿರುತ್ತದೆ. ಇನ್ನು ಮಕ್ಕಳಾದರಂತೂ ಆಕೆಯ ಘನತೆ ಇನ್ನೂ ಹೆಚ್ಚುತ್ತದೆ. ಅದೇ ಮದುವೆಯಾದ ಹೆಣ್ಣುಮಗಳಿಗೆ ಮಕ್ಕಳೇ ಇಲ್ಲದಿದ್ದರೆ ಆಕೆಯ ಜೀವನ ನರಕ ಯಾತನೆ ಅನುಭವಿಸಬೇಕಾಗುತ್ತದೆ.

ಈ ಕಾದಂಬರಿಯಲ್ಲಿ ಈಕೆ ಉನ್ನತ ವ್ಯಕ್ತಿತ್ವವುಳ್ಳ ಹೆಣ್ಣು ಮಗಳು. ಆದರೆ, ಈಕೆಯ ಜೀವನದಲ್ಲಿ ಮಗುವನ್ನು ಪಡೆಯುವ ಭಾಗ್ಯವಿರುವುದಿಲ್ಲ. ಕಾರಣ ಈಕೆಯ ಪತಿ ನಾಡಗೌಡರ ಚಿಂತನೆಯ ವಿಧಾನವೇ ಆಗಿರುತ್ತದೆ. ಈತನಿಗೆ ಲೈಂಗಿಕತೆಯ ಬಗ್ಗೆ ಯಾವುದೇ ಆತಂಕವಿಲ್ಲ. ಮಕ್ಕಳನ್ನು ಪಡೆಯಲು ಮಾತ್ರ ಆತಂಕ. ಕಾರಣ ಈತನ ಉಚ್ಚ ನೀಚ

---

[19] ಪುಟ 139, 'ಜಲಪಾತ', ಎಸ್.ಎಲ್.ಭೈರಪ್ಪ

ಪರಿಕಲ್ಪನೆ. ಈಕೆಗೆ ತಾನು ತಾಯಿಯಾಗಬೇಕೆಂಬ ಕನಸು ಕನಸಾಗಿಯೇ ಉಳಿಯುತ್ತದೆ. ಇದರಿಂದ ಮನನೊಂದ ಈಕೆ ಆತ್ಮಹತ್ಯೆ ಮಾಡಿಕೊಳ್ಳುತ್ತಾಳೆ. ತನ್ನ ಗಂಡನ ಚಿಂತನೆಗಳಿಗೆ ಸುಧಾಬಾಯಿ ಬಲಿಯಾಗುತ್ತಾಳೆ.

ವಸು

'ಜಲಪಾತ' ಕಾದಂಬರಿಯಲ್ಲಿ ಬರುವ ಮತ್ತೊಂದು ಪಾತ್ರ. ಈಕೆ ಶ್ರೀಪತಿಯ ಹೆಂಡತಿ. ಬಿ.ಎಸ್ಸಿ ಪದವೀಧರೆ. ಈಕೆಯ ವ್ಯಕ್ತಿತ್ವ ಹೆಸರಿಗೆ ತಕ್ಕನಾದುದು. ತನ್ನ ಗಂಡನೊಡನೆ ಜೀವನವನ್ನು ಸರಿದೂಗಿಸಿಕೊಂಡು ಹೋಗುವ ಈಕೆ ತನ್ನ ನಡವಳಿಕೆಯಿಂದಲೇ ಓದುಗರ ಗಮನವನ್ನು ಸೆಳೆಯುತ್ತಾಳೆ.

"ಅಡುಗೆಮನೆಯಲ್ಲಿ ಜಮ್ಖಾನಿಯಾ ಮೇಲೆ ಸ್ವರೈಕ್ಯವನ್ನು ಪಡೆಯಲು ನಾನು ಪ್ರಾರಂಭಿಸಿದೆ. ಅವರು ಹೇಳುವಂತೆ ನಾಭಿಯಿಂದ ಹುಟ್ಟುವ ಮೂಲ ಧ್ವನಿ ಎದೆಯಲ್ಲಿ ತುಂಬಿ ಬಂದು ಮಾತು ಅರಿಯದ ಭಾವನೆಯಲ್ಲಿ ಮಿಂದು ನನ್ನನ್ನೇ ನಾನು ಮರೆತು ಅರ್ಪಿಸಿಕೊಳ್ಳುವಂತೆ ಹೊರಗೆ ಬರುತ್ತದೆ. ಆ ಶಕ್ತಿಯು ನನ್ನಲ್ಲಿದೆ. ಆದರೆ ಇದ್ದಕ್ಕಿದ್ದಾಗೆ ನಮ್ಮ ಸ್ಥಿತಿಯು ನೆನಪಾಗುತ್ತದೆ. ನಾವಿರುವುದು ನಾಲ್ಕನೇಯ ಅಂತಸ್ತಿನ ಮೇಲೆ. ಮನೆಯ ಎರಡು ಕಡೆ ನಾಲ್ಕು ಅಂತಸ್ತಿನ ಎರಡು ಕಟ್ಟಡಗಳಿವೆ. ಅವುಗಳಿಗೂ ನಮಗೂ ನಡುವೆ ಹತ್ತು ಗಜಕ್ಕೂ ಕಡಿಮೆ ಅಂತರ.ಒಂದು ಏಣಿ ಹಾಕಿ, ಬೇಕಾದರೆ ಒಂದು ಆಕಾಶ ಸೇತುವೆಯನ್ನೇ ನಿರ್ಮಿಸಬಹುದು. ನನ್ನ ರಾಗ ಆ ಕಟ್ಟಡದ ನಾಲ್ಕನೇ ಅಂತಸ್ತಿನವರೆಗೆ ಕೇಳಿದರೆ! ತಕ್ಷಣ ಮೇಲೆದ್ದು, ಅಡಗೆ ಮನೆಯ ಕಿಟಕಿಯ ಎರಡು ಬಾಗಿಲುಗಳನ್ನು ಮುಚ್ಚಿ, ಮತ್ತೆ ತುಂಬಿ ಬಂದ ಭಾವದೊಡನೆ, ಪ್ರಯತ್ನಿಸುತ್ತಿರುತ್ತೇನೆ. ಏನೋ ಒಂದು ರೀತಿಯ ಸಂಕೋಚವೆನ್ನಲೆ? ಇಲ್ಲ ಭಯವೆನ್ನಲೆ? ಏಕೋ ಇದ್ದಕಿದ್ದಾಗೆಯೇ ಮಗು ವಿಶ್ವ ನೆನಪಾಗುವುದು.

ಅವನ ಶಾಲೆ ಅದಕ್ಕೆ ತಿಂಗಳಿಗೆ ಮೂವತ್ತು ರೂಪಾಯಿ ಹಾಲಿಗೆ ನಲ್ವತ್ತು, ಮನೆ ಬಾಡಿಗೆ ಎಪ್ಪತ್ತೈದು, ಇನ್ನು ಅಕ್ಕಿ, ಗೋಧಿ, ಬೆಳೆ, ಒಪ್ಪತ್ತಾದರೂ, ತರಕಾರಿ, ಬಟ್ಟೆ ಬರೆ, ಖರ್ಚಿನ ದಾರಿ ಒಂದೆರೆಡೆ? ಇವರ ದುಡಿಮೆಗೂ ಮಿತಿ ಇದೆ.ಈ ಮುಂಬಯಿ, ಈ ಜನ ಏನೋ ಏನೋ ಯೋಚನೆಗಳು. ಈ ಅಡಚಣೆಯ ಯೋಚನೆಯಲ್ಲಿ ಸಕಲವನ್ನು ಮರೆತು ಸರ್ವ ಪ್ರಾಣಶಕ್ತಿಯಿಂದ ರಾಗದಲ್ಲಿ ಲೀನವಾಗುವುದು ಹೇಗೆ? ಮೂಲ ಶಕ್ತಿಯೊಡನೆ ಮೇಲೆ

ಬಂದು ರಾಗಕ್ಕೆ ಅರ್ಪಿಸಿಕೊಳ್ಳುವುದು ಹೇಗೆ ಸಾಧ್ಯ?"[20] ವಸು ಶ್ರೀಪತಿಯ ಹೆಂಡತಿ ತಾನು ಸಂಗೀತ ಕಲಿಯಲು ಆಗುತ್ತಿರುವ ತೊಂದರೆ ಮತ್ತು ಮುಂಬಯಿಯಲ್ಲಿ ಜೀವನ ಸಾಗಿಸುವುದಕ್ಕೆ ಪಡುತ್ತಿರುವ ಕಷ್ಟವನ್ನು ಮತ್ತು ವಾಸ್ತವ ಪರಿಸ್ಥಿತಿಯನ್ನು ಸ್ವಗತ ರೂಪದಲ್ಲಿ ಹೇಳಿಕೊಳ್ಳುತ್ತಾಳೆ. ಮುಂಬಯಿಯಂತಹ ನಗರದಲ್ಲಿ ಜೀವನ ಸಾಗಿಸುವುದು ಮಧ್ಯಮ ವರ್ಗಕ್ಕೆ ಕುಟುಂಬಕ್ಕೆ ಯಾತನದಾಯಕ ಸನ್ನಿವೇಶ ಸೃಷ್ಟಿಯಾಗಿರುವುದು ಕಂಡು ಬರುತ್ತದೆ. ಮುಂಬಯಿ ಜೀವನ ಎಂದರೆ ಅದು ಮಧ್ಯಮ ವರ್ಗದ ಕುಟುಂಬಕ್ಕೆ ಆಕರ್ಷಕವಾಗಿ ಕಂಡರೂ, ನಿಜ ಸನ್ನಿವೇಶದಲ್ಲಿ ತುಂಬಾ ಕಷ್ಟಕರವಾದದ್ದು.

ಮುಂಬಯಿನಲ್ಲಿ ವಾಸಿಸುವಾಗ ತಾನು ಕೆಲಸಕ್ಕೆ ಹೋಗುವ ಪ್ರಸ್ತಾಪವನ್ನಿಡುತ್ತಾಳೆ. ಗಂಡ ಬೇಡವೆಂದ ತಕ್ಷಣ ಸುಮ್ಮನಾಗುತ್ತಾಳೆ. ಈಕೆ ಮುಂಬೈನಲ್ಲಿ ಸಂಗೀತ ಕಲಿಯಲು ಗಂಧರ್ವ ಮಹಾವಿದ್ಯಾಲಯದಲ್ಲಿ ಶಿಕ್ಷಕಿ ಮಿಸೆಸ್ ಶಾಲಿನೀಬಾಯಿ ಮಾಂಜ್‌ರೇಕರ್ ಬಳಿ ಸೇರುತ್ತಾಳೆ. ಆದರೆ ಮುಂಬಯಿ ಅಂತಹ ನಗರಿಯಲ್ಲಿ ಸಂಗೀತವನ್ನು ಮುಂದುವರಿಸಿಕೊಂಡು ಹೋಗಲು ಸಾಧ್ಯವೇ ಆಗುವುದಿಲ್ಲ. ಈಕೆಗೆ ಹಿಂದೂಸ್ಥಾನಿ ಸಂಗೀತವೆಂದರೆ ತುಂಬಾ ಪ್ರೀತಿ ಇದ್ದರೂ ಅದನ್ನು ಅರ್ಧಕ್ಕೆ ನಿಲ್ಲಿಸಬೇಕಾದ ಅನಿವಾರ್ಯತೆ ಬರುತ್ತದೆ. ಆದರೆ ಈಕೆ ತನ್ನ ಗಂಡನೊಡನೆ ಹೊಂದಿಕೊಂಡು ಹೋಗುವ ಚಿತ್ರಣ ಅಸಾಧಾರಣವಾದುದು. ತನ್ನ ಗಂಡನಿಗೆ ಸ್ಫೂರ್ತಿಯ ಸೆಲೆಯಾಗುತ್ತಾಳೆ. ಈತನ ಜೊತೆಯಲ್ಲಿಯೆ ಮತ್ತೆ ಹಳ್ಳಿಗೆ ಬರುತ್ತಾಳೆ. ಅಲ್ಲಿ ತನ್ನ ಸಂಗೀತದ ಪುನರುಜ್ಜೀವನಕ್ಕಾಗಿ ಕಾದು ವಿಫಲಳಾಗುತ್ತಾಳೆ.

ಶಾಲಿನಿ ಬಾಯಿ

ಇವರು ಮುಂಬಯಿಯಲ್ಲಿ ಗಂಧರ್ವ ಮಹಾವಿದ್ಯಾಲಯದ ಸಂಗೀತ ಶಾಲೆಯ ಶಿಕ್ಷಕಿ. ಇವರು ವಸುವಿನ ಶಿಕ್ಷಕಿ ಕೂಡ ಹೌದು. ಕಾದಂಬರಿಯಲ್ಲಿ ಸಂಗೀತದ ಬಗ್ಗೆ ಹಾಡುವ ಮಾತುಗಳು ಓದುಗನಿಗೆ. ಸಂಗೀತದ ಮೇಲಿನ ಆಸಕ್ತಿಯನ್ನು ಹುಟ್ಟಿಸುತ್ತದೆ. ಶಾಲಿನಿ ಬಾಯಿ ವಸುವಿಗೆ ಸಂಗೀತ ಆರಂಭಿಸುವ ದಿನ ಈ ರೀತಿ ಹೇಳುತ್ತಾರೆ. 'ಸರಿಯಾಗಿ ಕಂಠ ಕೂತಮೇಲೆ ತಂಬೂರಿ ತರಿಸಿಕೊಳ್ಳುವುದು ಅಲ್ಲಿಯ ತನಕ ಹಾರ್ಮೋನಿಯಂ ಮೇಲೆ ಸ್ವರ

---

[20] ಪುಟ 19. 'ಜಲಪಾತ', ಎಸ್.ಎಲ್.ಭೈರಪ್ಪ

ಸಾಧನೆ ಮಾಡಬೇಕು".[21] ಹೀಗೆ ಹೇಳುವಾಗ ಸಂಗೀತವನ್ನು ಕಲಿಸಿಕೊಡುವ ಉತ್ಸುಕತೆ ಮತ್ತು ಆರಾಧನಾ ಭಾವ ಕಂಡು ಬರುತ್ತದೆ.

"ಯಾವ ಸ್ವರವೂ ಬೇಗ ಸಿಕ್ಕುವುದಿಲ್ಲ. ಅದೊಂದು ಬಗೆಯ ಶೋಧನೆ ಪ್ರತಿಯೊಂದು ಸ್ವರಕ್ಕೂ ತನ್ನದೇ ವಿಶಿಷ್ಟ ಭಾವವಿರುತ್ತದೆ. ಆ ಭಾವವನ್ನು ಮನಸ್ಸಿನಲ್ಲಿ ತಂದುಕೊಂಡು ಎಲ್ಲವನ್ನೂ ಮರೆತು, ತನ್ನನ್ನು ತಾನು ಸಮರ್ಪಿಸಿಕೊಳ್ಳಬೇಕು. ಷಡ್ಜವು ಸ್ಥಾಯೀ ವೃಷಭ ಒಂದು ತೆರನಾದ ಧೈನ್ಯ, ಅರ್ಪಣೆಗಳನ್ನು ತೋರಿಸುತ್ತೇ. ಗಾಂಧಾರವು ಸಾತ್ವಿಕ ಗಾಂಭೀರ್ಯದ ಆಳದಲ್ಲಿದೆ.ಮಧ್ಯಮವು ಚಿತ್ತ ಮತ್ತು ಭಾವನೆಗಳ ಸಮಸ್ಥಿತಿ. ಪಂಚಮವು ಸ್ಥೈರ್ಯವನ್ನು ನುಡಿದರೆ, ದೈವತವು ದೃಢತೆಯನ್ನು ವೀರ್ಯವನ್ನು ಪ್ರಚೋದಿಸುತ್ತದೆ. ನೀಶಾದವು ಶಕ್ತಿ ಸಂಚಯ ಮಾಡಿದವನು. ತಗ್ಗಿ ನಡೆಯುವ ನಯದಂತೆ ಮೇಲಿನ ಷಡ್ಜಕ್ಕೂ, ಕೆಳಗಿನ ಷಡ್ಜಕ್ಕೂ ಮೂಲತಃ ವ್ಯತ್ಯಾಸವಿಲ್ಲದಿದ್ದರೂ ಈ ಎಲ್ಲಾ ಭಾವಗಳನ್ನು ಅನುಭವಿಸಿ, ಮುಟ್ಟಿದ ಸ್ಥಾಯಿ ಭಾವಕ್ಕೂ ಅನುಭವದ ಮೊದಲಿಗೆ ಇರುವ ಸ್ಥಾಯೀಭಾವಕ್ಕೂ ಇರುವ ಅಂತರವು ಅವುಗಳ ನಡುವೆ ಇದೆ. ಯಾವ ಸಂಕೋಚವು ಇಲ್ಲದೇ, ಹೊರ ಜಗತ್ತಿನ ಭಯ ಬಿಂಕಗಳಿಲ್ಲದೇ ನಿನ್ನನ್ನು ನೀನು ಈ ಸ್ವರಗಳಲ್ಲಿ ಒಂದಾಗುವುದನ್ನು ಕಲಿ. ಸಂಗೀತವೆಂದರೆ ಇಷ್ಟೆ. ಮುಂದೆ ಬರುವ ವಿನ್ಯಾಸಗಳೆಲ್ಲವೂ ಅನುಭವದ ವಿವಿಧ ಭಾವಗಳು, ಮೂಲದ ಐಕ್ಯದೊಡನೆ ಸೇರಿಕೊಂಡೆ ಆಡುವ ಛಾಯ ಚಲನೆಗಳು ಮಾತ್ರ"[22] ಎಸ್.ಎಲ್.ಭೈರಪ್ಪನವರು ಶಾಲಿನಿ ಬಾಯಿಯ ಮುಖಾಂತರ ತಮಗೆ ಇದ್ದ ಸಂಗೀತ ಅಭಿರುಚಿ, ಆಸಕ್ತಿ ಮತ್ತು ಸಮರ್ಪಣಾ ಭಾವ ಅಭಿವ್ಯಕ್ತಗೊಳಿಸಿದ್ದಾರೆ.ಸಂಗೀತದ ಗಾಢವಾದ ಚಿಂತನೆ. ವಿಶ್ಲೇಷಣೆ ಸಂಗೀತದ ಮೊದಲಿಗೆ ನಾಂದಿ ಹಾಡಿವೆ. ಇದು ಒಬ್ಬ ಸಂಗೀತ ಕಲಿಯುವವನ ಆಸಕ್ತಿಯನ್ನು ಹುಟ್ಟಿಸಿ ಆತ ಸಮರ್ಪಣಾ ಭಾವದೊಂದಿಗೆ ಸಂಗೀತದಲ್ಲಿ ಲೀನವಾಗುವಂತೆ ಪ್ರಚೋದಿಸುತ್ತದೆ.

"ಸಂಗೀತವೆಂದರೆ, ಗಂಟಲಿನಿಂದ ಮಾತ್ರ ಹುಟ್ಟಿ ಬರುವ ಶಬ್ಧವಲ್ಲ. ಇಡೀ ಶರೀರವು ಗಾನದ ಲಯವನ್ನು ಮಿಡಿಯುವ ವೀಣೆಯಾಗಿರಬೇಕು.ತನ್ನ ಸಾರ್ಥಕತೆಗಾಗಿ ವೀಣೆಯು ತನ್ನ ಸ್ವಾಮಿಗೆ ತನ್ನನ್ನು ತಾನು ಸಂಪೂರ್ಣವಾಗಿ ಅರ್ಪಿಸಿಕೊಂಡು ಅವನು ಅನಂತ ರಾಗಗಳನ್ನು ಸೃಷ್ಟಿಸಲು ತಾನು ಸಾಧನವಾಗಿರುವಂತೆ, ನೀನು ರಾಗದ ಕರೆಗೆ ನಿನ್ನನ್ನು

[21] ಪುಟ ಸಂಖ್ಯೆ 18, 'ಜಲಪಾತ', ಎಸ್.ಎಲ್.ಭೈರಪ್ಪ
[22] ಪುಟ 19, 'ಜಲಪಾತ', ಎಸ್.ಎಲ್.ಭೈರಪ್ಪ

ಅರ್ಪಿಸಿಕೊಂಡು ಬಿಡಬೇಕು. ನಾಭಿಯಿಂದ ಹುಟ್ಟುವ ಮೂಲ ಧ್ವನಿಯು ಎದೆಯಲ್ಲಿ ತುಂಬಿ ನಿಂತು, ಗಂಟಲಿನಿಂದ ಹೊರಗೆ ಹರಿಯುವಾಗ, ಇಡೀ ಶರೀರವೇ ಮೇಲೆ ಎದ್ದು, ರಾಗಕ್ಕೆ ತನ್ನನ್ನು ತಾನು ಅರ್ಪಿಸಿಕೊಳ್ಳುತ್ತಿರಬೇಕು. ಸಕಲ ಸಂಕೋಚವನ್ನು ಬಿಟ್ಟು ಪ್ರಾಣ ಶಕ್ತಿಯಿಂದ ಹೀಗೆ ಸ್ವರದ ಐಕ್ಯವನ್ನು ಕಂಡುಕೊಂಡರೆ ಸಾಕು. ಅದೇ ಸಂಗೀತದ ಆನಂದ. ರಾಗ ರಾಗಿಣಿಗಳ ಸೃಷ್ಟಿಯು ಈ ಐಕ್ಯದಿಂದ ತಾನಾಗಿಯೇ ಆಗುತ್ತದೆ".[23]

ಸಂಗೀತ ಕಲಿಯಬೇಕಾದವರು ಯಾವ ರೀತಿಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ಅರ್ಪಿಸಿಕೊಳ್ಳಬೇಕು. ಮತ್ತು ಸಂಕೋಚವನ್ನು ಬಿಟ್ಟು ಸಂಗೀತದೊಡನೆ ಒಂದಾಗಬೇಕು ಎಂಬ ಮಾತುಗಳನ್ನು ಶಾಲಿನಿ ಬಾಯಿ ವಸುವಿಗೆ ಹೇಳಿದ್ದಾರೆ.

ರೆಬೆಲೊ:

ಶ್ರೀಪತಿ ಕೆಲಸ ಮಾಡುವ ಆಫೀಸಿನ ಸ್ಟೆನೋ.ಕಂಪೆನಿ ಮ್ಯಾನೆಜರ್ ಅವರ ಸೆಕ್ರೆಟರಿ.ಈಕೆಯ ಕೆಲಸವೆಂದರೆ, ಮ್ಯಾನೆಜರ್ ಮತ್ತು ಆರ್ಟ್ ಡೈರೆಕ್ಟರ್ ಹೇಳುವುದನ್ನು ಶೀಘ್ರಲಿಪಿಯಲ್ಲಿ ಬರೆದು ಕೊಡುವುದು ಮತ್ತು ಮ್ಯಾನೇಜರ್ ಪರವಾಗಿ ಜಾಹೀರಾತು ಕೊಡುವ ಕಂಪನಿಗಳಿಗೆ ಹೋಗಿ ಮಾಮಾತಾಡಿಕೊಂಡು ಬರುವುದು ಈಕೆಯ ಕೆಲಸ.

ರೆಬೆಲೋ ಮಂಗಳೂರಿನವಳು. ರೆಬೆಲೋಗೆ ಶ್ರೀಪತಿ ಎಂದರೆ ಅಭಿಮಾನ. ಈಕೆ ಕನ್ನಡಿಗಳಾದರೂ ಮಾತನಾಡುವುದು ಇಂಡಿಯನ್ ಇಂಗ್ಲೀಷ್‌ನಲ್ಲಿ. ಎಂತಹ ಸಂದರ್ಭದಲ್ಲಿಯೂ ಕುಶಲವಾಗಿ ಸಂಭಾಷಣೆ ನಡೆಸುತ್ತಾಳೆ. ಅವಳ ದೃಷ್ಟಿಯಲ್ಲಿ ಶ್ರೀಪತಿ ಜನ್ಮಜಾತ ಕಲಾವಿದ. ಶ್ರೀಪತಿಯ ಹಿಂದೆ ಬಿದ್ದು ತನ್ನ ಭಾವಚಿತ್ರವನ್ನು ಬರೆದುಕೊಡುವಂತೆ ಕೇಳುತ್ತಾಳೆ. ಆದರೆ, ಶ್ರೀಪತಿ ಆಕೆಯ ಭಾವಚಿತ್ರವನ್ನು ಬರೆದುಕೊಡುವುದಿಲ್ಲ.

ರೆಬೆಲೋಗೆ ಮದುವೆಯಾಗಿ ಅವಳ ಗಂಡ ಅಹಮದಾಬಾದ್, ಅಜ್ಮೇರಿನಲ್ಲಿ ಕೆಲಸದಲ್ಲಿದ್ದಾನೆ. ಈಕೆ ಹೇಳುವ ಮಾತುಗಳು ಹೀಗಿವೆ: "'ಮೈ ಡಿಯರ್ ಆರ್ಟಿಸ್ಟ್, ಎಲ್ಲದಕ್ಕೂ ಒಂದು ಉತ್ಸಾಹದ ಕಾಲ ಇರುತ್ತೆ. ಒಬ್ಬರು ಉತ್ಸಾಹದಿಂದ ಇದ್ದಾಗ ಮತ್ತೊಬ್ಬರು ತಣ್ಣಗಿದ್ದರೆ ಉತ್ಸಾಹವನ್ನು ಪ್ರಕಟಿಸಿದವರಿಗೆ ಅಪಮಾನವಾಗುವುದಿಲ್ಲವೇ? ನಿಜವೆಂದರೆ ನನಗೆ ಈಗ ಪೊರ್ಟ್ರೇಟ್ ಬರೆಸುವ ವಿಚಾರವೇ ಇಲ್ಲ. ಅದೂ ನಿಮ್ಮಂಥ

---

[23] ಪುಟ 18, 'ಜಲಪಾತ', ಎಸ್.ಎಲ್.ಭೈರಪ್ಪ

ಕಲಾವಿದರ ಎದುರಿಗೆ ನೀವು ಹೇಳಿದ ಭಂಗಿಯಲ್ಲಿ ಕತ್ತನ್ನೂ ಅತ್ತಿತ್ತ ತಿರುಗಿಸದೆ ದಿನಗಟ್ಟಲೆ ಏಕಾಂಗಿಯಾಗಿ ಕುಳಿತುಕೊಳ್ಳುವವರು ಯಾರು?"[24] ಭೈರಪ್ಪನವರು ಕಲೆಯನ್ನು ಯಾವ ರೀತಿಯಲ್ಲಿ ಗೌರವಪೂರ್ವಕವಾಗಿ ಎತ್ತರಕ್ಕೆ ಕೊಂಡೊಯ್ಯುತ್ತಾರೆ ಎಂಬುದನ್ನು ಕಂಡುಕೊಳ್ಳಬಹುದು. ಇಲ್ಲಿ ರೆಬೆಲೋಗೆ ಶ್ರೀಪತಿಯ ಕೈಯಿಂದ ಚಿತ್ರ ಬಿಡಿಸಿಕೊಳ್ಳುವ ಆಸೆಯಿದೆ. ಆದರೆ ಈತನಿಗೆ ಸಮಯವಿಲ್ಲ. ಆದರೆ, ಈತನಿಗೆ ಆಕೆಯ ಚಿತ್ರವನ್ನು ಬರೆಯಬೇಕೆಂದುಕೊಂಡಾಗ ಆಕೆಗೆ ನಿರಾಶೆಯಾಗಿರುತ್ತದೆ.

'ನನ್ನ ಅಭಿಪ್ರಾಯ ಬೇರೆ ಇದೆ. ನೀನು ಆಫೀಸಿಗೆ ಹೋಗಿ ಕೆಲಸಮಾಡದಿದ್ದರೆ ಅದನ್ನು ಮಾಡೋಕ್ಕೆ ಒಂದು ಕೋಟಿ ಜನ ಕೂಲಿಯವರು ಸಿಕ್ತಾರೆ. ನನ್ನ ಪೇಂಟಿಂಗ್ ಕೆಲಸಕ್ಕೂ ಅಷ್ಟೆ. ಆದರೆ ನನಗೆ ಅನಿಸುವಂತೆ, ಹೆಂಗಸರು ಆಫೀಸಿನಲ್ಲಿ ದುಡಿಯಲೇಬಾರದು. ಅವರು ಮನೇಲಿ ಅಡಿಗೆ ಮಾಡಬೇಕು. ದಿನವಡೀ ಸುಂದರವಾದ ಹಾಡು ಹೇಳುತ್ತಿರಬೇಕು. ಪ್ರತಿದಿನ ಮನೆ ಸಾರಿಸಿ, ಹೊಸ ಹಸೆ ಬರೆಯಬೇಕು. ಗೋಡೆ ಬಾಗಿಲುಗಳ ಮೇಲೆ, ಅವರು ಹಾಕುವ ಸುಂದರವಾದ ಕಸೂತಿಯ ಕೆಲಸಗಳು ತೂಗುತ್ತಿರಬೇಕು. ಚಿತ್ರ ಬರೆಯಬೇಕು. ಇಲ್ಲದಿದ್ದರೆ ಸಂಗೀತ ಕಲಿತು ದಿನವೂ ಗಂಡನ ಮುಂದೆ ಹಾಡಿ, ಅವನ ಕಲಾಪ್ರಜ್ಞೆಯನ್ನು ಜೀವಂತವಾಗಿಡಬೇಕು.'[25] ಎಂಬ ಮಾತುಗಳನ್ನು ಶ್ರೀಪತಿ ರೆಬೆಲೋಗೆ ಹೇಳುತ್ತಾನೆ. ಇಲ್ಲಿ ಒಂದು ಹೆಣ್ಣು ಯಾವ ರೀತಿ ಇರಬೇಕು ಎಂಬುದನ್ನು ಭೈರಪ್ಪನವರು ಉದ್ದೇಶಪೂರ್ವಕವಾಗಿ ಹೇಳಿಸಿದ್ದಾರೆ.

ಮತ್ರಾನಿ

ಇವರು ಬುಟಾನಿ ಪಬ್ಲಿಷರ್ಸ್ ಆರ್ಟ್ ಡೈರೆಕ್ಟರ್.ನಗುಮುಖದ ಸಂತೋಷ ಸ್ವಭಾವದ ಮನುಷ್ಯ.ಶ್ರೀಪತಿಯ ಕೆಲಸವನ್ನು ಮೆಚ್ಚುತ್ತಾರೆ. ಮತ್ರಾನಿ ಕೇಳುತ್ತಾರೆ:"ಮಿಸ್ಟರ್‌ಪ್ಯಾಟಿ, ನೀವು ಯಾರಕೈಕೆಳಗೆ ಕೆಲಸ ಆರ್ಟ್ ಕಲಿತಿದ್ದು? ಐ ಮೀನ್, ನಿಮ್ಮಂಥ ಜೀನಿಯಸ್, ವೆಲ್‌ಫ಼ರ್ ಎಗ್ಸಾಂಪಲ್‌ಮೈಕೇಲ್ ಏಂಜೆಲೋ, ಬಟ್‌ಹಿ ಈಸ್ ಡೆಡ್, ಸಚ್ಚಾ ಕಲಾಕಾರ್ ತೋ ಕಭೀನಹೀಂ ಮರೇಗಾ, ಐ ಮೀನ್ ನಿಮ್ಮಂಥೋರು ಪಿಕಾಸೋ, ಗಾಗಿನ್, ಕಾನ್ ಸ್ಟೇಬಲ್, ವೆಲ್ ಅವರ್ ಓನ್ ರವಿವರ್ಮ, ಇನ್ ದಿ ಮಾಡರ್ನ್ ಟೈಮ್ಸ್ ಗಂಗೂಲಿ, ಇಂಥೋರ ಹತ್ರ ಒಂದು ಆರು ತಿಂಗಳು ಟ್ರೇನಿಂಗ್ ತಕೊಂಡ್ರೆ ನಿಮ್ಗೆ ಒಳ್ಳೆ ಭವಿಷ್ಯ ಆಗುತ್ತೆ, ಈಸ್

[24] ಪುಟ ಸಂಖ್ಯೆ 62, 'ಜಲಪಾತ', ಎಸ್.ಎಲ್.ಭೈರಪ್ಪ
[25] ಪುಟ ಸಂಖ್ಯೆ 90, 'ಜಲಪಾತ', ಎಸ್.ಎಲ್.ಭೈರಪ್ಪ

ಇಂಟಿಟ್?"[26] ಈ ಮಾತುಗಳನ್ನು ಹೇಳುವುದು ಶ್ರೀಪತಿಗೆ ಮತ್ರಾನಿಯವರು. ಇವರು ಶ್ರೀಪತಿಯನ್ನು ತುಂಬಾ ಪ್ರೋತ್ಸಾಹಿಸುತ್ತಾರೆ. ಒಂಧರ್ಥದಲ್ಲಿ ಇವರು ಶ್ರೀಪತಿಯನ್ನು ಅವಮಾನಿಸಬೇಕೆಂಬ, ತಿರಸ್ಕರಿಬೇಕೆಂಬ ಉದ್ದೇಶದಿಂದ ಆಡಿದ್ದಿಲ್ಲ.

ವೈಯಕ್ತಿಕವಾಗಿ ಮತ್ರಾನಿಯವರು ಒಳ್ಳೆಯವರು. ಧಾರಾಳವಾಗಿ ಹಣ ಖರ್ಚು ಮಾಡುವ ಇವರು ಶ್ರೀಪತಿಗೆ ಸಂಬಳ ಹೆಚ್ಚಿಸಿದ್ದರು. ಶ್ರೀಪತಿ ಸಂಬಳದ ಕೆಲಸ ಬಿಟ್ಟ ಮೇಲೂ ಅವನ ಯೋಗ್ಯತೆಯನ್ನು ಶಿಫಾರಸು ಮಾಡಿ ಫ್ರೀಲಾನ್ಸ್ ಪೇಂಟರ್‌ನೆಂದು ಕಂಪನಿಯಲ್ಲಿ ಉಳಿಸಿಕೊಳ್ಳುತ್ತಾರೆ. ಇವರು ಅಮೆರಿಕೆಯಲ್ಲಿ ಜಾಹೀರಾತು ವಿಷಯ ಕುರಿತು ಅಧ್ಯಯನ ಮಾಡಿದ್ದಾರೆ. ಮತ್ರಾನಿಯವರು ಜಲಪಾತ ಕಾದಂಬರಿಯಲ್ಲಿ ಶ್ರೀಪತಿಗೆ ಪ್ರೋತ್ಸಾಹ ಕೊಡುವ ಮೂಲಕ ಪಾತ್ರದಲ್ಲಿ ಗಮನ ಸೆಳೆಯುತ್ತಾರೆ.

"ಜೀವನಕ್ಕೆ ಬೇರೆ ಯಾವುದಾದರೂ ಕೆಲಸ ಹುಡುಕಿಕೊಂಡು ವಿರಾಮದಲ್ಲಿ ಸೃಷ್ಟ್ಯಾತ್ಮಕ ಕೆಲಸವಷ್ಟೇ ಮಾಡಬೇಕೆಂದು ಒಂದು ವರ್ಷ ಪ್ರಯತ್ನಪಟ್ಟೆ. ಬೇರೆ ಯಾವ ಕೆಲಸಕ್ಕೂ ಅನರ್ಹನೆಂದು ಮುಂಬಯಿಯು ನನ್ನನ್ನು ನಿರ್ಧರಿಸಿದೆ ಎಂಬುದನ್ನು ಅರ್ಥಮಾಡಿಕೊಂಡಾಗ ನಾನು ಅಕ್ಷರಶ: ಹೆಂಗಸಿನಂತೆಯೇ ಅತ್ತು ಬಿಟ್ಟಿದ್ದೇನೆ. ಯಾವುದೂ ಬೇಡ, ಈ ಕೆಲಸ ಬಿಟ್ಟು ಬಿಡುವಾ ಎಂದರೆ ಊರಿನಲ್ಲಿರುವ ಹೆಂಡತಿ ಮತ್ತು ಆಗತಾನೆ ಹುಟ್ಟಿರುವ ಮಗುವಿನ ಹೊಣೆ. ಅಷ್ಟರಲ್ಲಿ ನನ್ನ ಕೆಲಸ ಮೆಚ್ಚಿಕೊಂಡು ಕಂಪನಿಯವರು ಸಂಬಳ ಹೆಚ್ಚಿಸಿದ್ದರು. ಹೊಸದಾಗಿ ಆರ್ಟ್ ಡೈರೆಕ್ಟರಾಗಿ ಬಂದ ಮತ್ರಾನಿಯವರು ನನ್ನನ್ನು ಮೆಚ್ಚಿ ಇನ್ನೂ ಹೆಚ್ಚು ಸಂಬಳ ಮಾಡಿಸಿದರು...."[27] ಎನ್ನುವಾಗ ಮತ್ರಾನಿಯವರನ್ನು ಮನ ತುಂಬಿ ಶ್ರೀಪತಿ ನೆನೆಯುತ್ತಾನೆ.

---

[26] ಪುಟ ಸಂಖ್ಯೆ 24, 'ಜಲಪಾತ', ಎಸ್.ಎಲ್.ಭೈರಪ್ಪ

[27] ಪುಟ 28, 'ಜಲಪಾತ', ಎಸ್.ಎಲ್.ಭೈರಪ್ಪ

ಅಧ್ಯಾಯ 4

ಜಲಪಾತ ಕಾದಂಬರಿಯಲ್ಲಿ ಕಂಡು ಬರುವ ನಗರ ಮತ್ತು ಗ್ರಾಮಗಳ ನಡುವೆ ಇರುವ ವ್ಯತ್ಯಾಸ

1. ಜಲಪಾತ ಕಾದಂಬರಿಯಲ್ಲಿ ಮುಂಬಯಿ ಜೀವನ ಚಿತ್ರಣ

'ಜಲಪಾತ' ಕಾದಂಬರಿಯಲ್ಲಿ ಬರುವ ಮುಂಬಯಿ ಚಿತ್ರಣ ಮಹತ್ತರವಾದುದು. ಇಲ್ಲಿನ ಜೀವನ ಮಧ್ಯಮ ಕುಟುಂಬದವರಿಗೆ ಮುಗಿಲ ಮಲ್ಲಿಗೆಯಂತೆ. ದುಡಿಯಬೇಕು ತಿನ್ನಬೇಕು. ಅತ್ತ ಕಡೆ ಬದುಕಲು ಆಗದೆ, ಇತ್ತ ಕಡೆ ಜೀವನ ನಡೆಸಲು ಆಗದ ಪರಿಸ್ಥಿತಿ. ಭೈರಪ್ಪನವರು ಕಾದಂಬರಿಯ ಪ್ರಾರಂಭದಲ್ಲೇ ಮುಂಬೈ ಚಿತ್ರಣವನ್ನು ಕೊಡುತ್ತಾರೆ. ಅಂದರೆ ಇಲ್ಲಿ ಮುಂಬಯಿ ಮಹತ್ವದ ಪಾತ್ರವನ್ನೇ ಪಡೆದುಕೊಂಡಿದೆ. ಆ ಸಾಲುಗಳು ಹೀಗಿವೆ: "ನರಮಂಡಲದ ಹೋಲಿಕೆಯಂತೆ ಭಾವಿಸಿದರೆ, ಮುಂಬಯಿ ಈ ದೇಶದ ಮೆದುಳಿನ ಕೇಂದ್ರವಾಗಬೇಕು. ರಕ್ತನಾಳಗಳ ಉಪಮೆಯಂತೆ ಕಲ್ಪಿಸಿದರೆ, ಅದು ದೇಶದ ಹೃದಯವಾಗಬೇಕು. ಆದರೆ ಮುಂಬಯಿಗೆ ಮೆದುಳು ಇಲ್ಲ. ಹೃದಯವೂ ಇಲ್ಲ, ಆದರೂ ಅದೇ ದೇಶದ ಕೇಂದ್ರ ಅಲ್ಲ, ಅದೇ ದೇಶ."[28]

ಕಾದಂಬರಿಕಾರರ ಪ್ರಕಾರ ಮುಂಬಯಿ ದೇಶದ ಮಧ್ಯದಲ್ಲಿ ಇಲ್ಲದಿದ್ದರೂ ವಾಣಿಜ್ಯ ನಗರವಾಗಿ ಬೆಳೆದು ನಿಂತಿದೆ. ಇದು ಉದ್ಯೋಗಸ್ಥರನ್ನು, ನಿರುದ್ಯೋಗಿಗಳನ್ನು, ಕಲಾವಿದರನ್ನು ಹೀಗೆ ಹಲವು ತರಹದ ಜನರನ್ನು ಕೈ ಬೀಸಿ ಕರೆಯುತ್ತದೆ. ಅದೇ ಪೋಷಿಸುತ್ತದೆ. ಹಾಗಾಗಿ ಲೇಖಕರು ಭಾವಿಸುವ ಹಾಗೆ ಮುಂಬಯಿ ದೇಶದ ಹೃದಯ ಭಾಗವಾಗದಿದ್ದರೂ ಇದರ ಚಟುವಟಿಕೆ ಇಡೀ ದೇಶದಲ್ಲಿ ನಡೆಯುವ ಚಟುವಟಿಕೆಗಳನ್ನು ನಿಯಂತ್ರಿಸುತ್ತದೆ. ಇಂತಹ ಸಂದರ್ಭದಲ್ಲಿ ಮುಂಬೈ ಎಂಬುದು ಇಡೀ ಹಿಂದೂಸ್ತಾನದ ಜೀವನಾಡಿಗಳನ್ನು ಆಳುವ ಹೃದಯವಾಗಿದೆ. ಈ ಸಂದರ್ಭದಲ್ಲಿ "ಇದು ಮುಂಬಯಿ, ಇಡೀ ಹಿಂದೂಸ್ತಾನದ ಜೀವನಾಡಿಗಳನ್ನು ಆಳುವ ಹೃದಯ ಈ ಊರಿನಲ್ಲಿ ಸಂಗೀತ ಹುಟ್ಟಿತ್ತೇ? ಚಿತ್ರ

---

[28] ಪುಟ 1, 'ಜಲಪಾತ',ಎಸ್.ಎಲ್.ಭೈರಪ್ಪ

ಬದುಕಿತೇ?"[29] ಎಂಬ ಸ್ವಗತ ವಸುವಿನಲ್ಲಿ ಹುಟ್ಟುತ್ತದೆ. ಇದು ವಾಸ್ತವಕ್ಕೆ ತುಂಬಾ ಸನಿಹವಾದದ್ದು ಎಂದರೆ ತಪ್ಪಾಗಲಾರದು.

ಶ್ರೀಪತಿಯ ಹೆಂಡತಿ ವಸು ಸಂಗೀತ ಕಲಿಯಬೇಕೆಂಬ ಆಸೆ ಮೊದಲಿನಿಂದಲೂ ಇದ್ದುದರಿಂದ ಸಂಗೀತದ ಶಾಲೆಗೆ ಸೇರುತ್ತಾಳೆ. ಈಕೆ ಅಡುಗೆ ಮನೆಯಲ್ಲಿ ಕುಳಿತು ಸ್ವರೈಕ್ಯವನ್ನು ಪ್ರಾರಂಭಿಸುತ್ತಾಳೆ. ಆದರೆ ಇತರೆ ಮನೆಯವರಿಗೆ ಕೇಳಿಸುತ್ತದೆಂಬ ಭಯ ಕಾಡುತ್ತದೆ. ಆ ಭಯದಿಂದ ಹಾಡುವ ಈಕೆಯ ಸಂಗೀತದಲ್ಲಿ ಗಂಡನಿಗೆ ಭಾಗಿಯಾಗಲು ಅತೃಪ್ತಿ ಉಂಟಾಗುತ್ತದೆ. ಚಿತ್ರ ಕೆಲಸ ಬಿಟ್ಟು ಬರುವ ಶ್ರೀಪತಿಗೂ ಬೇಸರವಾಗಿ ಸಮುದ್ರದ ಕಡೆ ಮುಖ ಮಾಡುತ್ತಾನೆ. ಆದರೆ ಶ್ರೀಪತಿ ಜೀವಂತ ಕಲಾವಿದ. ಈತ ಜೀವನ ಸಾಗಿಸಲು ಜಾಹೀರಾತು ಕಂಪೆನಿಯಲ್ಲಿ ಚಿತ್ರಗಳನ್ನು ಬರೆಯುತ್ತಾನೆ.

ಇದೇ ಹಿನ್ನೆಲೆಯಲ್ಲಿ ಶ್ರೀಪತಿಯ ಹೆಂಡತಿ ವಸು ಹೇಳುವ ಮಾತುಗಳು ಅರ್ಥಪೂರ್ಣವಾಗಿ ಧ್ವನಿಸುತ್ತವೆ. "ಮುಂಬಯಿ ಎಂಬ ನಗರದಲ್ಲಿ ಸಂಗೀತ ಹುಟ್ಟಲಾರದು ಮತ್ತು ಚಿತ್ರ ಕಲೆಯು ಬದುಕಲಾರದು,"[30] ಹೌದು! ಚಿತ್ರ ಹುಟ್ಟಿದರೂ ಸ್ವತಂತ್ರವಾಗಿ ರಚಿಸಲು ಸಾಧ್ಯವಿಲ್ಲ. ಯಾರದೋ ನಿಯಂತ್ರಣದಲ್ಲಿ ಈ ಎಲ್ಲ ಚಟುವಟಿಕೆಗಳು ನಡೆಯುತ್ತವೆ. ಹಾಗೆಯೇ ಸಂಗೀತವೂ, ತುಂಬಾ ವಿಶಾಲವೂ ಅಲ್ಲದ ಮುಂಬಯಿ ನಗರದಲ್ಲಿ ಮನೆಗಳೆಂದರೆ ಅಕ್ಕ ಪಕ್ಕ ಅಂಟಿಕೊಂಡಿರುತ್ತವೆ. ಸ್ವಲ್ಪ ಜೋರಾಗಿ ಸಂಗೀತ ಹಾಡಿದರೂ ಕಷ್ಟ, ಯಾರ ದೂಷಣೆಗೋ ಒಳಗಾಗಬೇಕಾಗುತ್ತದೆ. ಅಂದರೆ ತನ್ನ ಇಷ್ಟದಂತೆ ಹಾಡಿಕೊಳ್ಳುವುದೂ ಕೂಡ ಇಲ್ಲಿ ಕಷ್ಟವೇ. ನಿಜವಾದ ಜೀವನದ ಸಂಗತಿಗಳೇ ಬೇರೆ, ದೂರ ನಿಂತು ಮುಂಬೈ ನೆನೆಯುವವರ ಮನಸ್ಥಿತಿಯೇ ಬೇರೆ.

"ಮುಂಬಯಿಯಲ್ಲಿ ಕೆಲಸ ಸಿಗಬಹುದು, ನಿಮ್ಮ ಅಳಿಯನನ್ನು ಕಳಿಸಿ"[31] ಮುಂಬಯಿ ಎಂದರೆ ನಿರಂತರ ಚಟುವಟಿಕೆ ನಡೆಯುವ ಸ್ಥಳ. ಇಲ್ಲಿ ಎಲ್ಲವನ್ನು ಕಾಣಬಹುದು. ಎಲ್ಲ ಜನರನ್ನು ನೋಡಬಹುದು. ಮುಂಬಯಿ ಅಂದಿಗೂ ಇಂದಿಗೂ ಎಂದೆಂದಿಗೂ ಜನರನ್ನು ಕೈ ಬೀಸಿ ಕರೆಯುತ್ತಲೇ ಇರುತ್ತದೆ. ಯಾಕೆಂದರೆ ಇದು ಮಾಯಾ ನಗರಿ. ಆಕರ್ಷಣೆಯ ನಗರಿ.

---

[29] ಪುಟ 20, 'ಜಲಪಾತ',ಎಸ್.ಎಲ್.ಭೈರಪ್ಪ

[30] ಪುಟ 20, 'ಜಲಪಾತ',ಎಸ್.ಎಲ್.ಭೈರಪ್ಪ

[31] ಪುಟ 27, 'ಜಲಪಾತ',ಎಸ್.ಎಲ್.ಭೈರಪ್ಪ

ಶ್ರೀಪತಿ ವಸುವನ್ನು ಮದುವೆಯಾಗುವ ತನಕ ಕೆಲಸ ಹುಡುಕುವ ಯೋಚನೆಯನ್ನೇ ಮಾಡಿರುವುದಿಲ್ಲ. ಆಗ ಇಂಟರ್ ಮಿಡಿಯೇಟ್ ಮಾಡಿದವನಿಗೆ ಮೈಸೂರಿನಲ್ಲಿ ಕೆಲಸ ಸಿಗುವುದು ಅಸಾಧ್ಯ. ನಿಮ್ಮ ಅಳಿಯನನ್ನು ಮುಂಬಯಿಗೆ ಕಳಿಸಿ ಎಂದು ಶ್ರೀಪತಿಯ ಮಾವನ ಸ್ನೇಹಿತರು ಹೇಳಿದ ಮಾತಿಗೆ ಶ್ರೀಪತಿ ಮುಂಬಯಿಗೆ ಬರುತ್ತಾನೆ. ಮುಂಬಯಿನಲ್ಲಿ ಬುಟಾನಿ ಪಬ್ಲಿಸಿಟಿಯಲ್ಲಿ ಕೆಲಸವು ಸಿಗುತ್ತದೆ. ಆದರೆ ಈ ಕೆಲಸದಿಂದ ಶ್ರೀಪತಿಗೆ ತೃಪ್ತಿ ಸಿಗುವುದಿಲ್ಲ.

ಸ್ವತಂತ್ರವಾಗಿ ಹೊಸ ಹೊಸ ಸೃಷ್ಟಿ ಮಾಡಬೇಕೆಂದು ಕನಸು ಕಾಣುತ್ತಿದ್ದ ಈತನಿಗೆ ನಿರಾಸೆಯುಂಟಾಗುತ್ತದೆ. ಆದರೂ ಮುಂಬಯಿಯಲ್ಲಿ ಕೆಲಸ ಸಿಕ್ಕಿಯೇ ಸಿಗುತ್ತದೆ ಎಂಬ ಮಾವನ ಸ್ನೇಹಿತರ ವಿಶ್ವಾಸ ಪೂರ್ಣಗೊಂಡಿರುತ್ತದೆ. ಆದರೆ, ಸ್ವತಂತ್ರವಾಗಿ ಚಿತ್ರಕಲೆಯಲ್ಲಿ ಅಪಾರ ಸಾಧನೆ ಮಾಡಬೇಕೆಂಬ ಕನಸು ನನಸಾಗುವುದಿಲ್ಲ. ಮುಂಬಯಿಯ ಕೆಲಸವಂತೂ ಸಿಕ್ಕಿ ಬಿಡುತ್ತದೆ. ಆದರೆ, ತನ್ನ ಇಚ್ಛೆಯಂತೆ ಚಿತ್ರಗಳನ್ನು ರಚಿಸಲು ಸಾಧ್ಯವಾಗುವುದಿಲ್ಲ. ಯಾಕೆಂದರೆ ಇದು ಮುಂಬಯಿ ನಗರಿ.

“ಮುಂಬಯಿಯ ಜನಗಳು ಐಸ್‌ಕ್ರೀಮ್ ಮದುವೆಗಳನ್ನೇಕೆ ಮಾಡಿಕೊಳ್ಳುತ್ತಾರೆ”.[32] ಮುಂಬಯಿ ಎಂದರೆ ಅದೊಂದು ರೀತಿಯಲ್ಲಿ ಆಕರ್ಷಕ ನಗರಿ ಎಲ್ಲರನ್ನೂ ಕೈಬೀಸಿ ಕರೆಯುತ್ತದೆ. ಆದರೆ ಕೆಲವರನ್ನು ಮಾತ್ರ ಶ್ರೀಮಂತಿಕೆಯ ಉತ್ತುಂಗ ಶಿಖರಕ್ಕೆ ಏರಿಸಿ ಬಿಡುತ್ತದೆ. ಕ್ಷಣ ಕ್ಷಣಕ್ಕೂ ಮುಂಬಯಿ ಎಂಬ ಮಹಾನಗರಿ ಬದಲಾಗುತ್ತಿರುತ್ತದೆ. ಶ್ರೀಪತಿ ಮತ್ರಾನಿಯವರ ಮದುವೆಗೆ ಕುಟುಂಬ ಸಮೇತ ಹೋಗಿರುತ್ತಾನೆ. ಅದ್ದೂರಿಯಾಗಿದ್ದ ಮದುವೆಯಲ್ಲಿ ಎಲ್ಲರಿಗೂ ಐಸ್‌ಕ್ರೀಮ್ ಕೊಡುತ್ತಾರೆ.ಮತ್ರಾನಿಯವರನ್ನು ಭೇಟಿ ಮಾಡಿಕೊಂಡು ದೊಡ್ಡ ದೊಡ್ಡ ಅತಿಥಿಗಳು ಹೊರಡುತ್ತಾರೆ. ಇಡೀ ಸಭೆ ಖಾಲಿಯಾಗಿ ಮತ್ರಾನಿಯವರು ಕೂಡ ತಮ್ಮ ಪತ್ನಿಯ ಎಡ ತೋಳನ್ನು ಹಿಡಿದು ಹೊರಟೇ ಬಿಡುತ್ತಾರೆ. ಆದರೆ ಊಟ ಮಾಡಬೇಕೆಂಬ ಆಸೆಯಿದ್ದವರಿಗೆ ಅದು ಸಿಗುವುದೇ ಇಲ್ಲ. ಮುಂಬಯಿನಂತಹ ನಗರದಲ್ಲಿ ಸಮಯವೇ ಇರುವುದಿಲ್ಲ. ಮುಂಬಯಿ ನಗರದ ದೊಡ್ಡ ಮದುವೆಯೊಂದು ಕೇವಲ ಐಸ್‌ಕ್ರೀಮ್‌ನಲ್ಲಿಯೇ ಮುಗಿದು ಹೋಗಿರುತ್ತದೆ. ಊಟದ ವ್ಯವಸ್ಥೆ ಇರುವುದಿಲ್ಲ. ಹಾಗೆ ಹೋದ ಶ್ರೀಪತಿ ಮತ್ತು ಅವರ ಕುಟುಂಬ ಹೊಟೇಲಿನಲ್ಲಿ ಊಟ ಮಾಡಿ ವಾಪಾಸಾಗಬೇಕಾಗುತ್ತದೆ.

---

[32] ಪುಟ 33, 'ಜಲಪಾತ',ಎಸ್.ಎಲ್.ಭೈರಪ್ಪ

"ಮುಂಬಯಿಯ ಯಾವ ಸಮಾರಂಭದಲ್ಲಿಯೂ ಉದ್ದೀಪನೆ ಇರುವುದಿಲ್ಲ, ಉದ್ರೇಕವಿರುತ್ತದೆ. ಉದ್ರೇಕವಾಗುವುದು ಎಷ್ಟು ಬೇಗವೋ, ಅಷ್ಟೇ ವೇಗವಾಗಿ ಅದು ಮುಗಿದು ಮಂಕುಬಡಿದ ಶೂನ್ಯವೂ ಕವಿಯುತ್ತದೆ".[33]

ಮುಂಬಯಿ ಜೀವನವೇ ಹಾಗೆ. ಕ್ಷಣ ಕ್ಷಣಕ್ಕೂ ಬದಲಾಗುತ್ತಿರುತ್ತದೆ. ಶ್ರೀಪತಿ ಮತ್ತು ಅವನ ಹೆಂಡತಿ ಹೊಟೇಲ್‌ನಲ್ಲಿ ಊಟ ಮಾಡಿ ಮತ್ರಾನಿಯವರ ಮದುವೆ ನಡೆದ ಜಾಗಕ್ಕೆ ಬರುತ್ತಾರೆ. ಆದರೆ ಅಲ್ಲಿ ಸಂಪೂರ್ಣ ಚಿತ್ರಣವೇ ಬದಲಾಗಿರುತ್ತದೆ. ಮದುವೆಯ ಸಕಲ ಅಲಂಕಾರವನ್ನೂ ಕಳಚಿಹಾಕಿ ಸಾಗಿಸಿಬಿಟ್ಟಿರುತ್ತಾರೆ. ಮರಗಳ ಮೇಲೆ ಒಂದೇ ಒಂದು ಬಲ್ಬು ಕೂಡ ಇರುವುದಿಲ್ಲ. ಆದರೆ ಹಳ್ಳಿಯಲ್ಲಿ ನಡೆಯುವ ಮದುವೆಗಳು ಹಾಗೆ ಇರುವುದಿಲ್ಲ. ಅಲ್ಲಿ ಅಂದವೇ ಅಂದ. ನಗರಗಳಲ್ಲಿ ಮದುವೆಗಳು ಯಾಂತ್ರಿಕವಾಗಿ ನಡೆದರೆ, ಹಳ್ಳಿಗಳಲ್ಲಿ ಮದುವೆಗಳು ಮನ:ಪೂರ್ತಿಯಾಗಿ ನಡೆಯುತ್ತವೆ.

"ಮನಸ್ಸು ಕ್ಷಣಕಾಲ ಏನನ್ನೋ ಯೋಚಿಸುತಿತ್ತು. ಬಂದರು ರೈಲುಗಳು, ಗಿರಣಿಗಳು ಇಲ್ಲದೇ ಹೇಗೆ ಮುಂಬಯಿ ಆಗಲಾರದೋ, ಹಾಗೆಯೇ, ಕಾಮಾಟಿಪುರವಿಲ್ಲದೇ, ಅದು ಇರಲಾರದು. ಮುಂಬಯಿನಲ್ಲಿ ಪ್ರತಿಯೊಂದು ಭಾರಿ ಪ್ರಮಾಣದ ಉದ್ಯಮವೇ. ನಾನು ಈ ಹಿಂದೆಯೇ ಈ ಪ್ರದೇಶವನ್ನು ಒಮ್ಮೆ ನೋಡಿದ್ದೇನಾದರೂ ಸಂದಿಗೊಂದಿಗಳನ್ನು ವಿವರವಾಗಿ ವೀಕ್ಷಿಸಿರಲಿಲ್ಲ. ಇದನ್ನು ನೋಡದ ಮುಂಬಯಿ ನಾಗರಿಕನಾರು?ನಾನು ಅಲ್ಲಿಯೇ ಸಂದಿಗೊಂದಿಗಳಲ್ಲಿ ತಿರುಗಾಡಿಕೊಂಡು ನಡೆದೆ.ಕಪ್ಪು ಬಣ್ಣದ ಸಮವಸ್ತ್ರ ಧರಿಸಿದ ಪೊಲೀಸ್ ಹವಾಲ್ದಾರರುಗಳು ಕೈಲಿ ಲಟ್ಟ ಹಿಡಿದು ಎಲ್ಲಾ ಬೀದಿಗಳಲ್ಲಿ ಠಳಾಯಿಸುತ್ತಿದ್ದರು. ಜಾತ್ರೆಯಲ್ಲಿ ನಡೆದಂತೆ. ಗಿರಾಕಿಗಳು ತಿರುಗುತ್ತಿದ್ದರು. ಮೂರು ಅಂತಸ್ತುಗಳ ಬಾಗಿಲು, ಕಿಟಕಿ ಮತ್ತು ಬಿಸಿಲು ಮಚ್ಚುಗಳಲ್ಲೂ ಸೂಳೆಯರು ಕಾದು ನಿಂತಿದ್ದರು. ಅದೆಷ್ಟು ಸಂದಿಗಳೋ ಅದೆಷ್ಟು ಬೀದಿಗಳೋ! ನಾನು ಬಂದ ದಾರಿಯಲ್ಲೇ ತಿರುಗಿ ಮತ್ತೆ ಬರುತ್ತಿದ್ದೆನೋ ಅಥವಾ ಅವು ಹೊಸ ಹೊಸ ಸಂದಿಗಳೋ ತಿಳಿಯದು. ಉತ್ಸಾಹದಿಂದ ಒಳಗೆ ಹೋಗುವ ಒಂದು ತಂಡವಾದರೆ, ಒಳಗೆ ಹೋದ ಐದು ಹತ್ತು ನಿಮಿಷದಲ್ಲಿ ಮುಖದಿಂದ ಬೆವರು ಒರಸಿಕೊಂಡು ತಲೆತಗ್ಗಿಸಿ ಹೊರ ಬರುವ ಜನಗಳ ಮತ್ತೊಂದು ನೋಟವು. ನನ್ನ ಮನಸ್ಸನ್ನು ಸೃಷ್ಟಿಗೂ ದುಡಿಮೆಗೂ ಇರುವ ವ್ಯತ್ಯಾಸವನ್ನು ಕುರಿತು ಯೋಚಿಸುವಂತೆ ಮಾಡುತ್ತಿತ್ತು. ಮುಂಬಯಿಯ ನೂರಾರು ಗಿರಣಿಗಳನ್ನು

[33] ಪುಟ 37, 'ಜಲಪಾತ',ಎಸ್.ಎಲ್.ಭೈರಪ್ಪ

ಪ್ರವೇಶಿಸುವ ಕೆಲಸಗಾರರು ಎಷ್ಟು ಉತ್ಸಾಹದಿಂದ, ಕಸುವಿನಿಂದ ಹೋಗುತ್ತಾರೆಯೋ, ತಮ್ಮ ದುಡಿಮೆ ಮುಗಿಸಿ ಹೊರ ಬರುವಾಗ ಅಷ್ಟೇಮಟ್ಟಿಗೆ ಹಿಂಡಿದ ಸಿಪ್ಪೆಯಾಗಿರುತ್ತಾರೆ. ಆತ್ಮಸಂತೋಷವಿಲ್ಲದೆ ಮುಳುಗುವ ಕ್ರಿಯೆಯ ಅಂತ್ಯದಲ್ಲಿ ಆಯಾಸವಲ್ಲದೇ ಆನಂದ ಹೇಗೆ ಲಭಿಸಬೇಕು? ಶಾರೀರಿಕ ಶ್ರಮ ಗೌಣವಾದುದು. ಕ್ರಿಯೆಯಲ್ಲಿ ತನ್ನ ಆತ್ಮವನ್ನು ಕಾಣುವ ಮಟ್ಟಿಗೆ ತನ್ನತನವಿದ್ದರೆ, ಅದರ ಅಂತ್ಯ ಯಾವಾಗಲೂ ಉಲ್ಲಾಸದಲ್ಲಿ ಪರಿಣಮಿಸುತ್ತದೆ.ತನ್ನ ಹೊಲದಲ್ಲಿ ದಿನವಿಡೀ ದುಡಿಯುವ ರೈತನಿಗೂ, ಪರರ ಗಿರಣಿಯಲ್ಲಿ ತನ್ನತನವಿಲ್ಲದೇ ಬಳಲುವ ಕೂಲಿಕಾರನಿಗೂ ಇರುವ ವ್ಯತ್ಯಾಸವಿಷ್ಟೆ. ರೆಬೆಲೋಳ ಸಂಗಡ ಇದ್ದು ಬರುತ್ತಿದ್ದ ಸಂಜೆ ಎಲ್ಲ, ನನಗೆ ದೈಹಿಕ ಮಾನಸಿಕ ಬಳಲಿಕೆ ಕಾಣುತ್ತಿದ್ದ ಕಾರಣ ಇದೇ ಎಂದು ನನಗೆ ಅರ್ಥವಾಯಿತು”.[34]

ಮುಂಬೈ ಎಂದರೆ ಅದೊಂದು ರೀತಿಯಲ್ಲಿ ಮಾಯಾನಗರಿ.ಇಲ್ಲಿ ಬಂದರು ರೈಲು ಗಿರಣಿಗಳು ಇರುವಂತೆಯೆ ಕಾಮಾಟಿಪುರವಿದೆ.ಮುಂಬೈಗೆ ಹೋದ ಪ್ರತಿಯೊಬ್ಬರು ಕಾಮಾಟಿಪುರವನ್ನು ನೋಡದೇ ಬರುವುದಿಲ್ಲ. ಇಲ್ಲಿಯ ವೇಶ್ಯಾವಾಟಿಕೆಗೆ ಜನರು ಆಗಮಿಸುತ್ತಾರೆ. ಹಾಗೆಯೇ ದೈಹಿಕ ಸುಖ ಇಳಿಸಿಕೊಂಡು ಹೋಗುತ್ತಾರೆ. ಆದರೆ, ಆತ್ಮ ಸಂತೃಪ್ತಿ ಇರುತ್ತದೆಯೆ ಎಂದರೆ, ಖಂಡಿತ ಇಲ್ಲ. ಮನುಷ್ಯ ಇಲ್ಲಿ ತನ್ನ ದೈಹಿಕವಾಗಿ ದಣಿದಿರುತ್ತಾನೆಯೆ ಹೊರತು ಮಾನಸಿಕವಾಗಿ ಸಂತೃಪ್ತಿ ಹೊಂದಿರುವುದಿಲ್ಲ. ಇದು ಮಂಬೈನ ಅಂದಿನ ಚಿತ್ರಣವನ್ನು ಚಿತ್ರಿಸಿಕೊಡುತ್ತದೆ. ಕಾಮಾಟಿಪುರದೊಳಕ್ಕೆ ಪ್ರವೇಶಿದವರು ಹತ್ತು ನಿಮಿಷದಲ್ಲಿ ಬೆವರು ಹೊರೆಸಿಕೊಂಡು ತಲೆತಗ್ಗಿಸಿ ಹೊರಬರುವವರಿಗೆ ಎಂತಹ ಸಂತೃಪ್ತಿ ಇದ್ದೀತು? ನಿಜಕ್ಕೂ ಒಂದು ಹೆಣ್ಣಿನೊಡನೆ ಬೆರೆತರೆ ಮನ:ಪೂರ್ವಕವಾಗಿ ಬೆರೆಯಬೇಕು. ಬರೀ ದೈಹಿಕ ಆಕರ್ಷಣೆಯಿಂದ ದೇಹಭಾದೆಯನ್ನು ನಿವಾರಿಸಿಕೊಳ್ಳಲು ಹೋದರೆ ಎಂತಹ ಸಂತೃಪ್ತಿ ಇದ್ದೀತು.

ಮುಂಬಯಿಯಲ್ಲಿನ ಹಲವು ಕಣ್ಮುಂದಿನ ವೈವಿಧ್ಯತೆಗಳ ಜತೆಗೆ ಹೆಚ್ಚು ಶ್ರೀಪತಿ ಹೆಚ್ಚು ಪರಿಣಾಮ ಬೀರಿದ್ದು ಅಲ್ಲಿನ ಶ್ರಮ ಸಂಸ್ಕೃತಿ ಎಂಬುದನ್ನು ವಿಶೇಷವಾಗಿ ಗುರುತಿಸಬಹುದು. ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುವ ಶ್ರೀಪತಿಯ ಮನಸ್ಸು ಅತೀವ ಖಿನ್ನತೆಗೆ ಒಳಗಾಗಲಿಲ್ಲ ಎಂಬುದನ್ನು ಗಮನಿಸಬಹುದು. ಆತ ಎಲ್ಲವನ್ನು ಮನಸ್ಸಿನಲ್ಲಿ ಪರಿಪಕ್ವತೆಯಿಂದ ಗ್ರಹಿಸುತ್ತಾ ತಾನು ಮುಂಬಯಿಯ ಶ್ರಮ ಸಂಸ್ಕೃತಿ ಮತ್ತು ವೈವಿಧ್ಯತೆಗಳಿಗೆ

---

[34] ಪುಟ 93. 'ಜಲಪಾತ'.ಎಸ್.ಎಲ್.ಭೈರಪ್ಪ

ಹೇಗೆ ಹೊಂದಿಕೊಳ್ಳಬೇಕು ಎಂಬುದನ್ನು ಭಿನ್ನತೆಯಿಂದಲೇ ಅಳವಡಿಸಿಕೊಳ್ಳುತ್ತಾ ಸಾಗುವುದು ವಿಶಿಷ್ಟತೆಯಿಂದ ಕೂಡಿದೆ.

'ನಮ್ಮೂರು ಮುಂಬಯಿಗಿಂತ ಪ್ರಾಚೀನವಾದುದು. ಅಲ್ಲಿ ಜಕಣಾಚಾರಿ ಕಟ್ಟಿದ ಕೇಶವ ದೇವರ ಗುಡಿ ಇದೆ. ಊರಿನ ಪೂರ್ವ ದಿಕ್ಕಿನ ಒಂದು ಬಂಡೆಯ ಮೇಲೆ ಭೀಮನ ಹೆಜ್ಜೆ ಇದೆ. ಭೀಮ ಸೇನನಿಗೂ ಜರಾಸಂಧನಿಗೂ ಯುದ್ಧವಾದಾಗ ಭೀಮ ಇಲ್ಲಿ ಸಿಟ್ಟಿನಿಂದ ಒಂದು ಸಲ ಕಾಲನ್ನು ನೆಲಕ್ಕೆ ಅಪ್ಪಳಿಸಿದನಂತೆ. ಅದರ ಹೆಜ್ಜೆಯ ಗುರುತು ಈಗಲೂ ಇದೆ. ಅದರ ಹತ್ತಿರವೇ ಇರುವ ಕಲ್ಲಿನ ಗವಿಯಲ್ಲಿ ಗಣಪತಿಯು ಬಂಡೆಯಿಂದ ಮೂಡಿ ಹುಟ್ಟಿದ್ದಾನೆ. ಗಣಪ್ಪನ ಹಬ್ಬದ ದಿನ ಇಲ್ಲಿಗೆ, ದೇವತೆಗಳು ಸಹ ಬಂದು ಅರುಣೋದಯಕ್ಕೆ ಮೊದಲೇ ಪೂಜೆಮಾಡಿ ಹೋಗಿರುತ್ತಾರೆ. ಮುಂಬೈ ಎಂಬ ನಗರಕ್ಕೆ ಇಂತಹ ಪೌರಾಣಿಕ ಹಿನ್ನೆಲೆಯಿಲ್ಲ. ಮುಂಬಾದೇವಿಯ ಗುಡಿಯನ್ನು ಬಿಟ್ಟರೆ ಅದಕ್ಕೆ ಬೇರೆಯ ದೇವರಿಲ್ಲ. ಕ್ರಿಸ್ತಪೂರ್ವ ಯುಗದಲ್ಲಿಯೇ ವ್ಯಾಪಾರದ ಕೇಂದ್ರವಾಗಿತ್ತಂತೆ. ಇರಬಹುದು. ಆದರೆ ಸೂಯೆಜ್ ಕಾಲುವೆಯಾದ ಮೇಲಲ್ಲವೇ ಅದು ಈಗಿನ ದೈತ್ಯಾಕಾರದಲ್ಲಿ ಬೆಳೆದು ನಿಂತುದು? ಅಗ್ರಹಾರವೂ ಪೌರಾಣಿಕ ಭಾರತದ ದರ್ಶನವನ್ನು ಕೊಡುವ ಒಂದು ಪುಟ್ಟ ಹಳ್ಳಿ. ಭಾರತದ ಎಲ್ಲೆಲ್ಲಿಯೂ ಇಂತಹ ಹಳ್ಳಿಗಳಿವೆ. ಮುಂಬಯಿಗೂ ಪೌರಾಣಿಕ ಭಾರತಕ್ಕೂ ಸಂಬಂಧವಿಲ್ಲ. ಅದು ಹೊರ ದೇಶದ ಸಂಪರ್ಕದ ವಾಣಿಜ್ಯ ಕೇಂದ್ರ. ಅದನ್ನು ಬಿಟ್ಟು ಅಗ್ರಹಾರಕ್ಕೆ ಬರುವ ಮೊದಲು ನನ್ನ ಹೃದಯವು ಸಂಭ್ರಮದಿಂದ ಹಿಗ್ಗುತಿತ್ತು. ಮನಸ್ಸು ಗಣಪತಿ ದಿವ್ಯಯುಗ, ಭೀಮಸೇನನ ಶೂರಯುಗ, ಜಕಣಾಚಾರ್ಯ, ಕಲಾಯುಗಗಳ ಮಹಿಮೆಯಿಂದ ಉತ್ಕರ್ಷಿತವಾಗುತ್ತಿತ್ತು'.[35]

ಭಾರತ ಹಳ್ಳಿಗಳ ದೇಶ. ಅಸಂಖ್ಯಾತ ಹಳ್ಳಿಗಳೇ ಈ ದೇಶದ ಉಸಿರು. ಇಂತಹ ಪ್ರತಿಯೊಂದು ಹಳ್ಳಿಗೂ ಅಸಂಖ್ಯಾತ ದೇವರಿವೆ. ಆದರೆ, ಅವುಗಳು ಮುಂಬೈನಂತೆ ಬೆಳೆದಿಲ್ಲ. ಹಳ್ಳಿಗಳಿಗೆ ಐತಿಹಾಸಿಕ ಪುರಾಣ ಕಥೆಗಳಿವೆ. ಆದರೆ, ಮುಂಬೈಗೆ ಮುಂಬಾದೇವಿ ಮಾತ್ರ, ಆದರೂ ಎಷ್ಟೊಂದು ಮುಂದುವರಿದಿದೆ. ತನ್ನ ಜೀವನೋಪಾಯಕ್ಕಾಗಿ ಮುಂಬೈಗೆ ತೆರಳಿದ್ದ ಶ್ರೀಪತಿಗೆ ಮತ್ತೆ ತನ್ನ ಹಳ್ಳಿಗೆ ಬರುವ ಮನಸಾದಾಗ ಇವೆಲ್ಲಾ ಜ್ಞಾಪಕಕ್ಕೆ ಬರುತ್ತವೆ. ಬಿಡೆನು ಎಂದರೆ ಬಿಡದೇ ಕಾಡುವ ಗ್ರಾಮ್ಯ ಬದುಕಿನ ಆಯಾಮಗಳು ಶ್ರೀಪತಿಗೆ ನೆನಪುಗಳ ಹೂರಣವನ್ನೇ ಉಣ ಬಡಿಸುತ್ತಿರುತ್ತವೆ.

---

[35] ಪುಟ 150, 'ಜಲಪಾತ',ಎಸ್.ಎಲ್.ಭೈರಪ್ಪ

'ಜೋಗಿಗೆ ಹೋಗಿ ಬಂದ ಮೇಲೆ ನಿರ್ವೀರ್ಯ ಮನುಷ್ಯ ಎಂಬ ಭಾವನೆ ಮನಸ್ಸಿನಲ್ಲಿ ಬೆಳೆದಿದೆ. ಆರು ಏಳು ವರ್ಷಗಳ ಹಿಂದೆ ಮಲೆನಾಡಿನ ಎಂತಹ ದೃಶ್ಯವನ್ನಾದರೂ, ಬಣ್ಣದಲ್ಲೇ ಲಯಬದ್ಧವಾಗಿಯೇ ಸೃಷ್ಟಿಸುತ್ತಿದ್ದ ನಾನು ಈಗ ಆ ಶಕ್ತಿಯನ್ನೇ ಕಳೆದುಕೊಂಡಿದ್ದೇನೆ. ನನ್ನ ಶಕ್ತಿ ಸತ್ತಿಲ್ಲ. ಈ ಪರಿಸ್ಥಿತಿಯಲ್ಲಿ ಅಸಹಾಯಕವಾಗಿದೆ ಎಂಬ ಸಮಧಾನ ತಂದುಕೊಳ್ಳೆತ್ನಿಸಿದರೂ, ಅಸಹಾಯಕ ಎಂಬ ಮಾತೇ ಪರಸ್ಪರ ವಿರೋಧೀ ಅರ್ಥದಿಂದ ಕೂಡಿರುವುದು ತಕ್ಷಣ ಹೊಳೆಯುತ್ತದೆ. ಶಕ್ತಿಯು ಶಕ್ತಿಯಾಗಿ ಉಳಿದು ಅಸಹಾಯಕವಾಗಿರುವುದು ಹೇಗೆ? ಈ ಕಟು ಸಂಗತಿಯೊಡನೆಯೇ ಮತ್ತೊಂದು ಘೋರಸತ್ಯವು ನನಗೆ ಜೋಗದಲ್ಲಿ ತಿಳಿದು ಹೋಯಿತು. ನಾನು ಮತ್ತು ವಸು ಅನ್ಯೋನ್ಯವಾಗಿರುವ ಕಾಲ ಆಗಿ ಹೋಯಿತು. ವಿಶ್ವ ಹುಟ್ಟುವ ಮೊದಲು ನಾವು ಒಂದು ಜೀವ ಎರಡು ದೇಹಗಳಾಗಿದ್ದಂತೆ ಇನ್ನು ಮುಂದೆಯೂ ಇರಲು ಸಾಧ್ಯವಿಲ್ಲ. ಮುಂಬೈಯಲ್ಲಿ ಸಂಸಾರ ಹೂಡಿದಂದಿನಿಂದಲೇ ನಮ್ಮ ದಾಂಪತ್ಯ ಮುಕ್ತಾಯವಾಯಿತು. ಅವಳು ಅಡುಗೆ ಮಾಡುತ್ತಾಳೆ. ವಿಶ್ವನನ್ನು ನೋಡಿಕೊಳ್ಳುತ್ತಾಳೆ. ನನಗೆ ಬೇಸರವಾದಾಗ ಅದನ್ನು ಕಳಿಸುತ್ತಾಳೆ. ಆದರೆ ನನ್ನ ಹೆಂಡತಿಯಾಗಿ ಉಳಿದಿಲ್ಲ, ಪ್ರತಿಯಾಗಿ ನಾನು ಸಹ ಅವಳಿಗೆ ಗಂಡನಾಗಿ ಉಳಿದಿಲ್ಲ. ಮುಂಬಯಿಯಲ್ಲಿ ನಮ್ಮಂತವರಿಗೆ ಪಾಡಿ ತೆರಿಸಿದ ಮನೆ ಸಿಕ್ಕಿದರು ದಾಂಪತ್ಯ ಜೀವನದ ಯೋಗವಿಲ್ಲ. ಮತ್ತು ಮುಂಬಯಿಯ ಹೊರಗೆ ವಾಸಿಸುವ ಭೂಮಿಯೇ ಇಲ್ಲ. ಸ್ಕೂಲಿನಲ್ಲಿ ಓದುವಾಗ ಲೆಕ್ಕದ ಪೀರಿಯೆಡ್ಡಿನಲ್ಲಿ ನಾವು 2+2=4 ಎಂದು ಬರೆಯುತ್ತಿದ್ದಂತೆ ಮುಂಬಯಿ= ಹಿಂದೂಸ್ತಾನ, ಮುಂಬಯಿಯಲ್ಲಿ ಜಾಗವಿಲ್ಲ = ಹಿಂದೂಸ್ತಾನದಲ್ಲಿ ಜಾಗವಿಲ್ಲ– ಎಂದು ಅರ್ಥದ ಸಮೀಕರಣ ಮಾಡಬಹುದು.[36] ಎಂಬತಂಹ ಸ್ವಗತವೂ ಕಂಡುಬರುತ್ತದೆ.

"ಮರುದಿನ ನಾನು ಇವರನ್ನು, 'ಖಂಡಾಲದ ಚಿತ್ರಗಳೆಲ್ಲಿ?' ಎಂದು ಕೇಳಿದೆ. ಇವರು ತಕ್ಷಣ ಉತ್ತರ ಹೇಳಲಿಲ್ಲ. ನನಗೆ ಅನುಮಾನವಾಗಿ ಮತ್ತೆ ಕೇಳಿದೆ. 'ಅದೇನು ಹಾಗೆ ಮತ್ತೆ ಮತ್ತೆ ಕೇಳ್ತಿಯಾ ಬಿಡು' ಎಂದು ಇವರು ಉತ್ತರ ತಪ್ಪಿಸಿಕೊಳ್ಳಲೆತ್ನಿಸಿದರೂ ನಾನು, 'ನನಗೆ ನೋಡೋ ಆಶೆಯಾಗಿದೆ, ಹೇಳಿ' ಎಂದು ಒತ್ತಾಯಮಾಡಿದೆ.

ಕೊನೆಗೆ ಇವರು ವಿಷಾದತುಂಬಿದ ಧ್ವನಿಯಲ್ಲಿ, 'ಅದೆಲ್ಲಾನೂ ಈವ್ ಸ್ನೋ ಕಂಪನಿಯ ಕ್ಯಾಲೆಂಡರಿಗೆ ಒಟ್ಟು ಒಂದು ಸಾವಿರಕ್ಕೆ ಮಾರಿಬಿಟ್ಟೆ' ಎಂದರು. ಕೇಳಿ ಎದೆಗೆ

---

[36] ಪುಟ 55–56, 'ಜಲಪಾತ'.ಎಸ್.ಎಲ್.ಭೈರಪ್ಪ

ಹೊಡೆದಂತೆ ಆದರೂ, ತಕ್ಷಣ ನಾನು ಆ ಮಾತನ್ನು ನಂಬಲಿಲ್ಲ. ಇವರು ಹಾಗೆ ಮಾಡುತ್ತಾರೆಂದರೆ ನಂಬುವುದು ಹೇಗೆ? ಅವರೇ ಹೇಳಿದರು: 'ಏನು ಮಾಡೋದು? ಈ ಸರ್'ತಿ ಖರ್ಚು ತುಂಬಾ ಆಯಿತು. ಕೈಯನ್ನು ಕಪಿಯಂತೆ ಬಿಗಿಹಿಡಿದೇ ಜೀವನ ಮಾಡಿ ಮಾಡಿ ಸಾಕಾಗಿತ್ತು. ನಾವು ಅಷ್ಟು ಸಲ ಖಂಡಾಲಕ್ಕೆ ಹೋಗಿ ಬಂದೆವಲ್ಲ? ಒಂದು ಸಲಕ್ಕೆ ಹದಿನೈದು ಇಪ್ಪತ್ತು ರೂಪಾಯಿ ಖರ್ಚಾಗುತ್ತಿತ್ತು. ಗರ್ಭಿಣಿಯಲ್ಲಿ ಡಾಕ್ಟರ್ ಹೇಳಿದಂತೆ ಟಾನಿಕ್ಕು ಔಷಧಿಗೆ ಖರ್ಚಾಗುತ್ತಿತ್ತು. ನನಗೇ ತುಂಬಾ ಆಶೆಯಾಗಿ ನಿನಗೆ ಒಂದು ರೇಶ್ಮೆ ಸೀರೆ ತಂದೆ. ಅತ್ತೇನ ಕರೆಸಿಕೊಳ್ಳೋಕೆ ಛಾರ್ಜಿಗೆ ಕೊಟ್ಟಿದ್ದೆ. ಈಗ ಕಳಿಸೋದಕ್ಕೆ ಖರ್ಚು. ಅಲ್ಲದೇ ಆ ಜೋಷಿ ಆಸ್ಪತ್ರೇಗೇ ನೂರ ಎಪ್ಪತ್ತೈದು ಹೋಯಿತಲ್ಲ! ನೀನು ಹೆತ್ತಾಗಲೇ ಇನ್‌ಷ್ಯೂರೆನ್ಸಿಗೆ ಕಟ್ಟುವ ನೋಟೀಸ್ ಬಂದಿತ್ತು. ನಾನು ಎಂಟುದಿನ ಮನಸ್ಸಿನಲ್ಲೇ ಕೊರಗಿದೆ. ಇದೆಲ್ಲದಕ್ಕೂ ಅಲ್ಲಲ್ಲೇ ಸಿಕ್ಕಿದವರ ಹತ್ತಿರ ಸಾಲ ಮಾಡಿದ್ದೆ. ಮತ್ತೇನು ಮಾಡೋದು? ಒಂದು ದಿನ ತಗೊಂಡು ಹೋಗಿ ಕೊಟ್ಟುಬಿಟ್ಟೆ. ಮತ್ರಾನಿಯವರು. ನನ್ನ ಮೇಲಿನ ವಿಶ್ವಾಸದಿಂದ ಅದಕ್ಕೆ ಮತ್ತೆ ಅದೇ ಗಿರಾಕಿಯನ್ನು ಹೊಂದಿಸಿದರು. ಮುಂದಿನ ವರ್ಷದ ಕ್ಯಾಲೆಂಡರಿಗೆ ಅವರು ಉಪಯೋಗಿಸಿಕೊಳ್ಳುತ್ತಾರಂತೆ.

ಆ ಚಿತ್ರಗಳನ್ನು ನೆನೆಸಿಕೊಂಡಂತೆ ನನ್ನ ಜ್ಞಾನವು ಕೈಲಿದ್ದ ಉಮೆಯ ಕಡೆಗೆ ಹೋಗುತ್ತಿತ್ತು. ನನಗೆ ಆ ಚಿತ್ರಗಳು ಹೆಚ್ಚೋ ಉಮೆ ಹೆಚ್ಚೋ ಎಂದು ಒಂದುಕ್ಷಣ ಮನಸ್ಸು ಕೇಳಿತು. ಅದು ಅರ್ಥವಿಲ್ಲದ ವ್ಯತ್ಯಾಸ. ಮಗುವಿಗಿಂತ ಇವರ ಕಲೆ ಹೆಚ್ಚಲ್ಲ. ಆದರೆ ಇವರ ಕಲೆಯು ಮಗುವಿಗಿಂತ ಕಡಿಮೆಯದಲ್ಲ. ಉಮೆಯಂತೆ ಆ ಚಿತ್ರಗಳೂ ನಮ್ಮ ಕಳೆದ ಒಂದುವರ್ಷದ ಅನನ್ಯವಾಗಿ ತುಂಬಿದ ಜೀವನದ ಅಭಿವ್ಯಕ್ತಿಯಾಗಿದ್ದವು. ಆ ಚಿತ್ರಗಳು ಬೊಂಬಾಯಿಯ ವಾಣಿಜ್ಯಶಕ್ತಿಗೆ ಬಲಿಯಾಗಿ ಹೋದವು."[37] ಮುಂಬೈ ಅಂತಹ ನಗರದಲ್ಲಿ ಹೇಗೆ ಚಿತ್ರಕಲೆ ವ್ಯಾಪಾರವಾಗಿ ವ್ಯವಹಾರವಾಗಿ ಪರಿವರ್ತನೆ ಹೊಂದುತ್ತದೆ ಎಂಬುದಕ್ಕೆ ಇದು ಸಾಕ್ಷಿಯಾಗಿ ನಿಲ್ಲುತ್ತದೆ. ಜೀವನ ನಿರ್ವಹಣೆ ಸಂದರ್ಭದಲ್ಲಿ ಯಾವ ಪ್ರತಿಭೆಯೂ ಬಹುಕಾಲ ನಿಲ್ಲಲಾರದು ಎನ್ನಬಹುದೇನೋ.

"ಇನ್ನೇನು, ಡಿಸೆಂಬರ್ ತಿಂಗಳು ಕಳೆಯುತ್ತಾ ಬಂತು. ಉಮೆಗೆ ಒಂದು ವರ್ಷವಾಗುತ್ತದೆ. ಅವಳು ಈಗಾಗಲೇ ಒಂದೊಂದಾಗಿ ತಪ್ಪುಹೆಜ್ಜೆ ಹಾಕುತ್ತಾಳೆ. ಅವಳಿಲ್ಲದಿದ್ದರೆ ನನಗೆ ಹೊತ್ತೇ ಹೋಗುತ್ತಿರಲಿಲ್ಲವಾದರೂ ಈ ಕಿಷ್ಕಿಂಧೆಯ ಗೂಡಿನಲ್ಲಿ

[37] ಪುಟ 126, 'ಜಲಪಾತ',ಎಸ್.ಎಲ್.ಭೈರಪ್ಪ

ಅವಳ ಚೇಷ್ಟೆಯನ್ನು ಸಹಿಸುವುದು ಕಷ್ಟ. ಅವಳ ನಗೆ, ಆಟ, ಮತ್ತು ಚೇಷ್ಟೆಗಳಲ್ಲಿ ನಮಗೆ ಸಂತೋಷವಿದ್ದರೂ ನಮ್ಮಿಬ್ಬರ ಜೀವನದಲ್ಲಿ ಮತ್ತೆ ಬೇಸರ ನಿರಾಶೆಗಳು ತಲೆಹಾಕಿವೆ. ಹಳೆಯ ಕೃತಕ ಜೀವನವು ಬೇಡವೆಂದು ಇಬ್ಬರೂ ನಿರ್ಧರಿಸಿದರೂ ಸ್ವಾಭಾವಿಕವಾದ ಜೀವನದಲ್ಲಿ ವಿಹರಿಸಲು ನಮ್ಮಿಬ್ಬರಲ್ಲಿ ಯಾರಿಗೂ ಧೈರ್ಯವಿಲ್ಲ. ಈಗ ಒಂದು ತಿಂಗಳಿನಲ್ಲಿ ತಾನೇ ಹಾಲಿನ ಬೆಲೆ ಮತ್ತೆ ಏರಿತು. ಉಮೆ ಹುಟ್ಟಿದಮೇಲೆ ಅವಳಿಗೆ ಹಾಲು, ಗ್ರೈಪ್ ವಾಟರ್, ನೆಗಡಿ, ಕೆಮ್ಮು, ಜ್ವರ, ಏನಾದರೂ ಆ ಔಷಧಿ, ಹೀಗೆ ತಿಂಗಳಿಗೆ ಏನಿಲ್ಲೆಂದರೂ ಮೂವತ್ತುರೂಪಾಯಿ ಖರ್ಚು ಹೆಚ್ಚಾಗಿದೆ. ಮಕ್ಕಳ ಜೀವನವನು ಖರ್ಚಿನ ಲೆಕ್ಕದಿಂದ ಅಳೆಯುವುದು ಪಾಪದ ಯೋಚನೆ. ಅಣ್ಣ ಬದುಕಿದ್ದಾಗ ಅವರು ಎಂದಿಗೂ ಹೀಗೆ ಯೋಚಿಸಿರಲಿಲ್ಲ. ಸುಬ್ಬು ಒಂದು ಸಲ ಇಂತಹ ಮಾತನಾಡಿದುದಕ್ಕೆ ಅವರು ಕೋಪದಿಂದ ನೊಂದುಕೊಂಡಿದ್ದರು. ಆದರೆ ಬೊಂಬಾಯಿಯಲ್ಲಿ ಖರ್ಚನ್ನು ಲೆಕ್ಕ ಹಾಕಲೇಬೇಕು. ವಿಶ್ವನ ಸ್ಕೂಲಿನ ಫೀಯಲ್ಲಿ ತಿಂಗಳಿಗೆ ಎರಡು ರೂಪಾಯಿ ಹೆಚ್ಚಾಗಿದೆ. ಅಕ್ಕಿ ಗೋದಿಯ ಧಾರಣೆಯೂ ಏರಿದೆ. ದಿನದಿನಕ್ಕೆ ಕಡಮೆಯಾಗುವ, ಅಥವಾ ಹಿಂದಿನಂತೆಯೇ ಇರುವ ಧಾರಣೆಯು ಯಾವ ಪದಾರ್ಥಕ್ಕೂ ಇಲ್ಲ. ಇನ್ನು ನಾಲ್ಕು ತಿಂಗಳಿಗೆ ದಿಲ್ಲಿಯಲ್ಲಿ ಪಾರ್ಲಿಮೆಂಟು ಸೇರುವುದು ಹೊಸ ಕರಗಲನ್ನು ಹಾಕಿ, ಇಲ್ಲವೇ ಹಳೆಯದನ್ನು ಏರಿಸಿ, ಧಾರಣೆ ವಾಸಿಗಳನ್ನು ಹೆಚ್ಚಿಸುವುದಕ್ಕೇ ಎಂದು ಕಾಣುತ್ತದೆ. ಮುಂದಿನ ತಿಂಗಳಿಂದ ದಿನವೂ ಪೇಪರು ತೆಗೆದುಕೊಳ್ಳುವುದನ್ನೂ ನಿಲ್ಲಿಸಬೇಕು. ಅದರಿಂದಾದರೂ ತಿಂಗಳಿಗೆ ನಾಲ್ಕೂವರೆ ರೂಪಾಯಿ ಉಳಿದರೆ ಎಷ್ಟೋ ವಾಸಿ."[38] ಮುಂಬೈ ನಗರ ಜೀವನದಲ್ಲಿ ಮಕ್ಕಳನ್ನು ಸಾಕುವುದು, ತಮ್ಮ ಜೀವನ ನಿರ್ವಹಣೆ ಮಾಡಿಕೊಳ್ಳುವುದು ಎಷ್ಟು ಕಷ್ಟ ಎಂಬುದು ನಿರೂಪಿತವಾಗಿದೆ. ಹಳ್ಳಿಗಳು ನಗರಗಳಾಗಿ ಪರಿವರ್ತನೆ ಹೊಂದುತ್ತಿರುವ ಸಂದರ್ಭದಲ್ಲಿ ಈ ರೀತಿಯ ಪರಿವರ್ತನೆ ಇಂದು ಬೃಹದಾಕಾರವಾಗಿ ಬೆಳೆಯುತ್ತಿರುವ ಎಲ್ಲ ನಗರಗಳಲ್ಲಿಯೂ ಕಂಡು ಬರುತ್ತದೆ. ಪರಿಸ್ಥಿತಿ ಮಾತ್ರ ಅಂದಿಗೂ ಇಂದಿಗೂ ಸ್ವಲ್ಪವೂ ಬದಲಾಗಿಲ್ಲ.

"ಮುಂಬಯಿಯಲ್ಲಾದರೂ ಕೆಲಸ ಅಷ್ಟು ಸುಲಭವಾಗಿ ಸಿಕ್ಕುತ್ತದೆಯೇ? ಕೂಲಿ ಕೆಲಸಕ್ಕೆ ಲಕ್ಷಗಟ್ಟಲೆ ಜನ ಕಾದಿದ್ದಾರೆ. ಯಂತ್ರಜ್ಞರಾಗಲು ಪದವೀದಧರೇ ಸಾಲು ನಿಂತಿದ್ದಾರೆ. ಕೆಲಸ ಕಲಿತಿದ್ದವರಿಗೆ ಒಂದಲ್ಲ ಒಂದು ದಿನ ನೌಕರಿ ಸಿಕ್ಕೀತು. ನನಗೆ ಗೊತ್ತಿರುವ ಕೆಲಸವಾದರೂ ಯಾವುದು? ಆರು ತಿಂಗಳು ಹತಾಶನಾದ ಮೇಲೆ ಒಂದು

---

[38] ಪುಟ 146, 'ಜಲಪಾತ',ಎಸ್.ಎಲ್.ಭೈರಪ್ಪ

ದಿನ ಟೈಮ್ಸ್ ಪತ್ರಿಕೆಯಲ್ಲಿ, 'ಪೇಂಟಿಂಗ್ ಆರ್ಟಿಸ್ಟ್ ಬೇಕಾಗಿದ್ದಾರೆ' ಕೆಲಸಕ್ಕೆ ಎಂದು ಬೂಟಾನಿ ಪಬ್ಲಿಸಿಟಿಯವರು ಕರೆದಿದ್ದರು. ಅದಕ್ಕು ಜೆ.ಜೆ. ಸ್ಕೂಲ್ ಮತ್ತು ಇತರ ಕಲಾ ಶಾಲೆಗಳಿಂದ ಸರ್ಟಿಫಿಕೇಟ್ ತಂದಿದ್ದ ಅಭ್ಯರ್ಥಿಗಳ ಸಾಲು. ಈಗ ನಮ್ಮ ಕಂಪನಿಯ ಕಲ್ಕತ್ತೆಯ ವಿಭಾಗದಲ್ಲಿ ಆರ್ಟ್ ಡೈರೆಕ್ಟರ್ ಆಗಿರುವ ಸಿ.ಎಫ್. ಬೂಟಾನಿಯವರು ಆಗ ಇಲ್ಲಿದ್ದರು. ಅವರೇ ನನ್ನನ್ನು ಪರೀಕ್ಷೆ ಮಾಡಿ ನನ್ನ ಶಕ್ತಿಯನ್ನು ಗುರುತಿಸಿ ಕೆಲಸಕ್ಕೆ ತೆಗೆದುಕೊಂಡವರು. ಈ ಸೇರಿದ ಎಂಟು ದಿನದಲ್ಲಿಯೇ ನನಗೆ ಅಸಹ್ಯ ಬಂದಿತು. ಸ್ವತಂತ್ರವಾಗಿ ಹೊಸ ಹೊಸ ಸೃಷ್ಟಿ ಮಾಡಬೇಕೆಂದು ಕನಸು ಕಾಣುತ್ತಿದ್ದ ನಾನು ಈ ಜಾಹೀರಾತಿನ ಚಿತ್ರ ಬರೆಯುವುದೇ?"[39] ಜಲಪಾತ ಕಾದಂಬರಿಯಲ್ಲಿ ಮುಂಬಯಿ ಜೀವನವನ್ನು ಪ್ರಾರಂಭಿಸುವ ಮುನ್ನ ಶ್ರೀಪತಿ ತನ್ನ ಮನದೊಳಗೆ ಆಡಿಕೊಳ್ಳುವ ಮಾತುಗಳು ಅರ್ಥಪೂರ್ಣವಾಗಿವೆ. ಮುಂಬೈನಲ್ಲಿ ಈತ ಕೆಲಸಕ್ಕೆ ಸೇರಿದ ನಂತರ ಮತ್ತು ಕೆಲಸಕ್ಕೆ ಸೇರಿಕೊಳ್ಳುವ ಮುಂಚಿನ ಮಾನಸಿಕ ತೊಳಲಾಟಗಳು ಪ್ರತಿಬಿಂಬಿತವಾಗಿವೆ. ಇಲ್ಲಿ ಚಿತ್ರಿತವಾಗಿರುವ ಈ ಅಂಶಗಳು ಇಂದಿಗೂ ಪ್ರಸ್ತುತವು ಅರ್ಥಪೂರ್ಣವೂ ಆಗಿ ಹೊರಹೊಮ್ಮಿವೆ. ಆದರೂ ಸೃಜನಶೀಲತೆಯುಳ್ಳವರು ಒಬ್ಬರ ಕೈಕೆಳಗೆ ಕೆಲಸ ಮಾಡಬೇಕಾಗಿ ಬಂದಾಗ ಅವರೊಳಗೆ ಆಗುವ ಭಾವನೆಗಳ ಹೊಯ್ದಾಟ ವರ್ಣಿಸಲು ಅಸದಳವಾದುದು ಎಂಬುದರ ಚಿತ್ರಣ ನಿರೂಪಿತವಾಗಿದೆ.

ಮುಂಬಯಿಯಲ್ಲಿ ವೃತ್ತಿ ಬದುಕಿನೊಂದಿಗೆ ಬದುಕಿನ ಬಂಡಿ ತಳ್ಳುವ ಶ್ರೀಪತಿ ಎಂದೂ ಮುಂಬಯಿ ಭಿನ್ನತೆಗಳನು ್ನ ಕಂಡು ಕಸಿವಿಸಿಗೊಂಡವನಲ್ಲ. ಪ್ರತಿ ಕ್ಷಣವೂ ಮನ ಪಟಲದಲ್ಲಿ ಹೊಸ ಆಲೋಚನೆಗಳು ಹರಿದಾಡುತ್ತಿದ್ದವು. ಜತೆಗೆ ತಾನು ಆಡಿ ಬೆಳೆದ ಹುಟ್ಟೂರಿನ ಹಲವು ಭಿನ್ನತೆಗಳನ್ನು ಮರೆಯಲು ಒಂದಿನಿತು ಮನಸ್ಸು ಮಾಡುತ್ತಿರಲಿಲ್ಲ. ತನ್ನೂರ ಅಸು–ಪಾಸಿನ ಸಂಸ್ಕೃತಿಗೆ ಇಂಬು ನೀಡುವಂತಹ ವಿಚಾರಗಳನ್ನು ನೆನೆದುಕೊಂಡು ಹೆಮ್ಮೆ ಪಡುತ್ತಿದ್ದ ಬಗೆಯೇ ವೈಶಿಷ್ಟ್ಯ ಪೂರ್ಣವಾಗಿದೆ. ಮುಂಬಯಿ ಸಂಪ್ರಾದಾಯ ಭಿನ್ನತೆಗಳಿಗಿಂತ ಆಧುನಿಕತೆಯ ವೇಗದಲ್ಲಿ ಸಾಗುತ್ತಿದ್ದ ಬಗೆಯನ್ನು ಕಂಡು ಶ್ರೀಪತಿ ಆಶ್ಚರ್ಯಪಡುತ್ತಾನೆ.

"ಯಾಕೋ ಇದ್ದಕ್ಕಿದ್ದ ಹಾಗೆಯೇ ಮಗು ವಿಶ್ವನ ನೆನಪಾಗುವುದು. ಅವನ ಶಾಲೆ, ಅದಕ್ಕೆ ತಿಂಗಳಿಗೆ ಮೂವತ್ತು ರೂಪಾಯಿ, ಹಾಲಿಗೇ ನವಲತ್ತು; ಮನೆ ಬಾಡಿಗೆ

---

[39] ಪುಟ 27. 'ಜಲಪಾತ',ಎಸ್.ಎಲ್.ಭೈರಪ್ಪ

ಎಷ್ಟಕ್ಕೆಂದು: ಇನ್ನು ಅಕ್ಕಿ ಗೋದಿ , ಬೇಳೆ, ಒಪ್ಪೊತ್ತಾದರೂ ತರಕಾರಿ; ಬಟ್ಟೆ ಬರೆ, ಖರ್ಚಿನ ದಾರಿ ಒಂದೆರಡೇ? ಇವರ ದುಡಿಮೆಗೂ ಮಿತಿ ಇದೆ. ಈ ಮುಂಬಯಿ, ಈ ಜನ ಏನು ಏನೋ ಯೋಚನೆಗಳು. ಈ ಅಡಚಣೆಯ ಯೋಚನೆಯಲ್ಲಿ ಸಕಲವನ್ನೂ ಮರೆತು ಸರ್ವ ಪ್ರಾಣಶಕ್ತಿಯಿಂದ ರಾಗದಲ್ಲಿ ಲೀನವಾಗುವುದು ಹೇಗೆ? ಮೂಲ ಶಕ್ತಿಯೊಡನೆ ಮೇಲೆ ಬಂದು ರಾಗಕ್ಕೆ ಅರ್ಜಿಸಿಕೊಳ್ಳುವುದು ಹೇಗೆ ಸಾಧ್ಯ?"[40] ಮುಂಬೈ ಜೀವನ ಕುರಿತು ವಿಸ್ತೃತವಾದ ವಿವರಣೆ ಸಿಗುತ್ತದೆ. ನಿತ್ಯ ಜೀವನದ ಜಂಜಾಟ, ಅದರ ನಡುವೆಯೇ ಕಲೆಯನ್ನು ಉಳಿಸಿಕೊಳ್ಳಬೇಕಾದರೆ ಪಡಬೇಕಾದ ಸಂಕಷ್ಟ ಎಲ್ಲವೂ ಇಲ್ಲಿ ವರ್ಣಿತವಾಗಿವೆ. ಇಲ್ಲಿ ಇರುವ ವಿವರಣೆ ಸಾಮಾನ್ಯ ಮಧ್ಯಮ ವರ್ಗದ ಕುಟುಂದಲ್ಲಿ ಜನಿಸಿದವರಿಗೆ, ಹಳ್ಳಿಗಳಿಂದ ಮುಂಬೈಗೆ ವಲಸೆ ಹೋದವರ ಕಥೆ ಏನೆಂಬುದನ್ನು ತಿಳಿಸುತ್ತದೆ.

"ಮತ್ತೆ ಮುಂಬಯಿಗೆ ಹೋಗುವ ವಿಚಾರದಲ್ಲಿ ವಸುವನ್ನು ಕೇಳಿದೆ. ' ಇಲ್ಲಿ ಏನಿದೆ ಅಂತ ಇರಬೇಕು? ಮಗು ಸತ್ತ ದಿನದಂದ ನನಗೆ ಈ ಮನೆ ಸ್ಮಶಾನ ಅನಿಸುತ್ತೆ. ಕೈಲಿ ದುಡ್ಡಿದ್ದು ತಕ್ಷಣ ಡಾಕ್ಟರನ್ನು ಕರೆಸಿದ್ದರೆ ಮಗು ಸಾಯುತ್ತಿರಲಿಲ್ಲ. ಬೊಂಬಾಯಿಯಲ್ಲಾಗಿದ್ದರೆ ನಾವು ಹೀಗೆ ಬಿಡುತ್ತಿದ್ದೆವೆ? ನೀವು ಇಲ್ಲಿ ಬಂದರೂ ಗಣಿಯಲ್ಲಿ ಕೂಲಿ ಮಾಡುವುದು ತಪ್ಪಲಿಲ್ಲ. ಅದೇ ಕೂಲಿ ಬೊಂಬಾಯಿಯಲ್ಲಿ ಮಾಡಿದರೆ ಹೊಟ್ಟೆ ತುಂಬಿ, ಬಟ್ಟೆಗೆ ಆಗಿ ಮಗೂನ ವಿದ್ಯಾಭ್ಯಾಸವು ಚೆನ್ನಾಗಿ ಆಗುತ್ತೆ ಅಲ್ಲವೇ? ಎಂದಳು.[41] ಇಂತಹ ವಾಕ್ಯಗಳು ಜಲಪಾತ ಕಾದಂಬರಿಯಲ್ಲಿ ಹೇರಳವಾಗಿ ಕಂಡು ಬರುತ್ತವೆ.

2. ಅಗ್ರಹಾರದ ಜೀವನ ವಿಧಾನ

ಜಲಪಾತ ಕಾದಂಬರಿಯಲ್ಲಿ ಚಿತ್ರಿಸಲ್ಪಟ್ಟಿರುವ ಅಗ್ರಹಾರವು ಕಾಲ ಬದಲಾದಂತೆ ಹಳ್ಳಿಗಳು ಕೂಡ ಆಧುನಿಕತೆಯ ಕಡೆಗೆ ಸಾಗುವುದನ್ನು ಕಾದಂಬರಿಕಾರರು ಸೂಕ್ಷ್ಮವಾಗಿ ಮತ್ತು ಸೂಕ್ತವಾಗಿ ವಿವರಿಸಿದ್ದಾರೆ. ಇದಕ್ಕೆ ಅಗ್ರಹಾರವೂ ಸಹ ಹೊರತಲ್ಲ. ಅಗ್ರಹಾರದ ಜೀವನ ವಿಧಾನವನ್ನು ಲೇಖಕರು ಶ್ರೀಪತಿಯ ಕಣ್ಣಿಂದಲೇ ಕಾಣುತ್ತಾ ಹೋಗುತ್ತಾರೆ.

---
[40] ಪುಟ 19, 'ಜಲಪಾತ' ಎಸ್.ಎಲ್ ಭೈರಪ್ಪ

[41] ಪುಟ 169, 'ಜಲಪಾತ' ಎಸ್.ಎಲ್ ಭೈರಪ್ಪ

"ಹಸುವನ್ನು ನಾನೇ ತೋಟಕ್ಕೆ ಹೊಡೆದುಕೊಂಡು ಹೋಗಿ ಮೇಯಿಸುತ್ತಿದ್ದೆ. ಹಿಂಡಿ ಕಲಗಚ್ಚುಗಳನ್ನು ಮನೆಯಲ್ಲಿ ಚನ್ನಾಗಿ ಹಾಕುತ್ತಿದ್ದುದರಿಂದ ಅದು ಹಗಲು ದೊಡ್ಡತಂಬಿಗೆಯಲ್ಲಿ ಒಂದೂವರೆಯಷ್ಟು, ರಾತ್ರಿ ಒಂದು ತಂಬಿಗೆ ಪೂರ್ತಿ ಕರೆಯುತ್ತಿತ್ತು. ಊರಿನ ಜನರು ಹೆಚ್ಚು ಕಡಿಮೆ ದಿನವೂ ಮಕ್ಕಳ ಕೈಲಿ ಒಂದೊಂದು ಬಟ್ಟಲನ್ನು ಕೊಟ್ಟು, 'ಕಾಫಿಗೆ ಒಂದ್ ವಸಿ ಹಾಲು ಕೊಡಾನಂತೆ', 'ಮಗೀಗೆ ಒಂದಿಷ್ಟು ಆಲು ಕೊಡ್ರಿ', 'ಕಾಯ್‌ಲೆಯೋರ್ಗೆ ಪತ್ಯಕ್ಕೆ ಒಂದೀಟು ಅಸೀನ ಆಲು ಕೊಡಿ', ಎಂದು ಕಳುಹಿಸುತ್ತಿದ್ದರು. ವಸು ಮೊದಮೊದಲು, ಕೇಳಿದವರಿಗೆ ಒಂದಿಷ್ಟು ಕೊಟ್ಟು ಕಳಿಸುತ್ತಿದ್ದಳು. ಕೊನೆಗೆ ದಾನ ಮಾಡಿದ ಮೇಲೆ ನಮ್ಮ ಮಕ್ಕಳಿಗೇ ಹಾಲು ಉಳಿಯುತ್ತಿರಲಿಲ್ಲ. ಬೆಟ್ಟೇಗೌಡರು, 'ನೀನಿನ್ನೂ ಹಳ್ಳೀನ ಸರಿಯಾಗಿ ಕಂಡಿಲ್ಲ ಕಣವ್ವ, ಕಳ್ಳನನ್ ಮಕ್ಳು ಇಸ್ಪೀಟಾಡ್ತಾವೆ. ಮನೇ ದನಾನ ನಿಗಾಮಾಡಾಕಿಲ್ಲ. ಕಾಫೀ ಕುಡಿಯಾ ಸೋಕಿ ಬ್ಯಾರೆ. ಇವಕ್ಕೆ ಆಲು ಕೊಟ್‌ರೆ ಪಾಪ ಬರ್‍ತೈತೆ. ಒಂದು ಹನೀನೂ ಕೊಡಬ್ಯಾಡ' ಎಂದು ವಸುವಿಗೆ ಹೇಳಿದರು.ವಸು ಅಂದಿನಿಂದ ಕ್ಷೀರದಾನವನ್ನು ನಿಲ್ಲಿಸಿದಳು. 'ಗತಿಗೆಟ್ಟೋವ್ರು, ನಾವೇ ಕರಾವು ಕರೀತಾವೆ ಅಂತ ಆಡ್ತಾವೆ' ಎಂದು ಜನಗಳು ಟೀಕೆ ಮಾಡಲು ಪ್ರಾರಂಭಿಸಿದರು."[42] ಅಗ್ರಹಾರವೂ ಮುಂಬಯಿಗಿಂತ ಹೆಚ್ಚು ಕೆಟ್ಟು ಹೋಗಿದೆ. ಅಗ್ರಹಾರವೂ ಹಳ್ಳಿಯಾಗಿ ಉಳಿದಿದ್ದರೂ, ಆ ಊರಿನ ಜನರೆಲ್ಲಾ ಮುಂಬಯಿ ನಾಗರಿಕರಂತೆ ದುಡ್ಡಿಲ್ಲದೇ, ಒಂದು ಹಸಿ ಮೆಣಸಿನಕಾಯಿಯನ್ನು ಮತ್ತೊಬ್ಬರಿಗೆ ಕೊಡುವುದಿಲ್ಲ. ನೀರು ಬೆರೆಸದೇ ಹಾಲು ಮಾರುವುದಿಲ್ಲ. ಒಂದು ಎಳೆ ತೆಂಗಿನಕಾಯಿಯನ್ನು ಮೂರು ಆಣೆಗೆ ಕಡಿಮೆ ಕೊಡುವುದಿಲ್ಲ. ಮನೆಯಲ್ಲಿ ಮಜ್ಜಿಗೆ ಹೆಚ್ಚಾದರೆ ಎಮ್ಮೆಗೆ ಕುಡಿಸುತ್ತಾರೆಯೇ ವಿನಃ ಮತ್ತೊಬ್ಬರಿಗೆ ನೀಡುವುದಿಲ್ಲ. ಊರಿನ ಯುವಕರು ಅಗ್ರಹಾರದಲ್ಲಿರುವ ಹೊಟೇಲ್‌ನಲ್ಲಿ ಇಸ್ಪೀಟು ಆಡಿಕೊಂಡು ಕಾಫೀ ಕುಡಿದು ಬಿದ್ದಿರುತ್ತಾರೆ.

ಹಳ್ಳಿಗಳಲ್ಲಿ ದುಡಿಯದೇ ಸೋಮಾರಿಗಳಾಗುತ್ತಿದ್ದಾರೆ. ಅಗ್ರಹಾರದ ಜನತೆಗೆ ದುಡಿಮೆಯ ಪ್ರಜ್ಞೆಯೇ ಇಲ್ಲ. ಮತ್ತೊಬ್ಬರ ಗೊಡವೆ ಬಿಟ್ಟರೆ ಅವರಿಗೆ ಬೇರೆ ಕೆಲಸವೇ ಕಾಣುವುದಿಲ್ಲ. ಇದು ಅಗ್ರಹಾರದ ಬದಲಾವಣೆಯ ಸ್ಥಿತಿ ಮತ್ತು ರೂಪಾಂತರಗೊಳ್ಳುತ್ತಿರುವುದರ ಚಿತ್ರ.

---

[42] ಪುಟ 154, 'ಜಲಪಾತ',ಎಸ್.ಎಲ್.ಭೈರಪ್ಪ

ಅಗ್ರಹಾರದಲ್ಲಿ ಯಾರ ಹತ್ತಿರವೂ ತರಕಾರಿಯ ಬೀಜಗಳಿಲ್ಲ. ಮನೆಯ ಹಿತ್ತಲಿನಲ್ಲಾಗಲೀ, ತೋಟದಲ್ಲಾಗಲೀ ತರಕಾರಿ ಬೆಳೆಯುವುದನ್ನು ಮರೆತು ಇಪ್ಪತ್ತೈದು ವರ್ಷಗಳಾಗಿವೆ. ಅಂದರೆ ಜನರು ವ್ಯವಸಾಯವನ್ನು ಮರೆಯುವುದರ ಜತೆಗೆ ತಮ್ಮ ಸಾಂಪ್ರದಾಯಿಕ ಜೀವನವನ್ನು ಮರೆತು ಕಾಲ ಕಳೆಯುವುದರ ಬಗ್ಗೆಯೇ ಯೋಚಿಸುವುದನ್ನು ಕಾಣಬಹುದು.

ಒಂದು ಕಾಲದಲ್ಲಿ ಹಳ್ಳಿಗಳೆಂದರೆ ಅವು ಸಮೃದ್ಧ ಪ್ರದೇಶಗಳು. ಅಲ್ಲಿನ ಹಿತ್ತಲುಗಳಲ್ಲಿ ತರಕಾರಿ, ಸೊಪ್ಪು, ಹೂ ಗಿಡಗಳು, ಹಣ್ಣಿನ ಗಿಡಗಳು ಹೀಗೆ ಕಂಡು ಬರುತ್ತಿದ್ದವು. ಹಳ್ಳಿಗಳು ಬಿತ್ತನೆ ಬೀಜದ ಸಂರಕ್ಷಿತ ಕೇಂದ್ರಗಳಾಗಿದ್ದವು. ಆದರೆ ಇಂದು ಜನರ ನಡವಳಿಕೆಯಿಂದಾಗಿ ಆ ಎಲ್ಲಾ ಚಟುವಟಿಕೆಗಳು ಮಾಸಿ ಹೋಗುತ್ತಿವೆ. ಇಲ್ಲಿ ಬೀಜವನ್ನು ಬಿತ್ತ ಬೇಕಾದರೆ ದುಡ್ಡು ಕೊಟ್ಟು ಪರ ಊರಿನಿಂದ ತರುತ್ತಾರೆ. ಹಸುವಿಗೆ ಹುಲ್ಲನ್ನು ದುಡ್ಡು ಕೊಟ್ಟೇ ಕೊಂಡುಕೊಳ್ಳಬೇಕು. ಹೊಲಕ್ಕೆ ಹಾಕಿದ ಬೆಳೆ ರಾತ್ರಿ ವೇಳೆ ಕಳ್ಳತನವಾಗುತ್ತಿದುದು ಕೂಡ ಕಂಡು ಬರುತ್ತದೆ.

“ಹಳ್ಳಿ ಯಾಕೆ ಹೀಗಾಗಿದೆ ಎಂಬ ಪ್ರಶ್ನೆಯನ್ನು ನಾನು ಅವರ ಸಂಗಡ ಚರ್ಚಿಸುತ್ತಿದ್ದೆ. ಆದರೆ ನನ್ನಲ್ಲಿ ನಾನೇ, ಹಳ್ಳಿಯಲ್ಲಿ ಕಲೆಯು ಬೆಳೆದೀತೆ ಎಂದು ಯೋಚಿಸುತ್ತಿದ್ದೆ. ಬೇಸಗೆಯಲ್ಲಿ ಲಗ್ನಕಾಲ ಬಂತು. ಪ್ರತಿಯೊಂದು ಮದುವೆಯಲ್ಲಿಯೂ ಲೌಡ್ ಸ್ಪೀಕರ್‌ಗಳು. ಮೂರು ದಿನ ಹಗಲು ರಾತ್ರಿ ಊರಿನ ಇತರರಿಗೆ ನಿದ್ರೆಗೂ ಅವಕಾಶವಿಲ್ಲದಂತೆ ಸಿನಿಮ ಹಾಡಿನ ರಿಕಾರ್ಡುಗಳನ್ನು ಕಿರಿಚಿಸುತ್ತಾರೆ. ಅದೇ ನಾಗರೀಕತೆಯ ಲಕ್ಷಣ. ಯಾರಾದರೂ ಹೇಳಿದರೆ, ‘ನನ್ ಹೆಂಡ, ನನ್ ಬುಂಡೆ, ನೀನ್ಯಾರ್ಲಾ ಕೇಳಾಕೆ ಅಂತಾರೆ. ಅವರಿಗೆ ಹೇಳೋರ್‍ಯಾರು, ಸಾರ್?’[43] ಶಿದ್ದನಂಜಪ್ಪನವರು ಎನ್ನುತ್ತಾರೆ.”

ಹಳ್ಳಿಗಳು ಬದಲಾಗುತ್ತಿರುವ ಕುರಿತು ಹೇಳಿರುವ ಮಾತುಗಳನ್ನು ಕಾಣಬಹುದು. ಹಳ್ಳಿಗಳು ಪರಿವರ್ತನೆ ಹೊಂದುತ್ತಿರುವ ಸನ್ನಿವೇಶವನ್ನು ಕಂಡುಕೊಳ್ಳಬಹುದು. ಮತ್ತೊಂದು ಹಂತದಲ್ಲಿ ಹಳ್ಳಿಗಳು ಎಷ್ಟೊಂದು ಸತ್ವಹೀನವಾಗಿ ಬಿಡುತ್ತವೆ ಎಂಬುದಕ್ಕೆ ಉದಾಹರಣೆ ಶ್ರೀಪತಿಯ ಹೆಂಡತಿ ವಸು ಸಂಗೀತ ಹಾಡುವುದನ್ನು

---

[43] ಪುಟ 158, ‘ಜಲಪಾತ’,ಎಸ್.ಎಲ್.ಭೈರಪ್ಪ

ನಿಲ್ಲಿಸಿ ಬಿಡುತ್ತಾಳೆ. ಶ್ರೀಪತಿಯು ತನ್ನ ಕಲೆಯನ್ನು ಮೂರು ಚಿತ್ರಗಳ ಆಚೆ ರಚಿಸಲು ಸಾಧ್ಯವೇ ಆಗುವುದಿಲ್ಲ ಎಂಬುದು ವಿಷಾದಕರ ಸಂಗತಿ.

"ಅವಳ ಮಾತು ನಿಜ. ಸರಿಯಾಗಿ ಈ ನೆಲದಲ್ಲಿ ಒಂದಾಗದೆ ನಾವು ಯಾವ ಪಕ್ಷವನ್ನೂ ನಿರ್ಣಯಿಸಬಾರದು. ಆದರೆ ನಾವು ನಿಜವಾಗಿಯೂ ಅಗ್ರಹಾರದೊಡನೆ ಒಂದಾಗಬಲ್ಲವೇ ಎಂದು ಒಮ್ಮೊಮ್ಮೆ ನನಗೆ ಸಂಶಯ ಹುಟ್ಟುತ್ತಿತ್ತು. ದೋಷವು ನಮ್ಮದೋ ಅಗ್ರಹಾರದ ಹೊಸ ಪೀಳಿಗೆಯ ಜನರದೋ ಎಂಬ ಬಗೆಗೆ ನಾನು ಯೋಚಿಸುತ್ತಿದ್ದೆ. ಬೆಟ್ಟೇಗೌಡರೊಡನೆ ನಾನು, ವಸು, ಎಲ್ಲರೂ ಒಂದಾಗಿ ಬೆರೆತಿದ್ದೇವೆ. ಆದರೆ ಊರಿನ ಯಾರೊಡನೆಯೂ ನಮಗೆ ಸೇರುವುದಿಲ್ಲ. ಅವರ ನಡೆ ನುಡಿಗಳಲ್ಲಿ ನಾವು ಮೆಚ್ಚುವ ಯಾವ ಸಂಗತಿಯೂ ಇಲ್ಲವೆನಿಸುತ್ತದೆ. ಹೆಂಗುಸುರು ಚಿನ್ನ ಬೆಳ್ಳಿಗಳನ್ನು ಅಡವು ಇರಿಸಿಕೊಂಡು ರೂಪಾಯಿಗೆ ತಿಂಗಳಿಗೆ ಎರಡಾಣೆಯಂತೆ ಬಡ್ಡಿಯ ಸಾಲ ಕೊಡುತ್ತಾರೆ. ಹಾಲಿಗೆ ನೀರು ಹಾಕಿ ಮಾರುತ್ತಾರೆ. ಬರಿಯ ಹಣದ ಮತ್ತು ಸರ್ಕಾರಿ ಅಧಿಕಾರಿಗಳ ವಿಷಯವನ್ನೇ ಮಾತನಾಡುತ್ತಾರೆ. ನಮ್ಮ ಅಮ್ಮನ ಕಾಲದಲ್ಲಿದ್ದಂತೆ ಯಾರೂ ಬೀದಿಗೆ ದಿನವೂ ನೀರು ಹಾಕಿ ದೊಡ್ಡ ರಂಗವಲ್ಲಿ ಇಡುವುದಿಲ್ಲ. ಹಾಡುಗಳನ್ನು ಕಲಿತಿಲ್ಲ. ಪರಸ್ಥಳದ ಮೇಸ್ಟರುಗಳಿಗೆ ತೆಂಗಿನಕಾಯಿ, ಹಾಲು, ಮೊಸರು ಕೊಡುವುದಿಲ್ಲ. ಗಂಡಸರೆಲ್ಲರೂ ಬೀಡಿ ಎಳೆಯುತ್ತಾರೆ; ಕಳ್ಳತನ ಮಾಡುತ್ತಾರೆ, ಅಥವಾ ಮಾಡಿಸುತ್ತಾರೆ; ಪಕ್ಷ ಪಂಗಡಗಳನ್ನು ಕಟ್ಟುತ್ತಾರೆ; ತಮ್ಮ ಜಮೀನಿನಲ್ಲಿ ದುಡಿಯುವುದಿಲ್ಲ; ಮನೆಯ ಮಕ್ಕಳಿಗೆ ಹೇಳಿಕೊಟ್ಟು ಮತ್ತೊಬ್ಬರ ಹಿತ್ತಲಿನಿಂದ ತರಕಾರಿ ಕದಿಸುತ್ತಾರೆ. ಮನೆಯ ಮಕ್ಕಳಿಗೆ ಹೇಳಿಕೊಟ್ಟು ಮತ್ತೊಬ್ಬರ ಹಿತ್ತಲಿನಿಂದ ತರಕಾರಿ ಕದಿಸುತ್ತಾರೆ. ಈ ಸಮೂಹದಲ್ಲಿ ನಾವು ಒಂದಾಗುವುದು ಸಾಧ್ಯವೇ? ಮುಂಬಯಿಯ ಜನರು ಉದಾರಿಗಳು. ಹತ್ತು, ಇಪ್ಪತ್ತು, ಐವತ್ತು, ರೂಪಾಯಿಗಳ ಸಾಲವು ಎಲ್ಲಿಯಾದರೂ ಅವರಿಂದ ಸಿಕ್ಕುತ್ತದೆ. ಅದಕ್ಕಾಗಿ ಯಾರೂ ಚಿನ್ನ ಬೆಳ್ಳಿಯ ಒತ್ತೆ ಕೇಳುವುದಿಲ್ಲ. ಎರಡನೆಯ ಮನುಷ್ಯ ಅಪ್ರಾಮಾಣಿಕನೆಂಬ ಪೂರ್ವವಿಶ್ವಾಸದ ಮೇಲೆ ಅಗ್ರಹಾರದವರ ವ್ಯವಹಾರವು ನಿಂತಿದ್ದರೆ, ಮುಂಬೈಯ ಜನರು ಹಾಗೆ ಭಾವಿಸುವುದಿಲ್ಲ. ಇದರ ಕಾರಣ?"[44] ಜನರ ನಡೆ, ನುಡಿಗಳಲ್ಲಿ ನಾವು ಮೆಚ್ಚುವ ಯಾವ ಸಂಗತಿಯೂ ಇಲ್ಲ. ಹೆಂಗಸರೂ ಚಿನ್ನ ಬೆಳ್ಳಿಗಳನ್ನು ಅಡವು ಇರಿಸಿಕೊಂಡು ರೂಪಾಯಿಗೆ

[44] ಪುಟ 157. 'ಜಲಪಾತ'.ಎಸ್.ಎಲ್.ಭೈರಪ್ಪ

ಎರಡಾಣೆಯಂತೆ ಸಾಲ ಕೊಡುತ್ತಾರೆ. ಹಾಲಿಗೆ ನೀರು ಹಾಕಿ ಮಾರುತ್ತಾರೆ. ಬರೀ ಹಣದ ಮತ್ತು ಸರ್ಕಾರಿ ಅಧಿಕಾರಿಗಳ ವಿಷಯವನ್ನೇ ಮಾತನಾಡುತ್ತಿರುತ್ತಾರೆ.

ಅಮ್ಮನ ಕಾಲದಲ್ಲಿದ್ದಂತೆ ಯಾರು ಬೀದಿಗೆ ದಿನವೂ ನೀರು ಹಾಕಿ ದೊಡ್ಡ ರಂಗೋಲಿ ಇಡುವುದಿಲ್ಲ. ಹಾಡುಗಳನ್ನು ಕಲಿತಿಲ್ಲ. ಪರಸ್ಥಳದ ಮೇಷ್ಟ್ರುಗಳಿಗೆ ತೆಂಗಿನಕಾಯಿ, ಹಾಲು, ಮೊಸರು ಕೊಡುವುದಿಲ್ಲ. ಗಂಡಸರೆಲ್ಲರೂ ಬೀಡಿ ಎಳೆಯುತ್ತಾರೆ. ಕಳ್ಳತನ ಮಾಡುತ್ತಾರೆ. ಈ ಸಮಾಜದಲ್ಲಿ ನಾವು ಒಂದಾಗುವುದು ಸಾಧ್ಯವೇ? ಎಂದು ಶ್ರೀಪತಿ ತನ್ನ ಮನದಲ್ಲಿ ಪ್ರಶ್ನಿಸಿಕೊಳ್ಳುತ್ತಾರೆ. "ಆನಂದದ ಅಭಿವ್ಯಕ್ತಿಯೇ ಕಲೆ". ಕಲೆ ಎಂಬುದು ಒಂದು ಸೃಷ್ಟಿಯಲ್ಲ. ಜೀವನ ಅಭಿವ್ಯಕ್ತಿ. ಜೀವನದಲ್ಲಿ ಆನಂದವೂ ಸತ್ಯವಾಗಿದ್ದರೂ, ಕಲೆಯೂ ಸತ್ಯ. ಇಲ್ಲದಿದ್ದರೇ, ಕಲೆಯ ಹೆಸರಿನಲ್ಲಿ ನಡೆಯುವುದೆಲ್ಲಾ ತಾಂತ್ರಿಕ ದೊಂಬರಾಟ. ಇಲ್ಲಿ ವಸುವಿನ ಶಾರೀರವು ಹಾಡಲಾರದು. ನಾನು ವರ್ಣದಿಂದ ಬರೆಯಲಾರೆ ಎಂದು ಶ್ರೀಪತಿ ಹೇಳುವಾಗ ಅಂದುಕೊಂಡಿದ್ದನ್ನು ಸಾಧಿಸಲಾಗದ ನೋವು ವ್ಯಕ್ತವಾಗುತ್ತದೆ.

3. ನಗರ ಮತ್ತು ಗ್ರಾಮಗಳ ನಡುವಿನ ತೌಲನಿಕ ಅಧ್ಯಯನ

'ಜಲಪಾತ' ಕಾದಂಬರಿಯು ಒಂದು ವಿಶಿಷ್ಟ ಕೃತಿಯಾಗಿದ್ದು, ಇಲ್ಲಿ ಅಭಿವ್ಯಕ್ತಿಗೊಳ್ಳುವ ವಿಷಯಗಳು ಸಾರ್ವಕಾಲಿಕ ನೈಜ ಅಂಶಗಳಿಂದ ಕೂಡಿದೆ ಎನ್ನಬಹುದು. ಕಾದಂಬರಿಯಲ್ಲಿ ಚಿತ್ರಿತವಾಗಿರುವ ಅಂದಿನ ಮುಂಬಯಿ ಇಂದಿಗೂ ಹಾಗೆಯೇ ಇದೆ. ಹಾಗೆಯೇ ಅಗ್ರಹಾರದ ಚಿತ್ರಣವೂ ಹೆಚ್ಚು ಕಡಿಮೆ ಹಾಗೆಯೇ ಉಳಿದುಕೊಂಡಿದೆ. ಅಂದರೆ ಲೇಖಕರ ಗ್ರಹಿಕೆ ಅಧ್ಯಯನದ ಆಳ ಮತ್ತು ವಿಸ್ತಾರ ವ್ಯಾಪಕವಾದದ್ದು. ಯಾರ ಹಿಡಿತಕ್ಕೂ ಲೇಖಕರು ಸಿಗುವುದಿಲ್ಲ.

ಮುಂಬಯಿನಂತಹ ನಗರ ಪ್ರದೇಶ ಯಾವತ್ತಿಗೂ, ಕ್ರಿಯಾಶೀಲವಾದದ್ದು ಜಡವಲ್ಲ. ಇಲ್ಲಿ ಸುತ್ತಮುತ್ತಲಿನಿಂದ ಬರುವ ಜನರೇ ಜೀವನಾಡಿ. ಅದು ಮನುಷ್ಯ ದೇಹದ ನರಮಂಡಲ ಕೇಂದ್ರವಿದ್ದಂತೆ. ಇಲ್ಲಿ ಕಲೆಗೆ ಸಂಗೀತಕ್ಕೆ ಮುಕ್ತ ಆಹ್ವಾನದ ಅವಕಾಶವಿದೆ. ಕಲೆಗೆ ದೊರೆಯುವ ಪ್ರೋತ್ಸಾಹ ಹಳ್ಳಿಗಳ ದುಡಿಮೆಯ ಜತೆಗೆ ನೆಮ್ಮದಿಯೂ ಸಾರ್ಥಕ ಭಾವವು ದೊರೆಯುತ್ತದೆ. ಮುಂಬಯಿನೇ ಕಲೆ ವೃದ್ಧಿಸುತ್ತದೆ. ಆದರೆ ಊರು ಅಥವಾ ಗ್ರಾಮೀಣ ಪ್ರದೇಶಗಳೇ ಸರಿಯಾದ ಪ್ರೋತ್ಸಾಹವಿಲ್ಲದೇ ಸೊರಗುತ್ತಿದೆ.

ಮುಂಬಯಿ ನಗರದಲ್ಲಿ ಮೈಮುರಿದು ದುಡಿಯುವ ಮಂದಿ ಇದ್ದಾರೆ. ಆದರೆ ಅಗ್ರಹಾರವು ಸೋಮಾರಿತನದಿಂದ ಕೂಡಿದೆ. ಜನರು ಹಾಳು – ಹರಟೆಯಲ್ಲಿ ಕಾಲ ಕಳೆಯುತ್ತಿರುತ್ತಾರೆ. ಅನಾವಶ್ಯಕ ವಿಚಾರಗಳಲ್ಲಿ ಕಾಲ ನೂಕುತ್ತಾ ನಡೆಯುತ್ತಿದ್ದಾರೆ.

ಹಳ್ಳಿಗಳಲ್ಲಿಯೂ ಡಾ. ನಾಡಗೌಡರಂತಹ ಪಾತ್ರಗಳು ಹೇರಳವಾಗಿ ದೊರೆಯುತ್ತವೆ. ಮೇಲೊಂದು ಮುಖವಾಡ ಹೊದ್ದುಕೊಂಡು ಜೀವನ ಸಾಗಿಸುತ್ತಾರೆ. ಮುಂಬಯಿ ಜೀವನಕ್ಕಾಗಿ ಸುಳ್ಳು ಹೇಳಿದರೆ ಅಗ್ರಹಾರದ ಜೀವನವೇ ಸುಳ್ಳು ಎನಿಸುತ್ತದೆ. ಅಪರೂಪಕ್ಕೆ ಸಿಗುವ ಒಳ್ಳೆಯ ಜನ ಮುಂಬಯಿ ಜನರಂತೆಯೇ ಬದಲಾವಣೆ ಕಂಡು ಅಗ್ರಹಾರ ಪುಟ್ಟ ಮುಂಬಯಿ ಆಗುತ್ತಾ ಇದೆ.

ಜನರಲ್ಲಿ ಸಾಂಪ್ರದಾಯಿಕವಾಗಿ ಬೆಳೆದು ಬಂದ ಕೃಷಿ ನಶಿಸುತ್ತಿದೆ. ಪ್ರೀತಿ – ಗೌರವ, ಆದರ್ಶಗಳು ಕ್ಷೀಣಿಸುತ್ತಿವೆ. ಜನರು ಪ್ರೀತಿ, ದಯೆ, ಕರುಣೆ ಬದಲಾಗಿ ವ್ಯವಹಾರಕ್ಕೆ ಇಳಿದಿದ್ದಾರೆ. ಹಿತ್ತಲಿನಲ್ಲಿ ಕಾಣುತ್ತಿದ್ದ ಸೊಪ್ಪು, ತರಕಾರಿ ಬೆಳೆ ಮಾಯವಾಗಿ ಬಿತ್ತನೆ ಬೀಜಗಳನ್ನು ಕೊಂಡುಕೊಳ್ಳಲು ಪೇಟೆಗಳಿಗೆ ಧಾವಿಸಬೇಕಾದ ಅನಿವಾರ್ಯ ಪರಿಸ್ಥಿತಿ ಒದಗಿದೆ. ಬಡ್ಡಿಯ ವ್ಯವಹಾರಕ್ಕೆ ಇಳಿದಿರುವ ಅಗ್ರಹಾರದ ಮಂದಿ ಪ್ರೀತಿಯಿಂದ ಮುಕ್ತವಾಗಿ ಕೈಎತ್ತಿ ಕೊಡುವುದನ್ನು ಮರೆಯುತ್ತಿದೆ. ಮುಂಬಯಿನಲ್ಲಿ ಭಿಕ್ಷೆ ಎತ್ತಿದರೆ ದುಡ್ಡು ಸಿಗಬಹುದು. ಆದರೆ, ಅಗ್ರಹಾರದಲ್ಲಿ ಕಾಸು ಹುಟ್ಟುವುದಿಲ್ಲ ಎಂದೆನಿಸುತ್ತದೆ.

ಅಧ್ಯಾಯ 5

ಲೇಖಕರು ಕಾದಂಬರಿಯನ್ನು ರಚಿಸಿದ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳನ್ನು ಅಧ್ಯಯನ ನಡೆಸುವುದು

1. ಲೇಖಕರು ಕಾದಂಬರಿಯನ್ನು ರಚಿಸಿದ ಹಿನ್ನೆಲೆ:

ಜಲಪಾತ ಕಾದಂಬರಿಯ ಲೇಖಕರಾದ ಎಸ್.ಎಲ್.ಭೈರಪ್ಪನವರನ್ನು ಸಂದರ್ಶಿಸಲು ಸಾಕಷ್ಟು ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ. ಅವರ ಭೇಟಿ ಹಿನ್ನೆಲೆ ಜಲಪಾತ ಕಾದಂಬರಿಯನ್ನು ಬರೆಯಲು ಪ್ರೇರೇಪಿಸಿದ ಅಂಶಗಳನ್ನು ತಿಳಿಯುವುದೇ ಆಗಿತ್ತು. ಆದರೆ ಅವರು ಬರೆದ ಪುಸ್ತಕ "ನಾನೇಕೆ ಬರೆಯುತ್ತೇನೆ?" ಎಂಬುದರಿಂದಲೇ ಆಯ್ದುಕೊಳ್ಳಲಾಗಿದೆ.

ಜಲಪಾತ ಕಾದಂಬರಿಯನ್ನು ಕುರಿತ ಅವರ ಅನಿಸಿಕೆ ಅಭಿಪ್ರಾಯ ಹೀಗಿದೆ. "ಜಲಪಾತ ಕಾದಂಬರಿಯ ಆರಂಭವು ಮನಸ್ಸಿನಲ್ಲಿ ಮುಳುಗಿ ಮರೆಯಾಗಿ ಎದ್ದು ಗೋಚರವಾಗುವ ಪರಿಕ್ರಮವು ಮೂರ್ನಾಲ್ಕು ವರ್ಷ ಮೊದಲೇ ಆಗಿತ್ತು. ಆದರೆ ಈ ಪಿಂಡಸ್ಥಿತಿಗೆ ಬಂದ ನಂತರ ಅದು ನನ್ನ ಜೀವನ ದೃಷ್ಟಿ ಮತ್ತು ಜೀವನಕ್ಕೂ ನನಗೂ ಇರುವ ಸಂಬಂಧವನ್ನೇ ಪ್ರಭಾವಿಸತೊಡಗಿತು. ಅದುವರೆಗೆ, ವಸಂತದಲ್ಲಿ ಗಿಡ ಮರಗಳು ಚಿಗುರುವುದನ್ನು ಅಚ್ಚರಿಗಾಗಿ ಮಾತ್ರ ನೋಡುತ್ತಿದ್ದೆ. ಆ ಸಲ ನನಗೆ ಗೊತ್ತಿಲ್ಲದಂತೆ ಹೊರಗೆ ತಿರುಗುವಾಗ, ಕೋಣೆಯ ಬಸ್ಸು ರೈಲುಗಳ ಕಿಟಕಿಯಿಂದ ನೋಡುವಾಗ ನನ್ನ ದೃಷ್ಟಿಯು, ಚಿಗುರುವ ಹೂವು ಬಿಡುವ ಕ್ರಮೇಣ ಹೀಚುಗಟ್ಟುವ ಎಳೆಗಾಯಿ, ಬಲಿತ ಕಾಯಿ, ದೊರೆಗಾಯಿ, ಮಾಗುಕಾಯಿ, ಹಣ್ಣುಗಾಯಿ, ಹಣ್ಣು, ಹಣ್ಣಿನ ಬಾರವನ್ನು ತಾಳಲಾರದೇ ಜಗ್ಗಿ ಬಳಲುವ ಕೊಂಬೆಗಳು ಹೀಗೆ ಮರಗಳ ಗಿಡಗಳ ಒಂದೊಂದು ಅವಸ್ಥೆಯು ಹೊಸ ಸಂಕೇತ, ಹೊಸ ಅಸ್ಪಷ್ಟ ಅರ್ಥದೊಡನೆ ಕಾಣಿಸಲು ಶುರವಾಯಿತು.

ಆದರೆ ಅದರ ಜೊತೆಗೆ ಇನ್ನೊಂದು ಆಸ್ಥೆ 'ಎಲ್ಲದರೂ ಗರ್ಭಿಣಿ ಹೆಂಗಸು ಕಾಣ ಸಿಕ್ಕಿದರೆ, ಅವಳನ್ನೇ ಗಮನಿಸುವ, ನಟ್ಟ ದೃಷ್ಟಿಯಿಂದ ನೋಡುವ ನೋಡದಿರಲು ಸಾಧ್ಯವೇ ಇಲ್ಲವೆಂಬಂತಹ ಒಳಗಿನ ಒತ್ತಡ ಯಾರಾದರೂ ದೃಷ್ಟಿಯನ್ನು ನನ್ನನ್ನು ಅಸಭ್ಯನೆಂದಾರು

ಎಂಬ ಪರಿವೆಯೇ ಇಲ್ಲದೆ.ಆಗ ನಾನು ಇದದ್ದು ಆಧುನೀಕೃತವಾದ ಒಂದು ಪಟ್ಟಣ ಪ್ರದೇಶದಲ್ಲಿ ಬಸರಾಗುವ ಹೆಂಗಸರ ಸಂಖ್ಯೆಯು ಕಡಿಮೆ.ಬಸರಾದರೂ ಹೊಟ್ಟೆಯು ಎದ್ದು ಕಾಣುಷ್ಟು ದಪ್ಪವಾದ ನಂತರ, ಮುಕ್ತವಾಗಿ ಹೊರಗೆ ತಿರುಗುವವರು ಇನ್ನು ಕಡಿಮೆ. ಏಕೆ ಹೀಗೆ?

ಆಧುನಿಕ ಹೆಂಗಸಿಗೆ ಬಸರು ಎನ್ನುವುದು ಹೀನಾಯದ ಸಂಗತಿಯಾಗಿದೆ ಎಂಬ ಪ್ರತ್ಯಕ್ಷದೊಡನೆ ಬಾಲ್ಯದ ನನ್ನ ಹಳ್ಳಿಯಲ್ಲಿ ಸದಾ ಕಾಣುತ್ತಿದ್ದ ತುಂಬು ಬಸುರಿಯರ ಚಿತ್ರಗಳು- ಯಾವ ಹೀನಾಯ ಭಾವವು ಇಲ್ಲದೇ ಬಸರಾಗದಿರುವುದೇ ಅಸಹಜವೆಂಬ ಪ್ರಜ್ಞೆಯ ಮಟ್ಟದ ಭಾವನೆಯು ಇಲ್ಲದೇ, ಹಬ್ಬ ಹರಿದಿನಗಳಲ್ಲಿ ಮದುವೆ ಮುಂಜಿಗಳಲ್ಲಿ ತೇರು ಜಾತ್ರೆಗಳಲ್ಲಿ ಸಾಧರಣಾ ದಿನಗಳಲ್ಲಿ ಹೊಲಗದ್ದೆ, ಒಗೆಯುವ ಕೆರೆ – ಕೊಳ, ಸೇದುವ ಬಾವಿಗಳ ಹತ್ತಿರ ಎಲ್ಲೆಲ್ಲೂ ಸಹಜವಾಗಿಯೇ ಇರುತ್ತಿದ್ದ ವಿವಿಧ ಅಳತೆಗಳ ಹೊಟ್ಟೆಯ ಬಸುರಿಯರ ಚಿತ್ರಗಳು. ಆದರೆ ನಾನು ಅವರನ್ನು ಎಂದೂ ವಿಶೇಷವೆಂದೂ ಭಾವಿಸಿರಲಿಲ್ಲ.

ನನ್ನ ಕೇರಿಯಲ್ಲಿ ನನ್ನ ಮನೆಗಳಲ್ಲಿ ಚಿಕ್ಕಮ್ಮಂದಿರು, ದೊಡ್ಡಮ್ಮಂದಿರು, ದಾಯದಿ ಅಕ್ಕಂದಿರು, ನನ್ನ ತಾಯಿ ಹೀಗೆ ಎಲ್ಲರೂ ಗರ್ಭಿಣಿರಾಗುತ್ತಿದ್ದರೂ, ಹಡೆಯುತ್ತಿದ್ದರು.ಆದರೆ ಈಗ ಏಕೆ ಅಪೂರ್ವ, ಈ ಹೀನಾಯ ಭಾವ? ಇದರ ಜೊತೆಗೆ ಚಿಗುರಿ ಹೂ ಬಿಟ್ಟು ಕಾಯಿಗಟ್ಟುವ ಮರಗಿಡಗಳ ಚಿತ್ರಗಳು, ಒಂದೇ ಪಿಂಡದ ಎರಡು ಮುಖಗಳೆನಿಸಿದಾಗ, ಕಥಾಪಿಂಡವು ಬೆಳೆದಿದೆ. ಹ್ಹಾ! ಇದೊಂದು ಕಾದಂಬರಿ ಆಗಿಯೇ ಆಗುತ್ತದೆ. ಎಂಬ ಅರಿವು ತನಗೆ ತಾನೇ ಮೂಡಿತು.

ಇದಾದ ಒಂದು ವರ್ಷದ ನಂತರ 'ಜಲಪಾತ' ಕಾಗದದ ಮೇಲೆ ಬರೆದೇನೆಂಬ ನೆನಪು. ಅದುವರೆಗೂ ನನ್ನ ಮನಸ್ಸು, ಚಿಗುರು, ಬಸರು, ಹುಟ್ಟು, ಸೃಷ್ಟಿ, ಕಲೆ, ಹೀಗೆ ವಿವಿಧ ಮುಖಗಳ ಒಂದೇ ವಸ್ತುವಿನ ವಶದಲ್ಲಿತ್ತು. ಇದೊಂದೇ ಸಕಲ ಜೀವನದ ಸಕಲ ವಿಶ್ವದ ಮುಖ್ಯ ಸಮಸ್ಯೆ ಎನಿಸುತಿತ್ತು. ಇದರ ವಿಸ್ಮಯದಲ್ಲೇ ಮನಸ್ಸು ಮಿನುಗುತಿತ್ತು, ಮಂಕಾಗುತಿತ್ತು. ಬೇರೆ ಯಾವುದನ್ನು ಓದಲು, ಚರ್ಚಿಸಲು, ತಿಳಿಯಲು, ಮಾತನಾಡಲು ಸಹ ರುಚಿ ಇರಲಿಲ್ಲ.[45] ಹೀಗೆ ಜಲಪಾತ ಕಾದಂಬರಿಯು ಹುಟ್ಟಿದ ಬಗೆಯನ್ನು ತಮ್ಮ ಪುಸ್ತಕದಲ್ಲಿ ಎಸ್.ಎಸ್.ಭೈರಪ್ಪ ಅವರು ಹೇಳಿಕೊಂಡಿದ್ದಾರೆ. ಇವರ ಮನಸ್ಸಿನಲ್ಲಿ ಕುಳಿತ

[45] ಪುಟ 20–21, 'ಜಲಪಾತ'.ಎಸ್.ಎಲ್.ಭೈರಪ್ಪ

ಒಂದು ವಿಚಾರವನ್ನು ಸುಧೀರ್ಘವಾಗಿ ಆಲೋಚನೆಗೆ ಬಿಟ್ಟು ಅದರಿಂದ ಒಡಮೂಡುವ ವಿಚಾರಗಳಗನ್ನು ಕಾದಂಬರಿಯನ್ನಾಗಿ ರೂಪಿಸುತ್ತಾರೆ.ಅಂದರೆ ಇದರರ್ಥ ಒಂದು ಕಾದಂಬರಿಯ ವಿಷಯ ವಸ್ತು ಇವರನ್ನು ಕಾಡುತ್ತದೆ. ಬರೆಯುವಂತೆ ಪ್ರೇರೇಪಿಸುತ್ತದೆ. ಅದು ತಂತಾನೆ ಬರೆಸಿಕೊಳ್ಳುತ್ತದೆ ಎನ್ನಬಹುದು. ಯಾಕೆಂದರೆ, ಇವರು ಬೆಳೆದ ಪರಿಸರ ಇವರನ್ನು ಕಾಡುವಂತೆ ಮಾಡುತ್ತದೆ. ಆ ರೀತಿಯಾದ ಅನುಭವವನ್ನು ಅವರೇ ತಮ್ಮ ಆತ್ಮಕಥೆ ಭಿತ್ತಿಯಲ್ಲಿ ಹೇಳಿಕೊಂಡಿದ್ದಾರೆ.

ಇದೇ ರೀತಿಯ ಮಾತುಗಳನ್ನು ಜಲಪಾತ ಕಾದಂಬರಿಯಲ್ಲಿಯೂ ಕೂಡ ಪ್ರಸ್ತಾಪಕ್ಕೆ ಬರುತ್ತವೆ."ನನಗೆ ಯಾವಾಗಲೂ ಗರ್ಭಿಣಿ ಸ್ತ್ರೀಯರೆಂದರೆ ಒಂದು ಬಗೆಯ ಭಕ್ತಿ ಮೂಡುತ್ತದೆ. ದೇವಾಲಯದಲ್ಲಿ ವಿಗ್ರಹ ಕಂಡೊಡನೆ ಶಿರವು ತನಗೆ ತಾನೇ ಬಾಗುವಂತೆ ಗರ್ಭಿಣಿಯೊಬ್ಬಳನ್ನು ಕಂಡ ತತ್‌ಕ್ಷಣ ಉನ್ನತ ಭಾವವೊಂದು ಮನಸ್ಸನ್ನು ಆಕ್ರಮಿಸಿಕೊಳ್ಳುತ್ತದೆ. ಪ್ರಾಣಕ್ಕೆ ಗೌರವ ತೋರದ ಮನುಷ್ಯನಷ್ಟು ಅನಾಗರಿಕ ಮತ್ತೆ ಯಾರೂ ಇಲ್ಲ. ಅಹಿಂಸೆ ಎಂಬ ನೀತಿಯ ತಾತ್ವಿಕ ಮೂಲವೇ ಇದು".[46] ತಾವು ಬೆಳೆದು ಬಂದ ಪರಿಸರದೊಡನೆ ತಳಕು ಹಾಕಿಕೊಳ್ಳುವ ಇಂತಹ ಜೀವಂತಿಕೆಯುಳ್ಳ ಪ್ರಸಂಗಗಳು ನಮ್ಮನ್ನು ಸ್ತ್ರೀಯರೆಂದರೆ, ಗರ್ಭಿಣಿಯರೆಂದರೆ ಗೌರವ ಮೂಡುವಂತೆ ಮಾಡುತ್ತದೆ. ಸಹಜವಾಗಿ **ಮೂಡುವ** ಇಂತಹ ಭಾವನೆಗಳು ನಮ್ಮನ್ನು ಬೆಳೆಸುವಲ್ಲಿ, ಸಾಮಾಜಿಕ ಆರೋಗ್ಯ ಕಾಪಾಡುವಲ್ಲಿ ಅತ್ಯದ್ಭುತವಾದ ಪಾತ್ರ ನಿರ್ವಹಿಸುತ್ತವೆ. ಇವರು ಹೆಣ್ಣಿನ ಬಗ್ಗೆ ತೋರುವ ಅಭಿಮಾನ, ಆಕೆಯ ತಾಯ್ತನದ ಬಗೆಗೆ ತೋರುವ ಗೌರವ ಇದರ ಆಳ ಅಗಲಗಳನ್ನು ನೋಡಬೇಕಾದರೆ ಈ ವಾಕ್ಯವನ್ನು ಪರಿಶೀಲಿಸಬಹುದು: "ಹೆಣ್ಣು ಮಕ್ಕಳಿಗೆ ಎಷ್ಟೇ ವಯಸ್ಸಾಗಲಿ, ತಾಯಿ ಬದುಕಿರುವ ತನಕ ಬಾಲ್ಯ ಕಳೆದಿರುವುದಿಲ್ಲ. ಅಮ್ಮ ಸತ್ತ ಮೇಲೆ ನನಗೆ ಹಿಂದಿನ ಉಲ್ಲಾಸವೇ ಇಲ್ಲ. ಹುಡುಗುತನದ ಭಾವನೆಯೇ ಇಲ್ಲ. ಅದೇ ಹೆಂಗಸರಿಗೆ ತಮ್ಮ ಹೊಟ್ಟೆಯಲ್ಲಿ ಹುಟ್ಟಿದ ಒಂದು ಮಗು ಕಳೆದುಹೋದರೆ ಎಂತಹ ಚಿಕ್ಕ ವಯಸ್ಸಿನಲ್ಲಾದರೂ ಮುಪ್ಪು ಬಂದುಬಿಡುತ್ತೆ"[47] ಭೈರಪ್ಪನವರು ತಾಯಿಯ ಕಡೆಗೆ, ಹೆಣ್ತನದ ಬಗೆಗೆ ಅಪೂರ್ವವಾದ ಮಾತುಗಳನ್ನೇ ಆಡಿದ್ದಾರೆ. ಇಂತಹ ತೂಕವಾದ ಮಾತುಗಳು ಎಲ್ಲ ವಯಸ್ಸಿನವರಿಗೂ ಇಷ್ಟವಾಗುತ್ತವೆ. ಈ ರೀತಿಯ ಚಿತ್ರಣವನ್ನು ನಾವು ಗಮನವಿಟ್ಟೇ ಗ್ರಹಿಸಬೇಕಾಗುತ್ತದೆ. ಭೈರಪ್ಪನವರ ಭೇಟಿ ಸಾಧ್ಯವಾಗದಿದ್ದರೂ ಅವರು ಕಾದಂಬರಿಯನ್ನು

---

[46] ಪುಟ 160, 'ಜಲಪಾತ',ಎಸ್.ಎಲ್.ಭೈರಪ್ಪ

[47] ಪುಟ 167, 'ಜಲಪಾತ',ಎಸ್.ಎಲ್.ಭೈರಪ್ಪ

ಬರೆದ ಹಿನ್ನೆಲೆಯನ್ನು ಕಾದಂಬರಿಯ ಒಂದು ಮೂಲೆಯಲ್ಲಿ ಬಿಚ್ಚಿಟ್ಟಿರುವುದು ಗಮನಕ್ಕೆ ಬರದೇ ಇರಲಾರದು.

ಜಲಪಾತ ಕಾದಂಬರಿಯ ಮುನ್ನುಡಿಯಲ್ಲಿ ಬರೆದಿರುವಂತೆ "ಸೃಷ್ಟಿಶಕ್ತಿಯಿಂದ ವಿಜೃಂಬಿಸುವ ಜೀವನ ಪ್ರವೃತ್ತಿ ಮತ್ತು ಆ ಶಕ್ತಿಯನ್ನು ಹತ್ತಿಕ್ಕುವ ಜೀವನ ಪರಿಸ್ಥಿತಿಯ ತಾಕಲಾಟವೇ 'ಜಲಪಾತ'ದ ಕಥಾವಸ್ತು. ನೀರು ಮಣ್ಣಿನ ಶಕ್ತಿಯಿಂದ ಕಂಗೊಳಿಸುವ ವನಶ್ರೀ, ಗಂಡು ಹೆಣ್ಣುಗಳ ಮೂಲಶಕ್ತಿಯಾದ ಜೀವನವಿಕಾಸ, ಮತ್ತು ಬೌದ್ಧಿಕ ಸ್ತರದಲ್ಲಿ ಆವಿರ್ಭವಿಸುವ ಕಲಾಸೌಂದರ್ಯ– ಇವು ಮೂರು, ವಿವಿಧ ಸ್ತರಗಳಲ್ಲಿ ಪ್ರಕಟವಾಗುವ ಒಂದೇ ಮೂಲಶಕ್ತಿ ಎಂಬುದನ್ನು ಕಾದಂಬರಿಯ ಅಂಗಗಳಾಗಿ ಬೆಳೆದಿರುವ ಪ್ರತೀಕಗಳು ಎತ್ತಿ ತೋರಿಸುತ್ತವೆ. ಸಂಯೋಗದ ಕರೆ ಮತ್ತು ಕ್ರಿಯೆ, ಗರ್ಭದ ವಿಕಾಸ, ಜನನಕ್ಕೆ ಪೂರ್ವಭಾವಿಯಾದ ನೋವಿನ ಅನುಭವ, ಮೊದಲಾದ ಸೃಷ್ಟಿಯ ಹಲವು ಹಂತಗಳನ್ನು ಅನುಭವದ ಹೊಚ್ಚ ಹೊಸತನದಿಂದ ಭಾಷೆಯಲ್ಲಿ ಹಿಡಿದಿಡಲು ಅನುಕೂಲವಾಗುವಂತೆ ಕಾದಂಬರಿಯ ಕತೆಯು, ಅದರ ಮೂಲ ಪಾತ್ರಗಳಾದ ಒಂದು ಗಂಡು ಮತ್ತು ಅದರ ಹೆಣ್ಣಿನ ಸ್ವಂತ ಅನುಭವಗಳ ವರ್ಣನೆಯ ರೀತಿಯಲ್ಲಿ ಸಾಗುತ್ತದೆ"[48]

ಜಲಪಾತ ಕಾದಂಬರಿಯು ಭಾರತೀಯ ಸಂಸ್ಕೃತಿಯ ಪಾರಂಪರಿಕ ಮೌಲ್ಯಗಳನ್ನು ಕಟ್ಟಿಕೊಡುತ್ತವೆ. ಜೊತೆಗೆ ಕಾಲದ ಬದಲಾವಣೆಯಲ್ಲಿ ಆ ಮೌಲ್ಯಗಳನ್ನು ಎಷ್ಟರ ಮಟ್ಟಿಗೆ ಅನುಸರಿಸಬಹುದು, ಯಂತ್ರ ನಾಗರಿಕತೆಯ ಹುಚ್ಚು ಪ್ರವಾಹದ ಒತ್ತಡದಲ್ಲಿ ಆ ಮೌಲ್ಯಗಳನ್ನು ಉಳಿಸಿಕೊಂಡು ಹೊಸ ಸಿದ್ಧಾಂತಗಳನ್ನು ಕಾದಂಬರಿಯಲ್ಲಿ ವಿಶ್ಲೇಷಿಸಲ್ಪಟ್ಟಿದೆ. ಕೇವಲ ಭಾರತದಲ್ಲಿನ ಚಿತ್ರಣ ಮಾತ್ರವಾಗದೆ ವಸಹತುಸಾಹಿ ಆಡಳಿತಕ್ಕೆ ಒಳಪಟ್ಟ ಎಲ್ಲ ರಾಷ್ಟ್ರಗಳ ಪರಿಸ್ಥಿತಿಯನ್ನು ಅದು ಪ್ರತಿ ನಿಧಿಸುವುದನ್ನು ನೆನೆದಾಗ ಇಂತಹ ಚಿತ್ರಣದ ಸಾರ್ವತ್ರಿಕತೆಯ ಅರಿವಾಗುತ್ತದೆ.[49]

2. ಓದುಗರಸಂದರ್ಶನ:

ಇತ್ತೀಚಿನ ದಿನಗಳಲ್ಲಿ ಯಾವುದೇ ಒಂದು ಕಾದಂಬರಿ ಜನಪ್ರಿಯವಾಗಬೇಕೆಂದರೆ, ಅದಕ್ಕೆ ಬಹಳಷ್ಟು ಓದುಗರು ಇರಬೇಕು.ಆ ಕಾದಂಬರಿ ಬಾಯಿಂದ ಬಾಯಿಗೆ ಹರಡಬೇಕು.

---

[48] ಜಲಪಾತ ಮುನ್ನುಡಿ

[49] ಪುಟ 105–106, 'ಯುಗಸಾಕ್ಷಿ', ಎಸ್.ವಿ. ಶಾಂತಕುಮಾರಿ

ಮುಖ್ಯವಾಗಿ ಸಮೂಹ ಮಾಧ್ಯಮಗಳಲ್ಲಿ ಚರ್ಚಿತವಾಗಬೇಕು. ಇಷ್ಟನ್ನು ಹೊಂದಿದ್ದರೆ ಆ ಕಾದಂಬರಿ ಜನಪ್ರಿಯತೆಯನ್ನು ಪಡೆದುಕೊಳ್ಳುತ್ತದೆ ಜನರ ಮನಸನ್ನೂ ಮುಟ್ಟುತ್ತದೆ.

ಸಾಮಾಜಿಕ ಕಾದಂಬರಿಗಳು ಸಮಾಜವನ್ನು ತಿದ್ದುತ್ತವೆ. ಇವು ಬದಲಾವಣೆಯನ್ನು ತರಬಲ್ಲ ಮಾಧ್ಯಮ. ಜನರ ಮನಸಿನಲ್ಲಿ ಕುಳಿತು ಅಂತರಂಗದ ಬದಲಾವಣೆಯನ್ನು ತರಬಲ್ಲದು. ಜೊತೆಗೆ ವ್ಯಕ್ತಿಯನ್ನು ಪರಿಪೂರ್ಣವನ್ನಾಗಿಸುತ್ತದೆ. ಎಷ್ಟೋ ಸಮಾಜದಲ್ಲಿ ಈ ರೀತಿಯ ಕೆಲಸವನ್ನು ಕಾದಂಬರಿಗಳು ಮಾಡಿವೆ; ಮಾಡುತ್ತಲಿವೆ ಎಂದರೆ ತಪ್ಪಾಗಲಾರದು.

ಜನಪ್ರಿಯ ಕಾದಂಬರಿಗಳನ್ನು ಓದುವವರಲ್ಲಿ ಮಹಿಳೆಯರೇ ಹೆಚ್ಚು, ಅದರಲ್ಲೂ ಸಾಹಿತ್ಯಾಭಿರುಚಿಯುಳ್ಳ ಮಹಿಳೆಯರು ತಮ್ಮ ಬಿಡುವಿನ ಸಮಯದಲ್ಲಿ ಕಾದಂಬರಿಗಳನ್ನು ಓದಲು ಸದುಪಯೋಗಪಡಿಸಿಕೊಳ್ಳುತ್ತಾರೆ. ನಂತರದಲ್ಲಿ ಸಾಹಿತ್ಯ ವಿದ್ಯಾರ್ಥಿಗಳು. ಇವರು ಲೇಖಕನ ದೃಷ್ಟಿಕೋನ ಕಥಾವಸ್ತು ಶೈಲಿ ಮುಂತಾದವುಗಳನ್ನು ತಿಳಿಯಲು ಓದುತ್ತಾರೆ. ನಂತರದಲ್ಲಿ ವಿದ್ಯಾವಂತರ ಬಾಯಿಂದ ಬಾಯಿಗೆ ಹರಡಿ ಕಾದಂಬರಿಯನ್ನು ಓದಿಸಿಕೊಳ್ಳುತ್ತದೆ.

ಹೀಗೆ ಓದಿಸಿಕೊಳ್ಳುವುದು ಕೆಲವಷ್ಟೇ ಜನಪ್ರಿಯ ಲೇಖಕರ ಕಾದಂಬರಿಗಳು ಮಾತ್ರ. ಈ ಪ್ರಯತ್ನದಲ್ಲಿ ಭೈರಪ್ಪನವರ ಕಾದಂಬರಿ 'ಜಲಪಾತ' ಕುರಿತು ಓದುಗರ ಅಭಿಪ್ರಾಯವನ್ನು ಸಂಗ್ರಹಿಸುವುದು ನನ್ನ ಉದ್ದೇಶವಾಗಿತ್ತು. ಯಾಕೆಂದರೆ, ಈ ಕಾದಂಬರಿಯು ತುಂಬಾ ವೈಶಿಷ್ಟ್ಯವಾದದ್ದು, ಒಂದು ಬಾರಿ ಈ ಕಾದಂಬರಿಯನ್ನು ಹಿಡಿದು ಕುಳಿತರೆ ನಮ್ಮನ್ನು ಯಾವುದೋ ಲೋಕಕ್ಕೆ ಕರೆದೊಯ್ಯುತ್ತದೆ. ಇಲ್ಲಿಯ ವಿಚಾರಗಳು ನಮ್ಮನ್ನು ಮತ್ತೆ ಮತ್ತೆ ಮೆಲುಕು ಹಾಕುವಂತೆ ಮಾಡುತ್ತದೆ.

ಈ ಕಾದಂಬರಿಯಲ್ಲಿ ಹೇಳಿರುವ ವಿಷಯಗಳು ಇಂದಿಗೂ ಪ್ರಸ್ತುತವೆನಿಸಿವೆ. ಯಾವುದೇ ಒಂದು ಸಮಾಜದಲ್ಲಿ ನಡೆಯಬಹುದಾದ ನಡೆದಿರಬಹುದಾದ ಮತ್ತು ನಡೆದಿದ್ದ ಕಥಾವಸ್ತುವನ್ನು ಈ ಕಾದಂಬರಿ ಒಳಗೊಂಡಿದೆ. ಹಾಗಾಗಿಯೇ ಈ ಕಾದಂಬರಿಯನ್ನು ಓದಿದವರನ್ನು ಸಂದರ್ಶಿಸಲು ಇಚ್ಛಿಸಿದ್ದು, ಮತ್ತು ಅವರನ್ನು ಭೇಟಿ ಮಾಡಲು ಯತ್ನಿಸಿದ್ದು.

ಓದಗರನ್ನು ಭೇಟಿ ಮಾಡಲು ರಚಿಸಿಕೊಂಡಿದ್ದ ಪ್ರಶ್ನಾವಳಿ:

1. ಭೈರಪ್ಪನವರ ಬಗ್ಗೆ ನಿಮ್ಮ ಅಭಿಪ್ರಾಯವನ್ನು ತಿಳಿಸಿ?

2. ಭೈರಪ್ಪನವರ ಯಾವ ಯಾವ ಕಾದಂಬರಿಗಳನ್ನು ಓದಿದ್ದೀರಿ?

3. ಭೈರಪ್ಪನವರ ಕಾದಂಬರಿಗಳಲ್ಲಿ ನಿಮಗೆ ಇಷ್ಟವಾಗುವ ಅಂಶ ಯಾವುದು?

4. ಭೈರಪ್ಪನವರ ಕಾದಂಬರಿಗಳಲ್ಲಿ ಹೆಣ್ಣಿನ ಚಿತ್ರಣದ ಬಗ್ಗೆ ನಿಮಗೆ ಏನನ್ನಿಸುತ್ತದೆ?

5. ಭೈರಪ್ಪನವರನ್ನು ನೀವು ಯಾವ ದೃಷ್ಟಿಕೋನದಿಂದ ನೋಡುತ್ತೀರಿ?

6. ಭೈರಪ್ಪನವರು ತಮ್ಮ ಕಾದಂಬರಿಗಳಲ್ಲಿ ಸಮಕಾಲೀನ ವಸ್ತುವನ್ನು ಆಯ್ದುಕೊಂಡು ಕಾದಂಬರಿ ರಚಿಸುತ್ತಾರೆ ಎನಿಸುತ್ತದೆಯೇ?

7. ಜಲಪಾತ ಕಾದಂಬರಿ ನಿಮಗೆ ಇಷ್ಟವಾಗುವುದು ಯಾಕೆ?

8. ಜಲಪಾತ ಕಾದಂಬರಿಯಲ್ಲಿ ಚಿತ್ರಿತವಾಗಿರುವ ಪಾತ್ರಗಳು ಇಂದಿಗೂ ಪ್ರಸ್ತುತ ಎನಿಸುತ್ತವೆಯೇ?

9. ಜಲಪಾತ ಕಾದಂಬರಿಯಲ್ಲಿ ಕಂಡು ಬರುವ ಡಾ.ನಾಡಗೌಡ ಮತ್ತು ಶ್ರೀಪತಿಯವರ ಪಾತ್ರ ಸಮಾಜಕ್ಕೆ ಯಾವ ಸಂದೇಶವನ್ನು ಕೊಡುತ್ತದೆ?

10. ಭೈರಪ್ಪನವರ ಒಟ್ಟಾರೆ ಕೃತಿಗಳ ಬಗ್ಗೆ ನಿಮ್ಮ ಅಭಿಪ್ರಾಯ?

ಓದುಗರೇನೋ ಸುಲಭವಾಗಿ ಸಿಕ್ಕರು. ಅವರು ಭೈರಪ್ಪನವರನ್ನು ಓದಿ ಕೇಳಿ ತಿಳಿದುಕೊಂಡವರೇ ಆಗಿದ್ದರು. ಆದರೆ, ಅವರ ಜಲಪಾತ ಕಾದಂಬರಿಯನ್ನು ಓದಿದವರು ವಿರಳ. ಆದರೆ, ಇವರು ಭೈರಪ್ಪನವರ ಇತ್ತಿಚಿನ ಕಾದಂಬರಿಗಳನ್ನು ಓದಿದ್ದರು. ಸಮೂಹ ಮಾಧ್ಯಮಗಳಲ್ಲಿ ಬರುವ ವಿಮರ್ಷೆ, ಚರ್ಚೆ, ವಾದ-ವಿವಾದ ಎಲ್ಲವನ್ನು ಹೇಳಬಲ್ಲವರಾಗಿದ್ದರು. ಆದರೆ, ಜಲಪಾತ ಕಾದಂಬರಿಯನ್ನು ಓದಿದವರು ತುಂಬಾ ಕಡಿಮೆ ಜನರಿದ್ದರು. ಅದು ನನಗೆ ನಿರಾಶೆಯನ್ನೇ ತಂದಿತು.

ಜಲಪಾತ ಕಾದಂಬರಿಯನ್ನು ಓದಿದವರನ್ನು ಸಂದರ್ಶಿಸಿದಾಗ ಹತ್ತು ಜನರಲ್ಲಿ ಕೇವಲ ಇಬ್ಬರು ಮಂದಿ ಮಾತ್ರ ಓದಿದ್ದರು. ಈ ಓದುಗರಿಗೆ ಕಾದಂಬರಿಯಲ್ಲಿನ ಕೆಲವು ಪಾತ್ರಗಳು ಇಷ್ಟವಾದರೆ ಇನ್ನು ಕೆಲವು ಪಾತ್ರಗಳು ಇಷ್ಟವಾಗಿರಲಿಲ್ಲ. ಕಾರಣವನ್ನು

ಸ್ಪಷ್ಟವಾಗಿ ಹೇಳದಿದ್ದರೂ ತುಂಬಾ ಹಿಂದೆ ಈ ಕಾದಂಬರಿಯನ್ನು ಓದಿದ್ದರಿಂದ ಇದರ ಬಗ್ಗೆ ಅವರ ಸರಿಯಾದ ಗ್ರಹಿಕೆಯಾಗಿರಲಿಲ್ಲ ಎಂದು ಭಾವಿಸಬಹುದು. ಓದುಗರರಲ್ಲಿ ಕೆಲವರು ಭೈರಪ್ಪನವರೆಂದರೆ, ಅವರ ಕಾದಂಬರಿಗಳೆಂದರೆ, ಒಂದು ಬಾರಿ ಓದಿದಾಗ ಇವರ ಚಿಂತನೆಗಳು ಆಧುನಿಕವಾಗಿ ಕಂಡುಬಂದವು ಎನ್ನುತ್ತಾರೆ. ಕಾದಂಬರಿಯ ಪೂರ್ವಗ್ರಹ ಪೀಡಿತರಾಗಿ ಯೋಚಿಸಬಹುದು ಮತ್ತು ಅವರ ಆಧುನಿಕ ಚಿಂತನೆಗಳು ಓದುಗರಿಗೆ ಇಷ್ಟವಾಗದಿರಬಹುದು ಎಂಬುದು ಕಂಡುಬರುತ್ತದೆ.

ನಾವು ಸಂದರ್ಶಿಸಿದ ಮಿಕ್ಕುಳಿದ ಎಂಟು ಜನರಲ್ಲಿ ಜಲಪಾತ ಕಾದಂಬರಿಯನ್ನು ಓದದಿದ್ದರೂ ಇತ್ತೀಚಿಗೆ ಪ್ರಕಟಗೊಂಡಿರುವ ಅವರ ಕಾದಂಬರಿಗಳಾದ 'ಆವರಣ', 'ಕವಲು', 'ಯಾನ' ಓದಿಕೊಂಡಿದ್ದಾರೆ. ಇದರ ಬಗ್ಗೆ ಚರ್ಚಿಸಬಲ್ಲರು.ತಮ್ಮ ಅಭಿಪ್ರಾಯವನ್ನೂ ಹಂಚಿಕೊಳ್ಳಬಲ್ಲರು.ಆದರೆ, ಊಹಿಸಬಹುದಾದರೆ, ಜಲಪಾತ ಕಾದಂಬರಿಯು ಸುಮಾರು 48 ವರ್ಷಗಳ ಹಿಂದೆ ಪ್ರಕಟವಾಗಿರುವುದರಿಂದ ಓದುಗರು ಓದದಿರುವ ಸಾಧ್ಯತೆಯೂ ಇದೆ. ಈ ಕಾದಂಬರಿಯ ಬಗ್ಗೆ ಎಲ್ಲೂ ಯಾವ ವಿಮರ್ಷಕರೂ ಉಲ್ಲೇಖಿಸದೇ ಇರುವುದು, ಮತ್ತೊಂದು ಹಿನ್ನಡೆಯೆನ್ನಬಹುದು. ಆದರೆ, ಭೈರಪ್ಪನವರು ಆಯ್ದುಕೊಳ್ಳುವ ವಿಷಯಗಳ ಬಗ್ಗೆ ಮಿಶ್ರ ಪ್ರತಿಕ್ರಿಯೆ ಇದೆ. ಅವರು ಆಯ್ದುಕೊಳ್ಳುವ ವಿಷಯಗಳ ಬಗ್ಗೆ ಕೆಲವರಿಗೆ ಶ್ರೇಷ್ಠವೆನಿಸಿದರೆ, ಮತ್ತೆ ಕೆಲವರಿಗೆ ಶ್ರೇಷ್ಠವೆನಿಸುವುದಿಲ್ಲ. ಆದಾಗ್ಯೂ ಭೈರಪ್ಪನವರ ಕಾದಂಬರಿಗಳಿಗೆ ಓದುಗರು ಬಹಳಷ್ಟಿದ್ದಾರೆ ಎಂಬುದು ಕಂಡು ಬರುತ್ತದೆ. ಇವರು ಜನಪ್ರಿಯ ಲೇಖಕರಷ್ಟೇ ಅಲ್ಲದೆ ಜನ ಮೆಚ್ಚುವ ಲೇಖಕರು ಎನ್ನಬಹುದಾಗಿದೆ.

3. ಅಭಿಪ್ರಾಯ ರೂಪಿಸುವಿಕೆ

ಎಸ್.ಎಲ್.ಭೈರಪ್ಪನವರು ಕನ್ನಡದ ಕಾದಂಬರಿ ಲೋಕದಲ್ಲಿ ಶ್ರೇಷ್ಠ ಕಾದಂಬರಿಕಾರರಾಗಿದ್ದಾರೆ. ಇವರ ಸಾಹಿತ್ಯ ಸೇವೆಗೆ ಜ್ಞಾನಪೀಠ ಪ್ರಶಸ್ತಿಯೇ ದೊರಕಬೇಕಾಗಿತ್ತು. ಇವರ ಕಾದಂಬರಿಯಲ್ಲಿನ ವಿಷಯದ ವಿಸ್ತಾರ ಬಹುಮುಖವಾದದ್ದು. ಸಂಶೋಧನೆ, ಆಳ ಅಧ್ಯಯನದಿಂದ ರೂಪುಗೊಳ್ಳುವ ಇವರ ಕಾದಂಬರಿಗಳು ಸಮಾಜದ ಮಧ್ಯಮ ವರ್ಗದ ಜೀವನ ಸಂಘರ್ಷ ಪ್ರೀತಿ, ಬಡತನ, ನೋವು ನಲಿವುಗಳನ್ನು ಚಿತ್ರಿಸುತ್ತದೆ.

ಜಲಪಾತ ಕಾದಂಬರಿಯ ಬಗ್ಗೆ ಎಲ್ಲೂ ವಿಮರ್ಶೆಗಳು ಬಂದಿಲ್ಲ. ಈ ಕುರಿತಾದ ಚರ್ಚೆಗಳು ಕಂಡುಬರುವುದಿಲ್ಲ. ಸಾಕಷ್ಟು ಆಕರ ಗ್ರಂಥಗಳು ದೊರಕದಿರುವುದು ಕೂಡ ಒಂದು ಸಮಸ್ಯೆ ಎನ್ನಬಹುದು. ಇನ್ನಿತರ ಕಾದಂಬರಿಗಳಂತೆ ಜಲಪಾತ ಕಾದಂಬರಿಯು ಯಾಕೆ? ಅಷ್ಟೊಂದು ಜನಪ್ರಿಯವಾಗಿಲ್ಲ ಎಂದು ಯೋಚಿಸಿದರೆ, ಕಾರಣಗಳು ಅಸ್ಪಷ್ಟವಾಗಿದೆ. ಆದರೆ ಭೈರಪ್ಪನವರ ಇನ್ನಿತರ ಕಾದಂಬರಿಗಳಂತೆ ಜಲಪಾತ ಕಾದಂಬರಿಯು ಜನಪ್ರಿಯವಾಗಿಲ್ಲ ಎಂಬುದಂತೂ ಸತ್ಯ. ಆದರೂ ಜಲಪಾತ ಕಾದಂಬರಿಯ ಬಗ್ಗೆ ವಿಮರ್ಶೆಗಳು ಬರಬೇಕು. ಗೋಷ್ಠಿಗಳಲ್ಲಿ ಚರ್ಚಿತವಾಗಬೇಕು. ಸಹೃದಯರಿಗೆ ತಲುಪಿಸುವ ಕೆಲಸವನ್ನಾದರೂ ಮಾಡಬೇಕು. ಈ ಕೆಲಸಗಳ ಮೂಲಕ ಭೈರಪ್ಪನವರನ್ನು ಇನ್ನಷ್ಟು ಅರ್ಥಮಾಡಿಕೊಳ್ಳಬಹುದು.

"ಜಲಪಾತದಲ್ಲಿನ ಆಶಯಗಳ ಸಂಕೀರ್ಣತೆ, ಕಥಾನಕದ ಎರಡು ಪಾತ್ರಗಳೇ ಕಥೆಯನ್ನು ನಿರೂಪಿಸುವ ತಂತ್ರವಿನ್ಯಾಸ, ಕಥಾ ವಸ್ತುವಿನ ಅಂಶಗಳು ಪ್ರತೀಕಗಳಾಗಿ ಬೆಳೆದು ಬಂದಿರುವ ರೀತಿ, ಭೈರಪ್ಪನವರ, 'ತಂತು', 'ಪರ್ವ', 'ಮಂದ್ರ', 'ಸಾರ್ಥ', ಮುಂತಾದ ಬೃಹತ್ ಕಾದಂಬರಿಗಳಲ್ಲಿ ಅಳವಡಿಸಲ್ಪಟ್ಟಿರುವ, ಹೊಸ ಹೊಸ ವಿನ್ಯಾಸ, ಸಂರಚನಾ ವ್ಯವಸ್ಥೆ ಮತ್ತು ಸಂಕೀರ್ಣ ಆಶಯಗಳಿಗೆ ನಾಂದಿಯಾಗಿವೆಯೆನಿಸುತ್ತದೆ. 'ಜಲಪಾತ'ದ ಸಂರಚನಾ ವ್ಯವಸ್ಥೆಯಾದರೂ ಏನು? ಆಶಯಗಳಾದರೂ ಯಾವುವು? ಮೇಲುನೋಟಕ್ಕೆ, 'ಹೃದಯ', 'ಮಿದುಳು'ಗಳಿಲ್ಲದ ಮುಂಬೈ ಮಂಬೈ ಮಹಾನಗರದಲ್ಲಿ, ಮಧ್ಯಮ ವರ್ಗಕ್ಕೆ ಸೇರಿದ ಚಿತ್ರಕಲಾವಿದ ಶ್ರೀಪತಿ ಮತ್ತು ಸಂಗೀತದಲ್ಲಿ ಆಸಕ್ತಿಯುಳ್ಳ ಆತನ ಪತ್ನಿ ವಸು, ಸುಸೂತ್ರವಾಗಿ ಜೀವನ ನಡೆಸಲು ಪಡುವ ಬವಣೆಯ ಚಿತ್ರಣ. ಈ ದಂಪತಿಗೆ ಪ್ರತಿಯಾಗಿ ಎನ್ನುವಂತೆ ಪಶುವೈದ್ಯ, ತಳಿಶಾಸ್ತ್ರದಲ್ಲಿ ಸಂಶೋಧನೆ ಮಾಡಿ ಪಿಎಚ್.ಡಿ. ಪದವಿ ಪಡೆದಿರುವ ನಾಡಗೌಡ ಮತ್ತು ವಿದ್ಯಾವಂತೆ, ಸಂಪ್ರದಾಯಸ್ಥಳಾದ ಸುಧಾಬಾಯಿ ದಂಪತಿಯ ಚಿತ್ರಣ ಮೂಡಿ ಬಂದಿದೆ. ಮುಂಬೈನಂತಹ ಯಂತ್ರ ನಾಗರಿಕತೆಯಿಂದ ನಿಯಂತ್ರಿತವಾಗಿರುವ ನಗರದಲ್ಲಿ 'ಸೃಷ್ಟಿಶಕ್ತಿಯಿಂದ ವಿಜೃಂಭಿಸುವ ಜೀವನ ಪ್ರವೃತ್ತಿಯನ್ನು, ಸೃಜನಾತ್ಮಕ ಸೃಷ್ಟಿಕ್ರಿಯೆಯನ್ನು ಹತ್ತಿಕ್ಕಿ ಬದುಕಬೇಕಾಗುವ ಪರಿಸ್ಥಿತಿಯನ್ನು ಅನಾವರಣಗೊಳಿಸುವ 'ಜಲಪಾತ', ಕಾಲಮಾನದ ಬದಲಾವಣೆಯೊಂದಿಗೆ ಭಾರತದ ಗ್ರಾಮಗಳೂ ಸಹ, ಮುಂಬೈನ ಅವಕಾಶ ಅನುಕೂಲಗಳಿರದೇ, ಮತ್ತೊಂದು ರೀತಿಯ ಮುಂಬೈ

ಆಗಿರುವುದನ್ನೂ ಚಿತ್ರಿಸುತ್ತದೆ."[50] ಎಂದು ಜಲಪಾತ ಕಾದಂಬರಿಯನ್ನು ಕುರಿತು ಎಸ್.ವಿ.ಶಾಂತಕುಮಾರಿಯವರು ತಮ್ಮ 'ಯುಗಸಾಕ್ಷಿ' ಪುಸ್ತಕದಲ್ಲಿ ಹೇಳಿದ್ದಾರೆ.

ಭೈರಪ್ಪನವರ ಚಿಂತನೆಗಳನ್ನು ತಿರಸ್ಕರಿಸುವುದು ಸುಲಭ ಸಾಧ್ಯವಲ್ಲ. ಏಕೆಂದರೆ ಅವರ ಕಾದಂಬರಿ ವಸ್ತು ವಿಷಯ ಸಮಾಜದ ಅಂದಿನ ಕೈಗನ್ನಡಿಯಾಗಿದೆ.ಈ ಸಂದರ್ಭದಲ್ಲಿ ಜಲಪಾತ ಕಾದಂಬರಿಯನ್ನು ಮೊದಲ ಬಲ್ಲಿ ಸಂಗೀತ ಮತ್ತು ಚಿತ್ರಕಲೆಯನ್ನು ಬೆಸೆದಿರುವುದು ಅಪರೂಪ ಎನಿಸಿತು.

ಭೈರಪ್ಪನವರ ಕಾದಂಬರಿಗಳನ್ನು ಜನ ಯಾಕೆ ಓದುವುದಿಲ್ಲ ಎನ್ನುವುದಕ್ಕಿಂತ ಆ ಜನಪ್ರಿಯ ಕಾದಂಬರಿಗಳು ಜನರ ಕೈಗೆ ಸಿಗದಿರುವುದು ಕೂಡ ಒಂದು ಸಂಗತಿ ಎಂದೇ ಭಾವಿಸಬಹುದು. ಯಾಕೆಂದರೆ, ಭೈರಪ್ಪನವರ ಕಾದಂಬರಿಗಳು, ಮುದ್ರಣಗೊಳ್ಳುತ್ತಿದ್ದ ಹಾಗೆಯೇ ಖರ್ಚಾಗಿ ಬಿಡುತ್ತವೆ. ಸಾಮಾನ್ಯವರ್ಗದವರನ್ನು ತಲುಪದಿರಲು ಮತ್ತೊಂದು ಕಾರಣವೆಂದರೆ, ಗ್ರಂಥಾಲಯಗಳಲ್ಲಿ ಓದುಗರಿಗೆ ಭೈರಪ್ಪನವರ ಪುಸ್ತಕಗಳು ದೊರಕದೇ ಇರುವುದು ಕೂಡ ಒಂದು.ಇನ್ನು ಕನ್ನಡಿಗರು, ಪುಸ್ತಕಗಳನ್ನು ಕೊಂಡು ಓದುವ ಸಂಸ್ಕೃತಿ ಬೆಳೆಯಬೇಕು.

ಓದುಗರು ಜಲಪಾತ ಕಾದಂಬರಿಯನ್ನು ಓದದೇ ಭೈರಪ್ಪನವರನ್ನು ಅರ್ಥಮಾಡಿಕೊಳ್ಳುವುದು ಅಪೂರ್ಣವೆನಿಸುತ್ತದೆ. ಹಾಗಾಗಿ ಓದುಗರು ಜಲಪಾತ ಕಾದಂಬರಿಯನ್ನು ಓದಿ ಅರ್ಥೈಸುವುದು ಇಂದಿನ ಆಧುನಿಕ ಪ್ರಪಂಚದಲ್ಲಿ ಅತ್ಯಗತ್ಯವೆನಿಸುತ್ತದೆ. ವಸ್ತು ಮತ್ತು ತಂತ್ರದ ದೃಷ್ಟಿಯಿಂದಲೂ ಇದೊಂದು ಭಿನ್ನ ಬಗೆಯ ಕಾದಂಬರಿ ಕನ್ನಡ ಕಾದಂಬರಿ ಲೋಕದಲ್ಲಿ 'ಜಲಪಾತ'ಬಹುಕಾಲನಿಲ್ಲಬಲ್ಲ ಕಾದಂಬರಿ ಎಂಬುದರಲ್ಲಿ ಎರಡು ಮಾತಿಲ್ಲ. ಹಾಗೆಯೇ ಭೈರಪ್ಪನವರು ಕನ್ನಡ ನಾಡು ಕಂಡ ಅಪರೂಪದ ವ್ಯಕ್ತಿ. ಕನ್ನಡ ಸಾಹಿತ್ಯ ಕಂಡ ಅಪರೂಪದ ಲೇಖಕರು ಎಂದರೆ ತಪ್ಪಾಗಲಾರದು.

---

[50] ಪುಟ 107, 'ಯುಗಸಾಕ್ಷಿ', ಎಸ್.ವಿ. ಶಾಂತಕುಮಾರಿ

ಸಮಾರೋಪ

ಎಸ್.ಎಲ್.ಭೈರಪ್ಪನವರು ಕಾದಂಬರಿಕಾರರಾಗಿ ಜನಪ್ರಿಯರು.ಕನ್ನಡ ಸಾಹಿತ್ಯದಲ್ಲಿ ಕಾದಂಬರಿಗಳು ವಿಭಿನ್ನವಾಗಿ ಕಂಡು ಬರುತ್ತವೆ. ಇವರು ಸಮಕಾಲೀನ ಲೇಖಕರಲ್ಲಿ ಬಹುಮುಖ ಪ್ರತಿಭಾನಿತ್ವರು. ಬಹುಮುಖ್ಯರು. ಇವರು ಬರೆದಿರುವ ಕಾದಂಬರಿಗಳು ಒಂದಕ್ಕೊಂದು ವಿಭಿನ್ನವಾಗಿವೆ. ಜನಪ್ರಿಯವಾಗಿವೆ. ವಿಭಿನ್ನ ವಿಷಯ ವಸ್ತುವನ್ನು ಒಳಗೊಂಡಿವೆ. ಓದುಗ ವರ್ಗದವರಲ್ಲಿ ವಿಶಿಷ್ಟ ಛಾಪನ್ನೂ ಮೂಡಿಸಿವೆ. ಇವರ ಕಾದಂಬರಿಗಳು ಭಾರತೀಯ ಭಾಷೆಗಳಿಗೆ ಅನುವಾದಗೊಂಡು ಜನಪ್ರಿಯತೆಯನ್ನು ಪಡೆದು, ಇತರೆ ಭಾಷೆಗಳಲ್ಲಿಯೂ ಅಭಿಮಾನಿಗಳನ್ನು ಸೃಷ್ಟಿಸಿಕೊಂಡಿದ್ದಾರೆ.

ಎಸ್.ಎಲ್. ಭೈರಪ್ಪನವರ ಕಾದಂಬರಿಗಳು ಜನಪ್ರಿಯತೆಯ ಉತ್ತುಂಗ ಶಿಖರದಲ್ಲಿರುವಂತೆಯೇ, ವಿವಾದವನ್ನೂ ಹುಟ್ಟಿಹಾಕಿವೆ. ಯಾಕೆಂದರೆ, ಅವರು ಆಯ್ದುಕೊಳ್ಳುವ ವಿಷಯ ವಸ್ತುವೇ ವಿಭಿನ್ನವಾಗಿದ್ದು, ಸಮಾಕಾಲೀನ ಜಗತ್ತಿಗೆ ಸವಾಲು ಒಡ್ಡುವಂತಹ ರೀತಿಯಲ್ಲಿಯೇ ಚಿತ್ರಿಸಲ್ಪಟ್ಟಿರುತ್ತವೆ.

ಜಲಪಾತ ಕಾದಂಬರಿಯು ವಿಶಿಷ್ಟ ಬಗೆಯದು. ಈ ಕಾದಂಬರಿಯು ಮಧ್ಯಮ ವರ್ಗದ ಜೀವನ ಚಿತ್ರಣವನ್ನು ಒಳಗೊಂಡಿದೆ. ಇಲ್ಲಿನ ಪಾತ್ರಗಳು ನಮ್ಮನ್ನು ಸೆಳೆಯುತ್ತವೆ. ಚಿಂತನೆಗೆ ಹಚ್ಚುತ್ತವೆ. ಬಹುಕಾಲ ನಮ್ಮ ಮನಸನ್ನು ಆವರಿಕೊಳ್ಳುತ್ತದೆ. ಮಧ್ಯಮ ವರ್ಗದ ಸಮಾಜದಲ್ಲಿ ನಡೆಯುವ ದೈನಂದಿನ ಜೀವನದ ಆಗುಹೋಗುಗಳು, ದಿನ ನಿತ್ಯದ ಬದುಕಿನ ಜಂಜಾಟಗಳು, ಪ್ರತಿಭೆ ಮತ್ತು ಜೀನದ ನಡುವಿನ ಹೊಯ್ದಾಟಗಳು ನಮ್ಮ ಮನಸ್ಸನ್ನು ಕೇಂದ್ರೀಕರಿಸುತ್ತವೆ. ಮುಂಬೈ ನಗರ ಜೀವನ, ಹಳ್ಳಿಯ ಬದಲಾದ ಜೀವನ ಚಿತ್ರಣಗಳು ನಮ್ಮನ್ನು ವಿಚಲಿತಗೊಳಿಸುತ್ತವೆ.ಸಾವು ನೋವು ತಾಯಿ ಮಗಳ ಪ್ರೀತಿ ನಮ್ಮ ಮನಸ್ಸನ್ನು ಆಳವಾಗಿ ಕಲಕಿ ಬಿಡುತ್ತವೆ. ಪ್ರೇಮ ಜೀವನ ಪ್ರೀತಿಯನ್ನು ಒಳಗೊಂಡ ಈ ಕಾದಂಬರಿ ತುಂಬಾ ವಿಶಿಷ್ಟವಾದುದು ಎಂದರೆ ತಪ್ಪಾಗಲಾರದು.

ಭೈರಪ್ಪನವರು ತಮ್ಮ ಕಾದಂಬರಿಯಲ್ಲಿ ಮುಂಬೈ ಜೀವನ, ಅಲ್ಲಿನ ಜನರ ಜೀವನ ಚಿತ್ರಣ, ಮತ್ತು ಅಗ್ರಹಾರ ಹಳ್ಳಿಯ ಜೀವನ ಚಿತ್ರಣವನ್ನು ಕಟ್ಟಿಕೊಟ್ಟಿದ್ದಾರೆ.ಮುಂಬೈ ಜೀವನ ಹೇಗೆ ಹಳ್ಳಿ ಜೀವನಕ್ಕಿಂತ ಭಿನ್ನವಾದುದು ಎಂಬುದನ್ನು ವಾಸ್ತವಾಂಶಗಳೊಂದಿಗೆ ನಮ್ಮ

ಮುಂದೆ ನಿರೂಪಿಸುತ್ತಾ ಹೋಗಿದ್ದಾರೆ. ಇದು ಕೇವಲ ಕಥೆಯಲ್ಲದೆ ನಮ್ಮ ಜೀವಕ್ಕೂ ತುಂಬಾ ಸನಿಹವಾಗಿ ಹಾದುಹೋಗುವುದು ಕಾದಂಬರಿಯ ಹೆಗ್ಗಳಿಕೆ.

ಈ ಕಾದಂಬರಿಯಲ್ಲಿ ಭೈರಪ್ಪನವರು ಪ್ರಮುಖವಾಗಿ ನಾಲ್ಕು ಪಾತ್ರಗಳನ್ನು ಕಟ್ಟಿಕೊಡುತ್ತಾರೆ. ಅವುಗಳೆಂದರೆ, ಶ್ರೀಪತಿ, ವಸು, ಡಾ.ನಾಡಗೌಡ ಮತ್ತು ಸುಧಾಬಾಯಿ. ಈ ನಾಲ್ಕೂ ಪಾತ್ರಗಳು ತಮ್ಮ ಪಾಡಿಗೆ ತಾವು ಪುಟದಿಂದ ಪುಟಕ್ಕೆ ವಿಸ್ತಾರಗೊಳ್ಳುತ್ತಾ ಹೋಗುತ್ತವೆ. ನಾವು ನಿರೀಕ್ಷಿಸಿರದ ತಿರುವುಗಳನ್ನು ಕೊಡುತ್ತವೆ. ಕಾದಂಬರಿಯ ಇನ್ನೊಂದು ವಿಶೇಷವೆಂದರೆ ಪ್ರತಿಯೊಂದು ಅಧ್ಯಾಯಕ್ಕೂ ಮುನ್ನ ಕುಂಚ ಮತ್ತು ತಂಬೂರಿಯ ಚಿತ್ರಗಳನ್ನು ಕೊಟ್ಟಿರುವುದು. ಇದು ಶ್ರೀಪತಿ ಮತ್ತು ವಸುಳ ಪ್ರತೀಕವಾಗಿ ನಿಲ್ಲುತ್ತವೆ. ಶ್ರೀಪತಿ ಕುಂಚದ ಮೂಲಕ ಚಿತ್ರಕಲೆಯನ್ನು ಆಯ್ಕೆಮಾಡಿಕೊಳ್ಳುತ್ತಾನೆ. ವಸು ಸಂಗೀತ ಕಲಿಯಲು ಮೊದಲಿನಿಂದಲೂ ಆಸಕ್ತಿಯಿದ್ದು, ಮುಂಬೈಗೆ ಹೋದ ನಂತರವೂ ಸಂಗೀತ ಕಲಿಯಲು ಪಾಠಶಾಲೆಗೆ ಸೇರಿಕೊಳ್ಳುವುದು, ಮತ್ತೆ ವಾಪಸ್ಸು ಊರಿಗೆ ಬಂದಾಗ ಅಗ್ರಹಾರದಲ್ಲಿಯೂ ಸಂಗೀತ ಪುನರಾರಂಭಿಸಲು ಪ್ರಯತ್ನಿಸುವುದು ಕಂಡುಬರುತ್ತದೆ. ಈ ಕಾದಂಬರಿಯಲ್ಲಿ ಮತ್ತೊಂದು ವ್ಯಕ್ತವಾಗುವ ಅಂಶವೆಂದರೆ, ಕಾದಂಬರಿಯ ನಾಯಕ ಮತ್ತು ನಾಯಕಿಯ ನಡುವೆ ಅನ್ಯೋನ್ಯ ಸಂಬಂಧವಿರುವುದು.

ಕಾದಂಬರಿಯ ವಿಶೇಷವೆಂದರೆ, ಶ್ರೀಪತಿ ಮತ್ತು ವಸುವಿನ ಸ್ವಗತದ ರೂಪದಲ್ಲಿಯೇ ಕಾದಂಬರಿ ಸಾಗುವುದು. ಇದು ತಂತ್ರಗಾರಿಕೆಯ ದೃಷ್ಟಿಯಿಂದ ಅಭೂತಪೂರ್ವವಾದ ಯಶಸ್ಸನ್ನು ಪಡೆದುಕೊಂಡಿದೆ. ಈ ಕಾದಂಬರಿಗೆ ಆಧಾರ ಸ್ತಂಭಗಳಾಗಿ ಮತ್ರಾನಿ ಮತ್ತು ರೆಬೆಲೋ ಪಾತ್ರಗಳು ಸೇರಿಕೊಳ್ಳುತ್ತವೆ. ಇವು ಅಲ್ಲಲ್ಲಿ ಬಂದು ಹೋಗುವ ಪಾತ್ರಗಳಾದರೂ ಮುಂಬೈ ಜೀವನದ ಶೈಲಿ ಪ್ರೀತಿ ಪ್ರೇಮದ ವೈಫಲ್ಯ ಬದುಕಿನ ನಾಟಕೀಯತೆ, ಎಲ್ಲವನ್ನು ಒಂದುಗೂಡಿಸಿ ಕೊಡುತ್ತದೆ. ಈ ಕಾದಂಬರಿಯಲ್ಲಿ ಭೈರಪ್ಪನವರು ಪರಕಾಯ ಪ್ರವೇಶಗೊಂಡವರಂತೆ ಜಲಪಾತದ ಚಿತ್ರಣವನ್ನು ಕೊಡುವಾಗ ಕಾವ್ಯಾತ್ಮಕವಾಗಿ ಮನ ಸೆಳೆಯುತ್ತಾರೆ. ಸಂಗೀತ ಚಿತ್ರಕಲೆಯನ್ನು ಒಟ್ಟಿಗೆ ಸೇರಿಸಿ ಜಲಪಾತದ ಚಿತ್ರಣವನ್ನು ಶ್ರೀಪತಿ ಮತ್ತು ವಸುವಿನ ಮನೋ ಲಹರಿಯಲ್ಲಿ ನಮ್ಮನ್ನು ಸೆಳೆದೊಯ್ಯುತ್ತದೆ. ಕಾದಂಬರಿಯಲ್ಲಿ ಅಲ್ಲಲ್ಲಿ ಕಂಡು ಬರುವ ಲೈಂಗಿಕ ಅಭಿವ್ಯಕ್ತಿಗಳು ವೈಶಿಷ್ಟ್ಯವಾಗಿವೆ.

ಕಾದಂಬರಿಯಲ್ಲಿ ನಮ್ಮನ್ನು ಹೆಚ್ಚು ಸೆಳೆಯುವ ಪಾತ್ರವಾಗಿ ನಿಲ್ಲುವುದು ಡಾ.ನಾಡಗೌಡ ಅವರದು. ಅವರು ನಡೆದುಕೊಳ್ಳುವ ರೀತಿ ಮೊದಲಿಗೆ

ಆಘಾತಕರವಾದದುದಾದರೂ, ಅವರ ಅಭಿಲಾಷೆ ರೋಗಮುಕ್ತ ಸಮಾಜವನ್ನಾಗಿಸುವುದು. ಸದೃಢ ಸಮಾಜವನ್ನು ಪುನರ್ ರೂಪಿಸುವುದು. ಇವರ ಆಧುನಿಕ ಚಿಂತನೆಯನ್ನು ಕಾದಂಬರಿಯೊಳಕ್ಕೆ ಎಳೆದು ತರುತ್ತಾರೆ. ಒಂದು ಕಡೆ ಆಧುನಿಕ ಚಿಂತನೆ, ಇನ್ನೊಂದು ಕಡೆ ಸಂಪ್ರದಾಯಬದ್ಧ ಮನಸ್ಸು, ಕೊನೆಗೆ ಗೆಲ್ಲುವುದು ಸಮಾಜದ ರೀತಿ ನೀತಿಗಳೊಂದಿಗೆ ಬದುಕಿದ ವ್ಯಕ್ತಿ ಮಾತ್ರ ಎಂಬುದು ಸಾಬೀತಾಗುತ್ತದೆ.

ಕಾದಂಬರಿಯಲ್ಲಿ ಇನ್ನೊಂದು ಮಹತ್ವದ ಅಂಶ ಚಿತ್ರಿತವಾಗಿರುವುದೆಂದರೆ, ಅವರು ಮದುವೆಗೆ ಕೊಟ್ಟಿರುವ ಪ್ರಮುಖ ಸ್ಥಾನ. ಗಂಡ ಹೆಂಡತಿ ನಡುವಿನ ಬಾಂಧವ್ಯ ಹಾಗೂ ಬಿಟ್ಟಿರಲಾರದ ಸಂಬಂಧ. ಇದು ಹಿಂದು ಧರ್ಮದ ಅಡಿಪಾಯದಂತೆ ನಮ್ಮನ್ನು ದಿಕ್ಕು ತಪ್ಪದಂತೆ ಸರಿದಾರಿಗೆ ತಂದು ನಿಲ್ಲಿಸುತ್ತದೆ.

ಭೈರಪ್ಪನವರ ಕೃತಿಗಳು ಎಲ್ಲ ಅರ್ಥದಲ್ಲಿಯೂ ಕುತೂಹಲವನ್ನು ಕೆರಳಿಸುತ್ತವೆ. ಇವರ ಕಾದಂಬರಿಗಳು ಸಾಮಾನ್ಯ ಓದುಗನಿಂದ ಹಿಡಿದು ಪಂಡಿತ ಪಾಮರರವರೆಗೆ ಬಹುಜನಪ್ರಿಯವಾಗಿವೆ. ಕನ್ನಡ ಸಾಹಿತ್ಯ ಲೋಕದಲ್ಲಿ ಭದ್ರವಾಗಿ ನೆಲೆಯೂರಿವೆ. ಆದರೆ, ಭೈರಪ್ಪನವರ ಸೃಜನಶೀಲ ಕೃತಿಗಳನ್ನು ಕನ್ನಡ ಸಾರಸ್ವತಲೋಕ ಸಹೃದಯ ಓದುಗರು ಸಮಗ್ರವಾಗಿ ಗ್ರಹಿಸಲು ಸಾಧ್ಯವಾಗಿಲ್ಲ. ಒಂದು ವೇಳೆ ಇವರ ಕೃತಿಗಳನ್ನು ಗ್ರಹಿಸಿದ್ದೇ ಆದರೆ ವ್ಯಕ್ತಿ ತನ್ನ ಜೀವನದಲ್ಲಿ ಪರಿಪೂರ್ಣ ಬದಲಾವಣೆಯನ್ನು ತಂದುಕೊಳ್ಳಬಲ್ಲ. ಸಮಾಜಮುಖಿಯಾಗಿ ಚಿಂತಿಸುವುದನ್ನು ರೂಢಿಸಿಕೊಳ್ಳಬಲ್ಲ. ಸಮಾಜವನ್ನು ಹತ್ತಿರದಿಂದ ಅರ್ಥಮಾಡಿಕೊಂಡು ಜೀವಿಸುವ ಕಲೆಯನ್ನು ಒಲಿಸಿಕೊಳ್ಳಬಹುದು.

ಸಾಮಾನ್ಯವಾಗಿ ಜನಪ್ರಿಯತೆ ಮತ್ತು ಶ್ರೇಷ್ಠತೆ ಒಟ್ಟೊಟ್ಟಿಗೆ ಹೋಗುವುದಿಲ್ಲ. ಆದರೆ ಇದಕ್ಕೊಂದು ಅಪವಾದವೆಂದರೆ ಎಸ್.ಎಲ್.ಭೈರಪ್ಪನವರು.ಇವರಂತಹ ಜನಪ್ರಿಯ ಲೇಖಕರು ಕನ್ನಡದಲ್ಲಿ ಮತ್ತೊಬ್ಬರು ಸಿಗಲಾರರು ಎಂದು ಭಾವಿಸಬಹುದು.ಏಕೆಂದರೆ ಇವರ ಕೃತಿಗಳು ಕನ್ನಡದ ಗಡಿಯನ್ನು ದಾಟಿ ಅನ್ಯ ಭಾಷೆಗಳಿಗೆ ಪಯಣಿಸಿವೆ. ಸಂಸ್ಕೃತವೂ ಸೇರಿದಂತೆ ಇತರ ಬಹುತೇಕ ಭಾಷೆಗಳಿಗೆ ಅನುವಾದಗೊಂಡಿವೆ. ಈ ರೀತಿಯಲ್ಲಿ ಅನುವಾದಗೊಂಡಮತ್ತೊಬ್ಬ ಕನ್ನಡ ಲೇಖಕನಿಲ್ಲ. ಈ ದೃಷ್ಟಿಯಿಂದ ಭೈರಪ್ಪನವರು ಕೇವಲ ಕನ್ನಡ ಲೇಖಕರಷ್ಟೇ ಅಲ್ಲದೇ ಭಾರತೀಯ ಲೇಖಕ ಎನ್ನಬಹುದು.

ಕಾದಂಬರಿಯನ್ನು ಏಕೈಕ ಅಭಿವ್ಯಕ್ತಿ ಮಾಧ್ಯಮವನ್ನಾಗಿ ಮಾಡಿಕೊಂಡವರು ಎಸ್.ಎಲ್.ಭೈರಪ್ಪ. ಅವರ ಕಥನ ಕಲೆ ಅತ್ಯಾಧ್ಭುತವಾದದ್ದು. ಇವರ ಕಾದಂಬರಿಗಳಲ್ಲಿ ಓದಿಸಿಕೊಂಡು ಹೋಗುವ ಗುಣ ಆಯಸ್ಕಾಂತದಂತಿದೆ. ಸಂಗೀತದಲ್ಲಿ ಭೈರಪ್ಪನವರಿಗೆ ಒಲವು ಇರುವುದರಿಂದ ಅವರ ಕೃತಿಗಳಲ್ಲಿ ಸಂಗೀತ ಗುಣ ವಿಶೇಷವಾಗಿ ಗೋಚರಿಸುತ್ತದೆ.

ಭೈರಪ್ಪನವರು ತಮ್ಮ ಆತ್ಮ ಸಾಕ್ಷಿಗೆ ತೋಚಿದ್ದನ್ನು ಬರೆಯುತ್ತಾರೆ. ಇವರು ಕಥೆಗೆ ಬೇಕಾದ ಒಂದು ಚಿತ್ರಣವನ್ನು ಅನುಭವಿಸಿ ನೋಡಿ ತಿಳಿದುಕೊಂಡು ಬರೆಯುತ್ತಾರೆ.ಇವರು ಓದುಗರನ್ನು ವಂಚಿಸಲು ಏನನ್ನೂ ಬರೆಯುವುದಿಲ್ಲ. ಬದಲಿಗೆ ಸಮಾಜ ಬದಲಾಗುತ್ತಿರುವ ರೀತಿಯನ್ನು ಗ್ರಹಿಸಿ ಓದುಗರಿಗೆ ಉಣಬಡಿಸುತ್ತಾರೆ.ಇವರ ಕಾದಂಬರಿಗಳಲ್ಲಿಜಾತಿ ಸಂಘರ್ಷಕ್ಕಿಂತ ಮೌಲ್ಯ ಸಂಘರ್ಷ ಕಾಣಬಹುದು.ಇವರ ಕೃತಿಗಳನ್ನು ಬಿಡಿ ಬಿಡಿಯಾಗಿ ತೆಗೆದುಕೊಂಡು ವಿಶ್ಲೇಷಿಸುವುದಕ್ಕಿಂತ, ಇಡಿಯಾಗಿ ತೆಗೆದುಕೊಂಡು ವಿಮರ್ಶಿಸಿದರೇ ಒಳ್ಳೆಯದು. ಭೈರಪ್ಪನವರ ಕಾದಂಬರಿಗಳಲ್ಲಿ ಕಂಡುಬರುವ ವಿಷಯ ವಸ್ತುಗಳು ತುಂಬಾ ಸಂಕೀರ್ಣವಾದುದ್ದರಿಂದ ಮನಸನ್ನು ಪೂರ್ವಗ್ರಹಗಳಿಂದ ಮುಕ್ತಗೊಳಿಸಿಕೊಂಡು ಓದಬೇಕು.

ಭೈರಪ್ಪನವರ ಕಾದಂಬರಿಗಳು ಓದುಗನಿಗೆ ಹೊಸ ಅನುಭವನ್ನು ಕೊಡುತ್ತದೆ. ಓದುಗನಿಗೆ ಅಪಾರ ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಜಲಪಾತ ಕಾದಂಬರಿಯನ್ನು ನನ್ನದೇ ದೃಷ್ಟಿಕೋನದಿಂದ ನೋಡಲು ಯತ್ನಿಸಿದ್ದೇನೆ. ಭೈರಪ್ಪನವರ ಇತ್ತೀಚಿನ ಕಾದಂಬರಿಗಳಂತೆ 'ಜಲಪಾತ' ಕಾದಂಬರಿಯು ಹೆಚ್ಚಾಗಿ ವಿಮರ್ಷೆಗೆ ಒಳಗಾಗಿಲ್ಲ. ಇಂತಹ ಕಾದಂಬರಿಯು ಸಹೃದಯ ಓದುಗನಿಂದ ಓದಲ್ಪಡಬೇಕು. ಓದುಗ ಮತ್ತು ವಿಮರ್ಷಕರಿಂದ ಪರಿಶೀಲನೆಗೆ ಒಳಗಾಗಬೇಕು ಎಂಬುದೇ ನನ್ನ ಅಭಿಲಾಷೆಯಾಗಿದೆ. ಆದ್ದರಿಂದಲೇ ಜಲಪಾತ ಕಾದಂಬರಿಯನ್ನು ನನ್ನ ಸಂಪ್ರಂಥಕ್ಕೆ ಆಯ್ದುಕೊಂಡಿದ್ದೇನೆ. ಈ ಕಾದಂಬರಿ ಇಂದಿನ ಬದಲಾಗುತ್ತಿರುವ ಆಧುನಿಕ ಸಮಾಜದಲ್ಲಿ ಜನರಿಗೆ ತುಂಬಾ ಅಪ್ಯಾಯಮಾನವಾಗಬಲ್ಲದು.

ಆಕರ ಗ್ರಂಥಗಳು

01	ಹೊಸಗನ್ನಡ ಸಾಹಿತ್ಯ ಚರಿತ್ರೆ (2011)	ಪ್ರೊ. ಎಲ್. ಎಸ್. ಶೇಷಗಿರಿರಾವ್ ಅಂಕಿತ ಪುಸ್ತಕ 53, ಶ್ಯಾಮಸಿಂಗ್ ಕಾಂಪ್ಲೆಕ್ಸ್, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು–560004.
02	ನಾನೇಕೆ ಬರೆಯುತ್ತೇನೆ? (2014)	ಎಸ್.ಎಲ್.ಭೈರಪ್ಪ, ಸಾಹಿತ್ಯ ಭಂಡಾರ ಜಂಗಮ ಮೇಸ್ತ್ರಿ ಗಲ್ಲಿ, ಬಳೇಪೇಟೆ (ಮಲಬಾರ್ ಹೋಟೆಲ್ ಎದುರು ಗಲ್ಲಿ) ಬೆಂಗಳೂರು–560053.
03	ಡಾ॥ ಎಸ್.ಎಲ್. ಭೈರಪ್ಪ ಅವರ ಆವರಣ– ಒಂದು ವಿಶ್ಲೇಷಣೆ (2011)	ಸೋಮಶೇಖರ ಮಾಲಿಪಾಟೀಲ್, ಅಭಿಜಿತ್ ಪ್ರಕಾಶನ ಮುಂಬಯಿ.
04	ಭಿತ್ತಿ (2007)	ಸಾಹಿತ್ಯ ಭಂಡಾರ, ಬಳೇಪೇಟೆ ಬೆಂಗಳೂರು.
05	ಡಾ॥ಎಸ್.ಎಲ್.ಭೈರಪ್ಪನವರ ಕಾದಂಬರಿಗಳಲ್ಲಿ ಪ್ರಮುಖ ಪಾತ್ರಗಳು (2015)	ಸಂಪಾದನೆ: ಗೌರಿಸುಂದರ್, ಸುಂದರ ಪ್ರಕಾಶನ, ನಂ–43, 5ನೇ ತಿರುವು, ಅ.ನ.ಸು ರಸ್ತೆ, ಹನುಮಂತನಗರ, ಬೆಂಗಳೂರು–560019.
06	ಭೈರಪ್ಪನವರ ಸಾಹಿತ್ಯದಲ್ಲಿ ಮೌಲ್ಯಪ್ರಜ್ಞೆ (2013)	ಸಂಪಾದಕರು: ಶತಾವಧಾನಿ ಡಾ॥ಆರ್.ಗಣೇಶ್, ವಿಜಯ ಕಾಲೇಜು, ಜಯನಗರ, 4ನೇ ಬಡಾವಣೆ, ಬೆಂಗಳೂರು–560011.
07	ಎಸ್.ಎಲ್.ಭೈರಪ್ಪ – ಬದುಕು– ಬರಹ (1999)	ನಾಗರಾಜ್ ನೀರಗುಂದ, ಅಪೂರ್ವ ಸಾಹಿತ್ಯ ಪ್ರಕಾಶನ, ನಂ–9/22 'ಎ' ಮಹಡಿ, 2ನೇ ಮುಖ್ಯರಸ್ತೆ, 10ನೇ ಅಡ್ಡರಸ್ತೆ, ಜಯನಗರ 1ನೇ ಬ್ಲಾಕ್, ಪೂರ್ವ, ಬೆಂಗಳೂರು–560011.
08	ಯುಗಸಾಕ್ಷಿ ಭೈರಪ್ಪರ ಕೃತಿಗಳ ಅವಲೋಕನ (2009)	ಎಲ್.ವಿ.ಶಾಂತಕುಮಾರಿ, ಸಾಹಿತ್ಯ ಭಂಡಾರ, ಜಂಗಮ ಮೇಸ್ತ್ರಿ ಗಲ್ಲಿ, ಬಳೇಪೇಟೆ, ಬೆಂಗಳೂರು–560053.